18 December 2025 Thursday SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಹಬ್ಬ,ಹರಿದಿನಗಳು
ನಮ್ಮನ್ನು ಶಿಸ್ತಿನಲ್ಲಿ ಬಂಧಿಸಿಡುತ್ತವೆ! ಏಕೆಂದರೆ
ಆ ದಿನ ನಾವು ಸಮಯಕ್ಕೆ ತಕ್ಕ ಹಾಗೆ
ಪರಿಪೂರ್ಣತೆಯಿಂದ ಕೆಲಸಗಳನ್ನು
ಮಾಡಿಕೊಳ್ಳುತ್ತೇವೆ!
ಸ್ನೇಹಾ ಆನಂದ್

**ಒಂದೊಳ್ಳೆ ಮಾತು**

ಉತ್ತಮ
ಎನಿಸಿಕೊಳ್ಳಲು ಬಹಳ
ಸಮಯ ಬೇಕು ಆದರೆ
ಕೆಟ್ಟವನಾಗಲು ಅಲ್ಪ
ಸಮಯ ಸಾಕು..."
ಮೈಲಾರ ಸಾವಿತ್ರಿಬಾಯಿ

info.varthaman@gmail.com

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 55 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

# ಅಧಿವೇಶನದಲ್ಲಿ 'ಗೃಹಲಕ್ಷ್ಮಿ ಕೋಲಾಹಲ'

## ಸದನಕ್ಕೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ತಪ್ಪು ಮಾಹಿತಿ ಆರೋಪ । ವಿಪಕ್ಷ ಶಾಸಕರ ಸಭಾತ್ಯಾಗ

**ಬೆಂಗಳೂರು:** ವಿಧಾನಸಭೆ ಅಧಿವೇಶನದಲ್ಲಿ ಗೃಹಲಕ್ಷ್ಮಿ ಯೋಜನೆ ಹಣ ಬಿಡುಗಡೆ ವಿಚಾರದಲ್ಲಿ ಆಡಳಿತ ಮತ್ತು ವಿಪಕ್ಷ ಸದಸ್ಯರ ನಡುವೆ ಮಾತಿನ ಚಕಮಕಿ ನಡೆಯಿತು. ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಅವರು ಸದನಕ್ಕೆ ತಪ್ಪು ಮಾಹಿತಿ ನೀಡಿದ್ದಾರೆಂದು ಆರೋಪಿಸಿ ಬುಧವಾರ ಬಿಜೆಪಿ ಸದಸ್ಯರು ಸಾಮೂಹಿಕವಾಗಿ ಸಭಾತ್ಯಾಗ ಮಾಡಿ ಹೊರನಡೆದರು.

ರಾಜ್ಯ ಸರ್ಕಾರ ಗೃಹಲಕ್ಷ್ಮಿ ಯೋಜನೆಯಡಿ 1.26 ಕೋಟಿ ಫಲಾನುಭವಿಗಳಿಗೆ ಎರಡು ತಿಂಗಳ ಕಂತುಗಳನ್ನು ಪಾವತಿಸಿಲ್ಲ. ಆದರೂ ಸಚಿವರು ಸದನಕ್ಕೆ ತಪ್ಪು ಮಾಹಿತಿ ನೀಡಿ ಸದನವನ್ನು ತಪ್ಪು ದಾರಿಗೆ ಎಳೆದಿದ್ದಾರೆ. ಅಲ್ಲದೆ, ಸದನದ ಕ್ಷಮೆ ಕೇಳುತ್ತಿಲ್ಲ ಎಂದು ಆರೋಪಿಸಿ ವಿರೋಧ ಪಕ್ಷ ಬಿಜೆಪಿ ಶಾಸಕರು ಸಭಾತ್ಯಾಗ ಮಾಡಿದರು.

ಗೃಹಲಕ್ಷ್ಮಿ ಯೋಜನೆಯ ಪಾವತಿ ಸ್ಥಿತಿಯ ಬಗ್ಗೆ ರಾಜ್ಯ ಸರ್ಕಾರ ಸದನಕ್ಕೆ ತಪ್ಪು ಮಾಹಿತಿ ನೀಡಿದೆ ಎಂದು ಬಿಜೆಪಿಯವರು ಪ್ರತಿಭಟನೆ ನಡೆಸಿದರು. ಬಿಜೆಪಿ ಸದಸ್ಯರು ಸದನದ ಬಾವಿಗಿಳಿದು ಘೋಷಣೆಗಳನ್ನು ಕೂಗಿದರು. ಹೀಗಾಗಿ ಕಲಾಪವನ್ನು ಒಂದು ಗಂಟೆಗೂ ಹೆಚ್ಚು ಕಾಲ ಮುಂದೂಡಲಾಯಿತು.

ಆಗಸ್ಟ್‌ವರೆಗಿನ ಎಲ್ಲಾ ಕಂತುಗಳನ್ನು ಯೋಜನೆಯಡಿ ಪಾವತಿಸಲಾಗಿದೆ ಎಂದು ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಅವರು ಬಿಜೆಪಿ ಶಾಸಕ ಮಹೇಶ್ ಟೆಂಗಿನಕಾಯಿ ಅವರ ಪ್ರಶ್ನೆಗೆ ಮಾಹಿತಿ ನೀಡಿದ್ದರು. ಆದರೆ ಈ ವರ್ಷದ ಫೆಬ್ರವರಿ ಮತ್ತು ಮಾರ್ಚ್ ತಿಂಗಳ ಕಂತುಗಳನ್ನು ಪಾವತಿಸಲಾಗಿಲ್ಲ ಎಂದು ಬಿಜೆಪಿ ಶಾಸಕರು ಆರೋಪಿಸಿದರು. ಕಳೆದ ಮೂರು ದಿನಗಳಿಂದ ಸಚಿವರಿಂದ ವಿವರಣೆಯನ್ನು ಕೇಳಲಾಗುತ್ತಿತ್ತು. ಆದರೆ ಅವರು ಮಾಹಿತಿ ನೀಡಲಿಲ್ಲ ಎಂದು ಬಿಜೆಪಿ ಶಾಸಕರು ಗದ್ದಲ ಮಾಡಿದರು. ಅಧಿವೇಶನ ಪ್ರಾರಂಭವಾದ ತಕ್ಷಣ, ವಿರೋಧ ಪಕ್ಷದ ಸದಸ್ಯರು ಸಚಿವರ ಪುಟ 2ಕ್ಕೆ



### ಹೆಬ್ಬಾಳ್ಕರ್ ಬೆನ್ನಿಗೆ ನಿಂತ ಡಿಕೆಶಿ

ಅಧಿವೇಶನದಲ್ಲಿ ಗದ್ದಲ ಆರಂಭವಾದಾಗ ಲಕ್ಷ್ಮಿ ಹೆಬ್ಬಾಳ್ಕರ್ ರಕ್ಷಣೆಗೆ ಬಂದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕೇಂದ್ರ ಬಜೆಟ್‌ನಲ್ಲಿ ಸುಳ್ಳು ಹೇಳಿದ್ದಕ್ಕಾಗಿ ಬಿಜೆಪಿ ಕ್ಷಮೆಯಾಚಿಸಬೇಕು ಎಂದು ಹೇಳಿದರು. ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಬಜೆಟ್‌ನಲ್ಲಿ ಭದ್ರಾ ಮೇಲ್ದಂಡೆ ನೀರಾವರಿ



ಯೋಜನೆಗೆ 5,300 ಕೋಟಿ ರೂ.ಗಳನ್ನು ಘೋಷಿಸಿದ್ದರು. ಆದರೆ ಕರ್ನಾಟಕಕ್ಕೆ ಹಣವನ್ನು ನೀಡಲಾಗಿಲ್ಲ. ನೀವು ಅದನ್ನೂ ಪ್ರಶ್ನಿಸಬೇಕು ಎಂದು ಶಿವಕುಮಾರ್ ಆಗ್ರಹಿಸಿದರು.

ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಇದಕ್ಕೆ ಉತ್ತರಿಸಿ, ಬಿಜೆಪಿ ಸದಸ್ಯರು ಮಾತ್ರವಲ್ಲದೆ ಪುಟ 2ಕ್ಕೆ

### 'ಮಹಿಳೆ ಕಾರ್ಡ್' ಪ್ರಯೋಗ

**ಬೆಳಗಾವಿ:** ನಾನು ಮಹಿಳೆ ಎಂಬ ಕಾರಣಕ್ಕೆ ಬಿಜೆಪಿಯವರು ಆರೋಪ ಮಾಡಿ ಗದ್ದಲ ಮಾಡುತ್ತಿದ್ದಾರೆಂದು ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಸದನದಲ್ಲಿ ಆರೋಪಿಸಿದರು. ಇದಕ್ಕೆ ಬಿಜೆಪಿ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದರು. ಆರ್.ಅಶೋಕ್ ಮಾತನಾಡಿ, ಮಹಿಳೆ ಶೆಲ್ಟರ್ ಬಳಸಿ ಆರೋಪದಿಂದ ತಪ್ಪಿಸಿಕೊಳ್ಳುವುದು ಬೇಡ. ನೀವು ತಪ್ಪು ಮಾಹಿತಿ ನೀಡಿರುವುದರಿಂದ ಕ್ಷಮೆ ಕೇಳಿ ಎಂದು ಪಟ್ಟು ಹಿಡಿದರು. ಆದರೆ, ಪ್ರತಿಪಕ್ಷಗಳ ಆಗ್ರಹದಂತೆ ಸದನದ ಕ್ಷಮೆ ಕೋರಲಿಲ್ಲ. ಲಕ್ಷ್ಮಿ ಹೆಬ್ಬಾಳ್ಕರ್ ಬಳಸಿದ ಮಹಿಳೆ ಎಂಬ ಪದವನ್ನು ಕಡತದಿಂದ ತೆಗೆಯುವುದಾಗಿ ಸ್ಪೀಕರ್ ಭರವಸೆ ನೀಡಿದರು.

ಮುಖ್ಯಮಂತ್ರಿಗಳು ಈಗಾಗಲೇ ಸದನದಲ್ಲಿ ಈ ವಿಷಯವನ್ನು ಆದಷ್ಟು ಶೀಘ್ರದಲ್ಲಿ ಪರಿಹರಿಸುವುದಾಗಿ ಹೇಳಿದ್ದಾರೆ. ಹಣವನ್ನು ಬೇರೆ ಕಡೆಗೆ ವರ್ಗಾಯಿಸಲಾಗಿಲ್ಲ ಅಥವಾ ಯಾವುದೇ ದುರುಪಯೋಗವಾಗಿಲ್ಲ ಎಂದು ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಸ್ಪಷ್ಟಪಡಿಸಿದರು. ಎರಡು ತಿಂಗಳ ಹಣ ಪಾವತಿಯಲ್ಲಿ ವ್ಯತ್ಯಯ ಆಗಿರುವುದು ಪರಿಶೀಲನೆ ವೇಳೆ ಬೆಳಕಿಗೆ ಬಂದಿದೆ. ಮುಂದಿನ ದಿನಗಳಲ್ಲಿ ಅದನ್ನು ಸರಿಪಡಿಸುವುದಾಗಿ ಅವರು ತಿಳಿಸಿದರು. ತಮ್ಮ ಮಾತಿನಿಂದ ಯಾರಿಗಾದರೂ ನೋವಾಗಿದ್ದರೆ ವಿಷಾದ ವ್ಯಕ್ತಪಡಿಸುವುದಾಗಿ ಲಕ್ಷ್ಮೀ ತಿಳಿಸಿದರು. ಇದರಿಂದ ಯಾರಿಗಾದರೂ ಬೇಸರವಾಗಿದ್ದರೆ ವಿಷಾದ ವ್ಯಕ್ತಪಡಿಸುವುದಾಗಿ ಹೇಳಿದರು. ವಿಪಕ್ಷ ಬಿಜೆಪಿ ಸದಸ್ಯರು ಕ್ಷಮೆ ಕೇಳುವಂತ ಪಟ್ಟು ಹಿಡಿದರು.

ಬಿಜೆಪಿ ಶಾಸಕ ಎಸ್.ಸುರೇಶ್ ಕುಮಾರ್ ಮಾತನಾಡಿ, ವಿಕ್ಟಿಮ್ ಕಾರ್ಡ್ ಬಳಸುವುದನ್ನು ಸಚಿವರು ನಿಲ್ಲಿಸಿ. ಲಿಂಗ, ಜಾತಿ ಮತ್ತು ಧಾರ್ಮಿಕ ತಾರತಮ್ಯದ ವಿಷಯವನ್ನು ಪ್ರಸ್ತಾಪಿಸದಂತೆ ಹೇಳಿದರು. ಏಕೆಂದರೆ ಇದು 1.26 ಕೋಟಿ ಜನರಿಗೆ ಸಂಬಂಧಿಸಿದ ವಿಷಯವಾಗಿದೆ. ಸಚಿವರ ಉತ್ತರ ತೃಪ್ತಿಕರವಾಗಿಲ್ಲ ಎಂದು ಟೀಕಿಸಿದರು.

### ತಪ್ಪು ಒಪ್ಪಿಕೊಂಡ ಹೆಬ್ಬಾಳ್ಕರ್

**ಬೆಳಗಾವಿ:** ಗೃಹಲಕ್ಷ್ಮಿ ಯೋಜನೆ ಹಣದ ವಿಚಾರವಾಗಿ ವಿಧಾನಸಭೆ ಅಧಿವೇಶನದಲ್ಲಿ ತಪ್ಪು ಮಾಹಿತಿ ನೀಡಿ ವಿರೋಧ ಪಕ್ಷಗಳ ತೀವ್ರ ವಿರೋಧಕ್ಕೆ ಗುರಿಯಾಗಿರುವ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಬುಧವಾರ ಸದನದಲ್ಲಿ ಸ್ಪಷ್ಟನೆ ನೀಡಿದರು. ಪುಟ 2ಕ್ಕೆ




### ಕೃಷಿಕರಿಗೆ ಹೆಣ್ಣು ಸಿಕ್ತಿಲ್ಲ: 25 ಲಕ್ಷ ನೀಡಲು ಆಗ್ರಹ

**ಬೆಳಗಾವಿ:** ಕೃಷಿ ಮಾಡುತ್ತಿರುವ ಗ್ರಾಮೀಣ ಭಾಗದ ಯುವಕರಿಗೆ ಮದುವೆಗೆ ಹೆಣ್ಣು ಸಿಕ್ಕುತ್ತಿಲ್ಲ. ಹೀಗಾಗಿ ಸರ್ಕಾರ ಇಂತಹ ಯುವಕರಿಗೆ ವಿಶೇಷ ಯೋಜನೆ ಜಾರಿ ಮಾಡಬೇಕು. 10ರಿಂದ 25 ಲಕ್ಷ ರೂ.ವರೆಗೆ ಸಹಾಯಧನ ನೀಡಬೇಕು ಎಂದು ಕಾಂಗ್ರೆಸ್ ಸದಸ್ಯ ಪುಟ್ಟಣ್ಣ ಆಗ್ರಹಿಸಿದರು.

ವಿಧಾನ ಪರಿಷತ್ ಶೂನ್ಯ ವೇಳೆಯಲ್ಲಿ ಬುಧವಾರ ಮಾತನಾಡಿದ ಅವರು, ಗ್ರಾಮೀಣ ಭಾಗದಲ್ಲಿ ಕೃಷಿ ಮಾಡುವ ಯುವಕರಿಗೆ ಸರ್ಕಾರ ಯೋಜನೆ ಘೋಷಣೆ ಮಾಡಬೇಕು. ಹೆಣ್ಣುಮಕ್ಕಳು ಸಿಗದೇ ತಾಲೂಕಿಗೊಂದು ಮಠ ಕಟ್ಟಿಕೊಡಿ ಅಂತ ಸಾಮಾಜಿಕ

### ಕೃಷಿ ಯಂತ್ರೋಪಕರಣ ಖರೀದಿ: ಹೆಚ್ಚುವರಿ 250 ಕೋಟಿಗೆ ಬೇಡಿಕೆ

**ಬೆಳಗಾವಿ:** ರಾಜ್ಯದಲ್ಲಿ ಕೃಷಿ ಸಲಕರಣೆ ಮತ್ತು ಯಂತ್ರೋಪಕರಣ ಖರೀದಿ ಸಹಾಯಧನಕ್ಕೆ ರೈತರಿಂದ ಹೆಚ್ಚಿನ ಬೇಡಿಕೆ ಬಂದಿರುವ ಹಿನ್ನೆಲೆಯಲ್ಲಿ ಹೆಚ್ಚುವರಿ 250 ಕೋಟಿ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಕೃಷಿ ಸಚಿವ ಚಲುವರಾಯಸ್ವಾಮಿ ತಿಳಿಸಿದರು. ಪುಟ 2ಕ್ಕೆ

### ಉರುಳಿಗೆ ಸಿಕ್ಕಿ ಹುಲಿ ಸಾವು

**ಬೆಂಗಳೂರು:** ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಕಾಫಿ ಎಸ್ಟೇಟ್‌ನಲ್ಲಿ ಉರುಳಿಗೆ ಸಿಲುಕಿ ಐದು ವರ್ಷದ ಗಂಡು ಹುಲಿ ಸಾವನ್ನಪ್ಪಿದೆ.

ಕುಶಾಲನಗರದ ಶ್ರೀಮಂಗಲ ಗ್ರಾಮದ ಎಸ್ಟೇಟ್‌ನಲ್ಲಿ ಇಂದು ಬೆಳಿಗ್ಗೆ ಸ್ಥಳೀಯರು ಹುಲಿ ಮೃತದೇಹವನ್ನು ನೋಡಿದ್ದಾರೆ. ಹುಲಿ ಮಂಗಳವಾರ ಸಾವನ್ನಪ್ಪಿದೆ ಎನ್ನಲಾಗಿದೆ. ಎರಡು ದಿನಗಳಿಂದ ಬಿಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದ ಹುಲಿ ಉಸಿರುಗಟ್ಟಿ ಸಾವನ್ನಪ್ಪಿದೆ. ಅದರ ಕುತ್ತಿಗೆಯ ಸುತ್ತ 2 ಇಂಚು ಆಳದ ಗಾಯವಿತ್ತು. ಅದರ ಎಲ್ಲಾ ಕೋರೆಹಲ್ಲುಗಳು ಮತ್ತು ಉಗುರುಗಳು ಹಾಗೆಯೇ ಇದ್ದವು. ಮರಣೋತ್ತರ ಪರೀಕ್ಷೆ ಪುಟ 2ಕ್ಕೆ

## 15 ವರ್ಷ ಮೀರಿದ ವಾಹನ ಗುಜರಿಗೆ

### ರಾಜ್ಯದಲ್ಲಿಯೂ ಕಾನೂನು ಜಾರಿಗೆ ಚಿಂತನೆ: ರಾಮಲಿಂಗಾರೆಡ್ಡಿ ಮಾಹಿತಿ

**ಬೆಳಗಾವಿ:** ರಾಜ್ಯದಲ್ಲಿಯೂ 15 ವರ್ಷ ಮೀರಿದ ವಾಹನಗಳನ್ನು ಗುಜರಿಗೆ ಹಾಕುವ ಬಗ್ಗೆ ಕಾನೂನು ಜಾರಿಗೆ ತರಲು ರಾಜ್ಯ ಸರ್ಕಾರ ಗಂಭೀರ ಚಿಂತನೆ ನಡೆಸಿರುವ ಬಗ್ಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅಧಿವೇಶನದಲ್ಲಿ ಮಾಹಿತಿ ನೀಡಿದ್ದಾರೆ.

ದೆಹಲಿಯಲ್ಲಿ ಈಗಾಗಲೇ ಜಾರಿಯಲ್ಲಿರುವ ಕಾನೂನು ಜಾರಿಗೆ ಸರ್ಕಾರ ಮುಂದಾಗಿದೆ. ರಾಜ್ಯದ ಎಲ್ಲಾ ಸರಕಾರಿ ಇಲಾಖೆ, ನಿಗಮ, ಮಂಡಳಿ, ನಗರಸಭೆ, ಸರ್ಕಾರದ ಇತರೆ ಅಧೀನ ಸಂಸ್ಥೆಗಳಿಗೆ ಸೇರಿದ ನೋಂದಣಿಯಾಗಿ ಹದಿನೈದು ವರ್ಷ ಮೀರಿದ ವಾಹನಗಳನ್ನು ಕಡ್ಡಾಯವಾಗಿ ರಿಜಿಸ್ಟರ್ಡ ವೆಹಿಕಲ್ ಪಿಂಗ್ ಫೆಸಿಲಿಟಿಗಳಲ್ಲಿ ಆಪ್ ಮಾಡಲು ರಾಜ್ಯ ಸರಕಾರ ಅನುಮೋದನೆ ನೀಡಿದೆ ಎಂದು ಅವರು ಬುಧವಾರ ತಿಳಿಸಿದ್ದಾರೆ.

ವಿಧಾನ ಪರಿಷತ್ತಿನಲ್ಲಿ ಸದಸ್ಯರಾದ ಗೋವಿಂದ ರಾಜು ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಚಿವರು, ಎನ್.ಐ.ಸಿ. ಅವರು ಒದಗಿಸಿರುವ ಮಾಹಿತಿ ಪ್ರಕಾರ ದಿನಾಂಕ:04-12-2025ರ ಅಂತ್ಯಕ್ಕೆ 15 ವರ್ಷಗಳು ಮೀರಿದ (ಸಾರಿಗೆ ಸಂಸ್ಥೆಗಳ ಬಸ್ಸುಗಳನ್ನು ಹೊರತುಪಡಿಸಿ) 18,552 ಸರ್ಕಾರಿ ವಾಹನಗಳ ನೋಂದಣಿಯನ್ನು ಕೇಂದ್ರ ಸರಕಾರ ವಾಹನ್ ಪೋರ್ಟಲಿನಲ್ಲಿ ರದ್ದುಪಡಿಸಿದೆ. 18,552 ವಾಹನಗಳ ಪೈಕಿ ಪುಟ 2ಕ್ಕೆ

### ಬೌದ್ಧ ಬಿಕ್ಕುಗಳಿಗೆ ಮಾಸಾಸನ

**ಬೆಳಗಾವಿ:** ಸರ್ಕಾರದಿಂದ ಬೌದ್ಧ ಬಿಕ್ಕುಗಳಿಗೆ ಮಾಸಿಕ ಗೌರವಧನ ನೀಡಲಾಗುವುದು ಎಂದು ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.




ವಿಧಾನ ಪರಿಷತ್ ಪ್ರಶ್ನೋತ್ತರ ಕಲಾಪದಲ್ಲಿ ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ಕೆ.ಶಿವಕುಮಾರ್ ಪ್ರಶ್ನೆ ಕೇಳಿದರು. ಬುದ್ಧ ವಿಹಾರಗಳನ್ನು ನಡೆಸಲು ಸರ್ಕಾರ ಗ್ರ್ಯಾಂಟ್ ಕೊಡಬೇಕು. 80 ಬುದ್ಧ ವಿಹಾರಗಳು ಇವೆ. 200 ಬೌದ್ಧ ಬಿಕ್ಕುಗಳು ಇದರಲ್ಲಿ ಕೆಲಸ ಮಾಡ್ತಿದ್ದಾರೆ. ಇವರಿಗೆ ಮಾಸಿಕ ಸಂಭಾವನೆ ನೀಡಬೇಕು. ಮಾಸಿಕ 6 ಸಾವಿರ ರೂ. ಬೌದ್ಧ ಬಿಕ್ಕುಗಳಿಗೆ ಕೊಡಬೇಕು. ಸೇವಕರಿಗೆ 5 ಸಾವಿರ ಕೊಡಬೇಕು ಎಂದು ಆಗ್ರಹಿಸಿದರು. ಇದಕ್ಕೆ ಸಚಿವ ಜಮೀರ್ ಪರವಾಗಿ ರಾಮಲಿಂ ಗಾರೆಡ್ಡಿ ಉತ್ತರ ಪುಟ 2ಕ್ಕೆ

## ಕಾವೇರಿ-2 ತಂತ್ರಾಂಶ ಸಮಸ್ಯೆ ಪರಿಹಾರ

### ಇ-ಸ್ವತ್ತು ಡೇಟಾ ಲಿಂಕ್ ತಾಂತ್ರಿಕ ತೊಂದರೆ: ಸಚಿವ ಕೃಷ್ಣ ಬೈರೇಗೌಡ

**ಬೆಳಗಾವಿ:** ರಾಜ್ಯದಲ್ಲಿ ಕಾವೇರಿ-2 ಮತ್ತು ಇ-ಸ್ವತ್ತು ಡಿಜಿಟಲ್ ಡೇಟಾವನ್ನು ಪರಸ್ಪರ ಲಿಂಕ್ ಮಾಡುವಲ್ಲಿ ಉಂಟಾಗಿರುವ ತಾಂತ್ರಿಕ ತೊಂದರೆಯನ್ನು ಶೀಘ್ರ ಸರಿಪಡಿಸಲಾಗುವುದು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ವಿಧಾನ ಪರಿಷತ್ತಿನಲ್ಲಿ ಸದಸ್ಯರಾದ ಡಿ.ಎಸ್.ಅರುಣ್ ಅವರ ಪ್ರಶ್ನೆಗೆ ಬುಧವಾರ ಪ್ರತಿಕ್ರಿಯಿಸಿದ ಸಚಿವರು, ಕಾವೇರಿ 2.0 ತಂತ್ರಾಂಶದಲ್ಲಿ ವಿಭಾಗಪತ್ರ ಹಾಗೂ ದಾನ ಪತ್ರಗಳ ನೋಂದಣಿ ಸ್ಥಗಿತವಾಗಿಲ್ಲ. ಆರ್‌ಟಿಸಿ, ಮೋಜಣಿ ನಕ್ಷೆ, ಇ-ಸ್ವತ್ತು ಖಾತಾ, ಇ-ಆಸ್ತಿ ಖಾತಾ ಹಾಗೂ ಯುಎಲ್‌ಎಮ್‌ಎಸ್ ಖಾತಾ ಹೊಂದಿರುವ ಸ್ವತ್ತುಗಳ ವಿಭಾಗಪತ್ರ ಹಾಗೂ ದಾನಪತ್ರಗಳು ಎಂದಿನಂತೆ ನೋಂದಣಿ ಆಗುತ್ತಿವೆ ಎಂದು ತಿಳಿಸಿದರು.



ಕಾವೇರಿ 2.0 ತಂತ್ರಾಂಶದಲ್ಲಿ 2024-25ನೇ ಸಾಲಿನಲ್ಲಿ 1,15,068 ವಿಭಾಗ ಪತ್ರಗಳು ಮತ್ತು 1,39,134 ದಾನ ಪತ್ರಗಳು ಮತ್ತು 2025-26ನೇ ಸಾಲಿನಲ್ಲಿ 79,515 ವಿಭಾಗ ಪತ್ರಗಳು ಹಾಗೂ 92,618 ದಾನಪತ್ರಗಳು ನೋಂದಣಿ ಆಗಿವೆ ಎಂದು ಮಾಹಿತಿ ನೀಡಿದರು.

ಸರ್ಕಾರದ ಉಪವಿಭಾಗಾಧಿಕಾರಿಗಳ ಎಸಿ ಕೋರ್ಟ್ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳನ್ನು ಕಳೆದ ಎರಡೂವರೆ ವರ್ಷದಲ್ಲಿ ರಾಜ್ಯ ಸರ್ಕಾರ ಶೆ.80ರಷ್ಟು ಇತ್ಯರ್ಥಗೊಳಿಸಿದೆ. ಇನ್ನುಳಿದ ಬಾಕಿ ಪ್ರಕರಣಗಳನ್ನು ಸಹ ಇತ್ಯರ್ಥಗೊಳಿಸಲು ಸರ್ಕಾರ ಬದ್ಧವಾಗಿದೆ ಎಂದು ಹೇಳಿದರು.

ವಿಧಾನ ಪರಿಷತ್ತಿನಲ್ಲಿ ನಡೆದ ಪ್ರಶ್ನೋತ್ತರ ವೇಳೆ ಸದಸ್ಯರಾದ ರಾಮೋಜಿ ಗೌಡ ಅವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಚಿವರು, ಹೆಚ್ಚು ಪ್ರಕರಣಗಳು ಬಾಕಿಯಿರುವ ಜಿಲ್ಲೆಗಳಲ್ಲಿನ ಉಪವಿಭಾಗಾಧಿಕಾರಿಗಳ ನ್ಯಾಯಾಲಯಗಳಲ್ಲಿ ದಾಖಲಾಗಿರುವ ಮೇಲ್ಮನವಿ ಪ್ರಕರಣಗಳನ್ನು ಉಪವಿಭಾಗಾಧಿಕಾರಿ ವೃಂದಕ್ಕೆ ಸಮಾನಾಂತರ ವೃಂದದ ಇತರೆ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆಎಎಸ್ ಅಧಿಕಾರಿಗಳಿಗೆ ಕಾರ್ಯಹಂಚಿಕೆ ಮಾಡಿ ಪುಟ 2ಕ್ಕೆ

### ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಗ್ಯ ತುಸು ಏರುಪೇರು

**ಬೆಳಗಾವಿ:** ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಗ್ಯದಲ್ಲಿ ತುಸು ಏರುಪೇರಾದ ಹಿನ್ನೆಲೆಯಲ್ಲಿ ಬುಧವಾರ ಅವರು ಕಲಾಪಗಳಿಂದ ದೂರ ಉಳಿದರು.




ನಗರದ ಪ್ರವಾಸಿ ಮಂದಿರದಲ್ಲೇ ಬುಧವಾರ ಇಡೀ ದಿನ ವಿಶ್ರಾಂತಿ ಪಡೆದರು. ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ನ್ಯಾಯಾಲಯ ನೀಡಿದ ತೀರ್ಪನ್ನು ಬೆಂಬಲಿಸಿ, ಕೇಂದ್ರ ಸರ್ಕಾರ ಸುಳ್ಳು ಪ್ರಕರಣ ದಾಖಲಿಸಿದ್ದನ್ನು ಖಂಡಿಸಿ ಸುವರ್ಣ ವಿಧಾನಸೌಧದ ಆವರಣದಲ್ಲಿ ನಡೆದ ಪ್ರತಿಭಟನೆಯಲ್ಲಿ ಸಿದ್ದರಾಮಯ್ಯ ಪಾಲ್ಗೊಂಡಿದ್ದರು. ಒಂದು ತಾಸು ಧರಣಿ ಕುಳಿತರು. ನಂತರ ಸದನದೊಳಗೆ ಹೋದ ಅವರು, ಕೆಲ ಸಮಯದ ನಂತರ ಪ್ರವಾಸಿ ಮಂದಿರಕ್ಕೆ ಮರಳಿದರು. ಪುಟ 2ಕ್ಕೆ

### ಜೈಲುಗಳ ಮೇಲೆ ದಾಳಿ: ನಿಷೇಧಿತ ವಸ್ತುಗಳ ವಶ

**ಬೆಂಗಳೂರು:** ರಾಜ್ಯದ ಹಲವು ಜೈಲುಗಳಲ್ಲಿ ಕಳೆದ 36 ಗಂಟೆಗಳಲ್ಲಿ ನಡೆಸಿದ ವಿಶೇಷ ಕಾರ್ಯಾಚರಣೆಯಲ್ಲಿ ಮೊಬೈಲ್ ಫೋನ್‌ಗಳು ಮತ್ತು ಗಾಂಜಾ ಸೇರಿದಂತೆ ನಿಷೇಧಿತ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸ್ ಮಹಾನಿರ್ದೇಶಕ (ಕಾರಾಗೃಹ) ಅಲೋಕ್ ಕುಮಾರ್ ಬುಧವಾರ ತಿಳಿಸಿದರು.

ಬೆಂಗಳೂರಿನ ಜೈಲಿನಿಂದ ಆರು ಮೊಬೈಲ್ ಫೋನ್‌ಗಳು ಮತ್ತು ನಾಲ್ಕು ಚಾಕುಗಳನ್ನು ವಶಪಡಿಸಿಕೊಳ್ಳಲಾಗಿದೆ. ಮೈಸೂರು ಜೈಲಿನಿಂದ ಒಂಬತ್ತು ಮೊಬೈಲ್ ಫೋನ್‌ಗಳು ಮತ್ತು 11 ಸಿಮ್ ಕಾರ್ಡ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಹೇಳಿದರು.

ಬೆಳಗಾವಿ ಜೈಲಿನಲ್ಲಿ ನಾಲ್ಕು ಮೊಬೈಲ್ ಫೋನ್‌ಗಳು ಮತ್ತು ಹೊರಗಿನಿಂದ ಎಸೆದ 366 ಗ್ರಾಂ



ಗಾಂಜಾವನ್ನು ವಶಪಡಿಸಿಕೊಳ್ಳಲಾಗಿದೆ. ಮಂಗಳೂರು ಜೈಲಿನಿಂದ ನಾಲ್ಕು ಮೊಬೈಲ್ ಫೋನ್‌ಗಳು ಮತ್ತು ವಿಜಯಪುರ ಜೈಲಿನಿಂದ ಒಂದು ಮೊಬೈಲ್ ಫೋನ್ ಅನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಹೇಳಿದ್ದಾರೆ. ಜೈಲುಗಳೊಳಗಿನ ಅಕ್ರಮ ಚಟುವಟಿಕೆಗಳನ್ನು ತಡೆಯಲು ಇಂತಹ ವಿಶೇಷ ಕಾರ್ಯಾಚರಣೆಗಳು ಮುಂದುವರಿಯುತ್ತವೆ ಎಂದು ತಿಳಿಸಿದ್ದಾರೆ.

### ವಿಪಕ್ಷ ಗುರಿಯಾಗಿಸಿ ದ್ವೇಷ ರಾಜಕೀಯ: ಖರ್ಗೆ ವಾಗ್ದಾಳಿ

**ನವದೆಹಲಿ:** ಗಾಂಧಿ ಕುಟುಂಬಕ್ಕೆ ಕಿರುಕುಳ ನೀಡುವುದು ಮತ್ತು ವಿರೋಧ ಪಕ್ಷಗಳನ್ನು ಗುರಿಯಾಗಿಸಿ ದ್ವೇಷ ರಾಜಕೀಯ ಮಾಡಲಾಗುತ್ತಿದೆ ಎಂದು ಕೇಂದ್ರ ಸರ್ಕಾರದ ವಿರುದ್ಧ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಾಗ್ದಾಳಿ ನಡೆಸಿದರು.



ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ ಸಲ್ಲಿಸಿದ ದೂರನ್ನು ಪರಿಗಣಿಸಲು ವಿಚಾರಣಾ ನ್ಯಾಯಾಲಯ ನಿರಾಕರಿಸಿರುವ ಹಿನ್ನೆಲೆಯಲ್ಲಿ ಮಾತನಾಡಿರುವ ಅವರು, ಸತ್ಯ ಯಾವಾಗಲೂ ಜಯಗಳಿಸುತ್ತದೆ. ಈ ಪ್ರಕರಣ ಆಡಳಿತ ಪಕ್ಷದ ಸೇಡಿನ ರಾಜಕಾರಣಕ್ಕೆ ಉದಾಹರಣೆ ಎಂದು ಟೀಕಿಸಿದರು.

ದೆಹಲಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜಕೀಯ ಉದ್ದೇಶಕ್ಕೆ ಕೇಂದ್ರ ತನಿಖಾ ಸಂಸ್ಥೆಗಳನ್ನು ದುರುಪಯೋಗಪಡಿಸಿಕೊಳ್ಳಲಾಗಿದೆ. ಇದಕ್ಕೆ ಕಾರಣರಾದ ಪ್ರಧಾನಿ ನರೇಂದ್ರ ಮೋದಿ ಪುಟ 2ಕ್ಕೆ

### ಬುರುಡೆ ಚಿನ್ನಯ್ಯನಿಗೆ ಕೊನೆಗೂ ಬಿಡುಗಡೆ ಭಾಗ್ಯ

**ಮಂಗಳೂರು:** ಧರ್ಮಸ್ಥಳ ಬುರುಡೆ ಪ್ರಕರಣದಲ್ಲಿ ವಿಶೇಷ ತನಿಖಾ ತಂಡದಿಂದ ಬಂಧನಕ್ಕೆ ಒಳಗಾಗಿರುವ ಚಿನ್ನಯ್ಯ ಕೊನೆಗೂ ಬಿಡುಗಡೆ ಭಾಗ್ಯ ಸಿಕ್ಕಿದೆ.

ಬೆಳ್ತಂಗಡಿಯ ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಲಯದಲ್ಲಿ ಬುಧವಾರ ಚಿನ್ನಯ್ಯ ಪತ್ನಿ ಮಲ್ಲಿಕಾ ಹಾಗೂ ಸಹೋದರಿ ರತ್ನ ಜಾಮೀನು ಪ್ರಕ್ರಿಯೆ ಮುಗಿಸಿದರು. ಒಂದು ಲಕ್ಷ ರೂ. ಬಾಂಡ್ ಹಾಗೂ ಇಬ್ಬರು ಜಾಮೀನುದಾರರು ಶ್ಯೂರಿಟಿ ನೀಡಲು ಒಪ್ಪಿಕೊಂಡಿದ್ದಾರೆ. ಕಾನೂನು ಪ್ರಕ್ರಿಯೆ ಮುಗಿಸಿ ಬೆಳ್ತಂಗಡಿಯಿಂದ ಶಿವಮೊಗ್ಗ ಜೈಲಿನತ್ತ ಮಲ್ಲಿಕಾ ಹಾಗೂ ರತ್ನ ತೆರಳಿದರು.

ಚಿನ್ನಯ್ಯನಿಗೆ ನ.24ರಂದು 1 ಲಕ್ಷ ರೂ. ಬಾಂಡ್, ಇಬ್ಬರ ಶ್ಯೂರಿಟಿಯೊಂದಿಗೆ 12 ಷರತ್ತು ವಿಧಿಸಿ ಕೋರ್ಟ್ ಜಾಮೀನು ಮಂಜೂರು ಮಾಡಿತ್ತು. ಜಾಮೀನು ಸಿಕ್ಕಿದರೂ ಚಿನ್ನಯ್ಯನಿಗೆ ಶ್ಯೂರಿಟಿ ನೀಡಲು ಯಾರೂ ಮುಂದೆ ಬಂದಿರಲಿಲ್ಲ. ಬಾಂಡ್ ಹಾಗೂ ಇಬ್ಬರು ಜಾಮೀನುದಾರರ ಕೊರತೆಯಿಂದ ಬಿಡುಗಡೆಯಾಗದೇ ಚಿನ್ನಯ್ಯ ಇದುವರೆಗೂ ಜೈಲಿನಲ್ಲಿದ್ದ.

ಧರ್ಮಸ್ಥಳ ಪ್ರಕರಣದಲ್ಲಿ ಚಿನ್ನಯ್ಯನನ್ನು ಬಳಸಿಕೊಂಡು ಬುರುಡೆ ಗ್ಯಾಂಗ್ ದೂರು ನೀಡಿತ್ತು. ಆದರೆ ಯಾವಾಗ ಬುರುಡೆ ಗ್ಯಾಂಗ್ ವಿರುದ್ಧವೇ



ಚಿನ್ನಯ್ಯ ತಿರುಗಿ ಬಿದ್ದನೋ ಅಲ್ಲಿಂದ ಗ್ಯಾಂಗ್ ಸದಸ್ಯರು ಚಿನ್ನಯ್ಯನ ವಿರುದ್ಧವೇ ಮಾತನಾಡಿದ್ದರು.

ವಿಶೇಷ ತನಿಖಾ ತಂಡ ತನಿಖಾ ವರದಿಯನ್ನು ಬೆಳ್ತಂಗಡಿ ನ್ಯಾಯಾಲಯಕ್ಕೆ ಸಲ್ಲಿಕೆ ಮಾಡಿತ್ತು. ಅದರ ಬೆನ್ನಲ್ಲೇ ಚಿನ್ನಯ್ಯ ಜಾಮೀನಿಗೆ ಅರ್ಜಿ ಸಲ್ಲಿಸಿದ್ದ. ಆ.23ರಂದು ವಿಚಾರಣೆ ಬಳಿಕ ಬುರುಡೆ ಕೇಸ್‌ನಲ್ಲಿ ಅನಾಮಿಕ ದೂರುದಾರ ಚಿನ್ನಯ್ಯನನ್ನು ಬಂಧಿಸಲಾಗಿತ್ತು.

## ಕೇಂದ್ರದ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ

### ಗಾಂಧಿ ಹೆಸರು ಕೈಬಿಡುವುದು, ದ್ವೇಷ ರಾಜಕೀಯ ವಿರೋಧಿಸಿ ಆಕ್ರೋಶ

**ಬೆಳಗಾವಿ:** ಕೇಂದ್ರ ಸರ್ಕಾರ ನರೇಗಾ ಯೋಜನೆಯಿಂದ ಮಹಾತ್ಮ ಗಾಂಧಿ ಹೆಸರನ್ನು ತೆಗೆದುಹಾಕುತ್ತಿರುವುದನ್ನು ವಿರೋಧಿಸಿ ಮತ್ತು ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಕಾಂಗ್ರೆಸ್ ನಾಯಕರ ವಿರುದ್ಧ ದ್ವೇಷ ರಾಜಕೀಯ ನಡೆಸುತ್ತಿದೆ ಎಂದು ಆರೋಪಿಸಿ ಆಡಳಿತಾರೂಢ ಕಾಂಗ್ರೆಸ್ ನಾಯಕರು ಬುಧವಾರ ಬೃಹತ್ ಪ್ರತಿಭಟನೆ ನಡೆಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಸುವರ್ಣ ಸೌಧದ ಗಾಂಧಿ ಪ್ರತಿಮೆ ಮುಂದೆ ನಡೆದ ಪ್ರತಿಭಟನೆಯಲ್ಲಿ ಸಚಿವರು, ಶಾಸಕರು ಮತ್ತು ವಿಧಾನ ಪರಿಷತ್ ಸದಸ್ಯರು ಭಾಗವಹಿಸಿದ್ದರು.

ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ, ಸೋನಿಯಾ ಗಾಂಧಿ ಮತ್ತು ಇತರ ಐವರ ವಿರುದ್ಧ ಜಾರಿ ನಿರ್ದೇಶನಾಲಯದ ಹಣ ಅಕ್ರಮ ವರ್ಗಾವಣೆ ಆರೋಪವನ್ನು ಪರಿಗಣಿಸಲು ದೆಹಲಿಯ ನ್ಯಾಯಾಲಯ ಮಂಗಳವಾರ ನಿರಾಕರಿಸಿರುವ ಪುಟ 2ಕ್ಕೆ




### ಗಾಂಧೀಜಿ ಬಗ್ಗೆ ಬಿಜೆಪಿಗೆ ದ್ವೇಷ

**ಬೆಂಗಳೂರು:** ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಹೆಸರು ಮತ್ತು ಸ್ವರೂಪ ಬದಲಿಸಲು ಹೊರಟಿರುವ ಕೇಂದ್ರ ಸರ್ಕಾರದ ನಡೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಕಿಡಿಕಾರಿದರು.

ನರೇಗಾ ಯೋಜನೆಯ ಹೆಸರು ಬದಲಿಸುವ ಪ್ರಧಾನಿ ಮೋದಿ ಸರ್ಕಾರದ ನಿರ್ಧಾರ ಮಹಾತ್ಮ ಗಾಂಧಿಯವರ ಬಗ್ಗೆ ಬಿಜೆಪಿ ಮತ್ತು ಸಂಘ ಪರಿವಾರಕ್ಕೆ ಇರುವ ದ್ವೇಷ, ಅಸೂಯೆಯನ್ನು ತೋರಿಸುತ್ತದೆ ಪುಟ 2ಕ್ಕೆ

ಮೊದಲ ಪುಟದಿಂದ

## ಕೃಷಿಕರಿಗೆ ಹೆಣ್ಣು ಸಿಕ್ತಿಲ್ಲ: 25 ಲಕ್ಷ ನೀಡಲು ಆಗ್ರಹ

ಜಾಲತಾಣಗಳಲ್ಲಿ ಯುವಕರ ನಡುವೆ ಚರ್ಚೆ ಆಗ್ತಿದೆ. ಮದುವೆ ಆಗದ ಯುವಕರು ದೇವಾಲಯಗಳಿಗೆ ಪಾದಯಾತ್ರೆ ಹೋಗುತ್ತಿದ್ದಾರೆ. ಕೃಷಿಕರಿಗೆ ಮದುವೆ ಆಗದಿರುವುದು ಸಮಾಜದ ಸ್ವಾಸ್ಥ್ಯ ಹಾಳು ಮಾಡುತ್ತಿದೆ ಎಂದು ಹೇಳಿದರು.

ಸರ್ಕಾರ ಗ್ರಾಮೀಣ ಭಾಗದಲ್ಲಿ ಕೃಷಿ ಮಾಡುವ ಯುವಕರಿಗೆ ವಿಶೇಷ ಯೋಜನೆ ರೂಪಿಸಬೇಕು. ಮದುವೆ ಆಗದ ಯುವಕರಿಗೆ ಕನಿಷ್ಠ 10ರಿಂದ 25 ಲಕ್ಷ ರೂ. ಸಹಾಯಧನ ನೀಡಬೇಕು ಎಂದು ಸಿಎಂ ಸಿದ್ದರಾಮಯ್ಯಗೆ ಒತ್ತಾಯ ಮಾಡಿದರು.

## ಕೇಂದ್ರದ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ

ಹಿನ್ನೆಲೆಯಲ್ಲಿ ಬಿಜೆಪಿ ದ್ವೇಷ ರಾಜಕೀಯದಲ್ಲಿ ತೊಡಗಿದೆ ಎಂದು ಆರೋಪಿಸಿದರು. ಅಸ್ತಿತ್ವದಲ್ಲಿರುವ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ವಿಕಸಿತ್ ಭಾರತ್ ಗ್ಯಾರಂಟಿ ಫಾರ್ ರೋಜ್‌ಗಾರ್ ಅಂಡ್ ಆಜೀವಿಕಾ ಮಿಷನ್ (ಜಿ ರಾಮ್ ಜಿ) ಎಂದು ಬದಲಿಸುವ ಮಸೂದೆಯನ್ನು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಮಂಗಳವಾರ ಲೋಕಸಭೆಯಲ್ಲಿ ಮಂಡಿಸಿದ ನಂತರ, ವಿರೋಧ ಪಕ್ಷಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿವೆ. ಈ ಬೆನ್ನಲ್ಲೇ ಕಾಂಗ್ರೆಸ್ ಬೃಹತ್ ಪ್ರತಿಭಟನೆ ನಡೆಸಿತು.

ಕೈಗಾರಿಕಾ ಸಚಿವ ಎಂಬಿ ಪಾಟೀಲ್ ಮಾತನಾಡಿ, ಬಿಜೆಪಿಗೆ ನರೇಗಾ ಯೋಜನೆ ಯಶಸ್ಸನ್ನು ಸಹಿಸಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಅವರು ಈಗ ಹೆಸರನ್ನು ಬದಲಾಯಿಸಲು ಮುಂದಾಗಿದ್ದಾರೆ. ನರೇಗಾ ಯೋಜನೆಯನ್ನು ಪ್ರಧಾನಿ ಡಾ. ಮನಮೋಹನ್ ಸಿಂಗ್ ಮತ್ತು ಸೋನಿಯಾ ಗಾಂಧಿ ಅವರು ಯುಪಿಎ ಅಧ್ಯಕ್ಷೆಯಾಗಿದ್ದಾಗ ಪ್ರಾರಂಭಿಸಿದರು. ಇದು ಭಾರಿ ಯಶಸ್ಸನ್ನು ಕಂಡಿತು. ಅಸ್ತಿತ್ವದಲ್ಲಿರುವ ಯಶಸ್ವಿ ಯೋಜನೆ ಹೆಸರು ಬದಲಿಸುವುದು ಕೇಂದ್ರ ಸರ್ಕಾರದ ದ್ವೇಷ ರಾಜಕೀಯಕ್ಕೆ ಕನ್ನಡಿ ಎಂದು ಕಿಡಿಕಾರಿದರು.

ಇದು ಭಾರತದ ಇತಿಹಾಸದಲ್ಲಿ ಅತ್ಯಂತ ಯಶಸ್ವಿ ಕಾರ್ಯಕ್ರಮವಾಗಿತ್ತು. ಬಿಜೆಪಿಗೆ ಇದನ್ನು ಜೀರ್ಣಿಸಿಕೊಳ್ಳಲು ಸಾಧ್ಯವಾಗಲಿಲ್ಲ, ಮತ್ತು ಅವರು ಈಗ ಹೆಸರನ್ನು ಬದಲಿಸಲು ಮುಂದಾಗಿದ್ದಾರೆ. ನಮಗೆ ಸ್ವಾತಂತ್ರ್ಯ ತಂದುಕೊಟ್ಟ ಮಹಾತ್ಮ ಗಾಂಧಿಯವರ ಹೆಸರು ಈಗಾಗಲೇ ಯೋಜನೆಯಲ್ಲಿ ಇದ್ದಾಗ, ಅವರ ಹೆಸರನ್ನು ಏಕೆ ತೆಗೆದುಹಾಕಬೇಕು? ಬಿಜೆಪಿ ಹತಾಶವಾಗಿದೆ. ಅವರು ತುಂಬಾ ಕೆಳಮಟ್ಟಕ್ಕೆ ಇಳಿದಿದ್ದಾರೆಂದು ಆರೋಪಿಸಿದರು.

## ಕೃಷಿ ಯಂತ್ರೋಪಕರಣ ಖರೀದಿ: ಹೆಚ್ಚುವರಿ 250 ಕೋಟಿಗೆ ಬೇಡಿಕೆ

ವಿಧಾನಸಭೆಯಲ್ಲಿ ಕಾಂಗ್ರೆಸ್‌ನ ಬಸವರಾಜ್ ನೀಲಪ್ಪ ಶಿವಣ್ಣನವರ್ ಪ್ರಶ್ನೆಗೆ ಉತ್ತರಿಸಿದ ಅವರು, ಕೃಷಿ ಸಲಕರಣೆ ಮತ್ತು ಯಂತ್ರೋಪಕರಣ ಖರೀದಿಗಾಗಿ ಕಳೆದ ಎರಡೂವರೆ ವರ್ಷಗಳಲ್ಲಿ 3.20 ಲಕ್ಷ ರೈತರಿಗೆ 1,250 ಕೋಟಿ ಮೊತ್ತದ ಸಹಾಯಧನ ವಿತರಿಸಲಾಗಿದೆ. 127 ಕೋಟಿ ವೆಚ್ಚದ ಹೈಟೆಕ್ ಕಟಾವು ಹಬ್ ವಿತರಿಸಲಾಗಿದೆ. ಕೃಷಿ ಸಲಕರಣೆ ಮತ್ತು ಯಂತ್ರೋಪಕರಣ ಖರೀದಿಗೆ ಸಹಾಯಧನ ನೀಡಲು 2023–24ರಲ್ಲಿ ಕೇಂದ್ರ ಸರ್ಕಾರದಿಂದ ಹೆಚ್ಚುವರಿಯಾಗಿ 200 ಕೋಟಿ ಪಡೆದುಕೊಳ್ಳಲಾಗಿತ್ತು ಎಂದು ತಿಳಿಸಿದರು.

## ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಗ್ಯ ತುಸು ಏರುಪೇರು

ಶಾಸಕ ರಮೇಶ ಜಾರಕಿಹೊಳಿ ಪ್ರವಾಸಿ ಮಂದಿರಕ್ಕೆ ಬಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಗ್ಯ ವಿಚಾರಿಸಿದರು. ಸಿದ್ದರಾಮಯ್ಯ ಆರೋಗ್ಯ ವಿಚಾರಿಸಲು ಬಂದಿದ್ದೇನೆ. ರಾಜಕೀಯ ಚರ್ಚೆ ಮಾಡಿಲ್ಲ. ಅವರು ಆರೋಗ್ಯವಾಗಿದ್ದಾರೆ ಎಂದು ಹೇಳಿದರು. ಸಚಿವ ಭೈರತಿ ಸುರೇಶ್, ಶಾಸಕ ಜಿ.ಟಿ.ದೇವೇಗೌಡ, ಯತೀಂದ್ರ ಸಿದ್ದರಾಮಯ್ಯ ಸೇರಿ ಹಲವರು ಭೇಟಿ ನೀಡಿದ್ದರು.

# ವಿಶ್ರಾಂತ ಕುಲಪತಿ ಎಸ್.ಎನ್.ಹೆಗ್ಡೆ ನಿಧನ

ಮೈಸೂರು: ಮೈಸೂರು ವಿಶ್ವ ವಿದ್ಯಾನಿಲಯದ ವಿಶ್ರಾಂತ ಕುಲಪತಿ ಎಸ್.ಎನ್ ಹೆಗ್ಡೆ(83) ಮೈಸೂರಿನಲ್ಲಿ ನಿಧನರಾಗಿದರು.



ಪ್ರೊ.ಎಸ್.ಎನ್.ಹೆಗ್ಡೆ ಎರಡು ಅವಧಿಯಲ್ಲಿ ಮೈಸೂರು ವಿಶ್ವ ವಿದ್ಯಾನಿಲಯದ ಕುಲಪತಿಯಾಗಿ ಸೇವೆ ಸಲ್ಲಿಸಿದ್ದರು. 1997ರಿಂದ 2003ರವರೆಗೆ ಮೈಸೂರು ವಿವಿ ಕುಲಪತಿಯಾಗಿದ್ದರು. ಎಸ್.ಎನ್ ಹೆಗ್ಡೆ ಅವರು ಪ್ರಾಣಿಶಾಸ್ತ್ರದ ಪ್ರಾಧ್ಯಾಪಕರಾಗಿದ್ದರು.

ಕಳೆದ 6 ತಿಂಗಳ ಹಿಂದೆ ಪ್ರೊ.ಎಸ್.ಎನ್ ಹೆಗ್ಡೆ ಅವರ ಪತ್ನಿ ನಿಧನರಾಗಿದ್ದು, ಕುಟಂಬದ ಜೊತೆ ವಿಜಯನಗರದಲ್ಲಿ ವಾಸವಿದ್ದರು. ಮೃತ ಪ್ರೊ.ಎಸ್.ಎನ್‌ಹೆಗ್ಡೆ ಅವರಿಗೆ ಇಬ್ಬರು ಹೆಣ್ಣು ಮಕ್ಕಳಿದ್ದು ಒಬ್ಬರು ಮೈಸೂರಿನಲ್ಲಿ, ಇನ್ನೊಬ್ಬರು ಅಮೇರಿಕದಲ್ಲಿದ್ದಾರೆ. ಈ ಮಧ್ಯೆ ನಿನ್ನೆ ಬೆಳಿಗ್ಗೆ ಮನೆಯಲ್ಲಿ ಅಧಿಕ ರಕ್ತದೊತ್ತಡದಿಂದ ಎಸ್.ಎನ್ ಹೆಗ್ಡೆ ಅವರು ಕುಸಿದು ಬಿದ್ದಿದ್ದು ತಕ್ಷಣವೇ ಅವರನ್ನ ವಿಜಯ ನಗರದ ನಿವಾಸದ ಸಮೀಪ ಖಾಸಗಿ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಬಹು ಅಂಗಾಗ ವೈಫಲ್ಯ ಅನುಭವಿಸಿದ್ದರು. ಹೀಗಾಗಿ ಅವರನ್ನು ಐಸಿಯುನಲ್ಲಿಟ್ಟು ಚಿಕಿತ್ಸೆಗೆ ಪ್ರಯತ್ನಿಸಲಾಗಿತ್ತು. ಆದರೆ ಚಿಕಿತ್ಸೆ ಫಲಿಸದೆ ಇಂದು ಮಧ್ಯಾಹ್ನ ಎಸ್.ಎನ್ ಹೆಗ್ಡೆ ಮೃತಪಟ್ಟಿದ್ದಾರೆಂದು ವೈದ್ಯರು ತಿಳಿಸಿದ್ದಾರೆ.

ಮೃತರ ಅಂತ್ಯಕ್ರಿಯೆ ನಾಳೆ ಅಥವಾ ನಾಡಿದ್ದು ಮೈಸೂರಿನಲ್ಲಿ ನೆರವೇರಲಿದೆ. ಎಸ್.ಎನ್.ಹೆಗ್ಡೆ ಮೊಮ್ಮಗ ಮತ್ತು ಪುತ್ರಿ ವಿದೇಶದಲ್ಲಿರುವ ಕಾರಣ ಅವರ ಆಗಮನದ ಬಳಿಕ ಅಂತ್ಯಕ್ರಿಯೆ ನೆರವೇರಿಲಿದೆ ಎಂದು ಎಸ್.ಎನ್ ಹೆಗ್ಡೆ ಅವರಿಗೆ ಆಪ್ತರಾಗಿರುವ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ತಿಳಿಸಿದರು.

ನಿಧನಕ್ಕೆ ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಸಂತಾಪ ಸೂಚಿಸಿ ಪ್ರೊ. ಎಸ್.ಎನ್ ಹೆಗ್ಡೆ ಅವರು ಕುಲಪತಿ ಅವಧಿಯಲ್ಲಿ ಮೈಸೂರು ವಿವಿಯ ಶೈಕ್ಷಣಿಕ ಹಾಗೂ ಮೂಲ ಸೌಕರ್ಯ ಅಭಿವೃದ್ಧಿಗೆ ಹೆಚ್ಚಿನ ಒತ್ತು ನಿಡಿದ್ದರು. ವಿಜ್ಞಾನ ವಿಭಾಗದ ಹಿನ್ನೆಲೆಯಾಗಿದ್ದರಿಂದ ಕುಲಪತಿ ಅವಧಿಯಲ್ಲಿ ವೈಜ್ಞಾನಿಕ ಸಂಶೋಧನೆಗೂ ಹೆಚ್ಚಿನ ಪ್ರೋತ್ಸಾಹ ನೀಡುವ ಮೂಲಕ ವಿಜ್ಞಾನದ ಅಭಿವೃದ್ಧಿಗೆ ಒತ್ತು ನೀಡಿದ್ದರು. ನನ್ನ ಗುರು ಸಮಾನರಾಗಿದ್ದ ಎಸ್. ಎನ್ ಹೆಗ್ಡೆ ಅವರ ನಿಧನದಿಂದ ತುಂಬಲಾರದ ನಷ್ಟ ಉಂಟಾಗಿದೆ ಎಂದು ಪ್ರೊ. ರಂಗಪ್ಪ ಕಂಬನಿ ನುಡಿದಿದ್ದಾರೆ.

### ಸಂತಾಪ

**ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಎಸ್. ಎನ್ ಹೆಗ್ಡೆ ಅವರ ನಿಧನಕ್ಕೆ ಕೆಪಿಸಿಸಿ ವಕ್ತಾರ ಎಚ್.ಎ ವೆಂಕಟೇಶ್ ಸಂತಾಪ ಸೂಚಿಸಿದ್ದಾರೆ. ಪ್ರೊ. ಎಸ್. ಎನ್. ಹೆಗಡೆ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ಸೇವೆ ಸಲ್ಲಿಸಿದ್ದರು. ಅತ್ಯುತ್ತಮ ಪ್ರಾಧ್ಯಾಪಕರಾಗಿ ಹಾಗೂ ಸಂಶೋಧಕರಾಗಿ ಮಂಗಳೂರು ವಿಶ್ವ ವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸಿ ಹಲವಾರು ವಿದ್ಯಾರ್ಥಿಗಳ ಭವಿಷ್ಯ ನಿರೂಪಿಸಲು ಕರಣಿಭೂತರಾಗಿದ್ದರೆಂದು ಸ್ಮರಿಸಿದ್ದಾರೆ.**

### ಎಸ್.ಎನ್.ಹೆಗ್ಡೆ ನಿಧನಕ್ಕೆ ಡಾ.ಈ.ಸಿ. ನಿಂಗರಾಜ್ ಗೌಡ ಸಂತಾಪ

ಮೈಸೂರು: ಮೈಸೂರು ವಿಶ್ವ ವಿದ್ಯಾನಿಲಯದ ವಿಶ್ರಾಂತ ಕುಲಪತಿ ಎಸ್.ಎನ್.ಹೆಗ್ಡೆ ನಿಧನಕ್ಕೆ ಡಾ.ಈ.ಸಿ.ನಿಂಗರಾಜ್ ಗೌಡ ಸಂತಾಪ ಸೂಚಿಸಿದರು.

ಪ್ರೊ.ಎಸ್.ಎನ್.ಹೆಗ್ಡೆ ಕುಲಪತಿ ಅವಧಿಯಲ್ಲಿ ಮೈಸೂರು ವಿವಿಯ ಶೈಕ್ಷಣಿಕ ಹಾಗೂ ಮೂಲ ಸೌಕರ್ಯ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿದ್ದರು. ವಿಜ್ಞಾನ ವಿಭಾಗದ ಹಿನ್ನೆಲೆಯಾಗಿದ್ದರಿಂದ ಕುಲಪತಿ ಅವಧಿಯಲ್ಲಿ ವೈಜ್ಞಾನಿಕ ಸಂಶೋಧನೆಗೂ ಹೆಚ್ಚಿನ ಪ್ರೋತ್ಸಾಹ ನೀಡುವ ಮೂಲಕ ವಿಜ್ಞಾನದ ಅಭಿವೃದ್ಧಿಗೆ ಒತ್ತು ನೀಡಿದ್ದರು. ನನ್ನ ಗುರು ಸಮಾನರಾಗಿದ್ದ ಎಸ್.ಎನ್.ಹೆಗ್ಡೆ ಅವರ ನಿಧನದಿಂದ ತುಂಬಲಾರದ ನಷ್ಟ ಉಂಟಾಗಿದೆ. ಮೈಸೂರು ವಿಶ್ವ ವಿದ್ಯಾನಿಲಯದ ವಿಶ್ರಾಂತ ಕುಲಪತಿ ಎಸ್.ಎನ್. ಹೆಗ್ಡೆ(83) ಮೈಸೂರಿನಲ್ಲಿ ನಿಧನರಾಗಿದ್ದಾರೆ. ಪ್ರೊ. ಎಸ್.ಎನ್.ಹೆಗ್ಡೆ ಅವರು ಎರಡು ಅವಧಿಯಲ್ಲಿ ಮೈಸೂರು ವಿಶ್ವ ವಿದ್ಯಾನಿಲಯದ ಕುಲಪತಿಯಾಗಿ ಸೇವೆ ಸಲ್ಲಿಸಿದ್ದರು. 1997ರಿಂದ 2003ರವರೆಗೆ ಮೈಸೂರು ವಿವಿ ಕುಲಪತಿಯಾಗಿದ್ದರು. ಎಸ್.ಎನ್. ಹೆಗ್ಡೆ ಪ್ರಾಣಿಶಾಸ್ತ್ರದ ಪ್ರಾಧ್ಯಾಪಕರಾಗಿದ್ದರೆಂದರು.

# ಸೋಲಾರ್ ಪಂಪ್‌ಗೆ ಅರ್ಜಿ

## ಪಿಎಂ ಕುಸುಮ್ ಯೋಜನೆಯಡಿ ಹೇಗೆ? ಏನು? ಇಲ್ಲಿದೆ ಮಾಹಿತಿ

ರಾಮನಗರ: ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೈತರಿಗಾಗಿ ಸೋಲಾರ್ ಪಂಪ್‌ಸೆಟ್ ಯೋಜನೆಯನ್ನು ಜಾರಿಗೆ ತಂದಿದ್ದು, ಅರ್ಜಿಗಳನ್ನು ಆಹ್ವಾನಿಸಿದೆ. ಪಿಎಂ ಕುಸುಮ್ ಬಿ ಯೋಜನೆಯಡಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಆರ್ಥಿಕ ಸಹಾಯ ನೀಡುತ್ತಿದ್ದ ಫಲಾನುಭವಿ ರೈತರು ಶೇ 20ರಷ್ಟು ಮೊತ್ತವನ್ನು ಮಾತ್ರ ಭರಿಸಬೇಕಾಗಿದೆ.

ಎಂ ಕುಸುಮ್–ಬಿ ಯೋಜನೆಯಡಿ, ರೈತರ ಆರ್ಥಿಕಭದ್ರತೆ ಮತ್ತು ಕೃಷಿ ಅಭಿವೃದ್ಧಿಗೆ ಪೂರಕವಾಗಿ ಸೌರಶಕ್ತಿ ಚಾಲಿತ (ಸೋಲಾರ್) ಪಂಪ್‌ಸೆಟ್‌ಗಳನ್ನು ಒದಗಿಸುತ್ತಿದೆ. ಮನರೇಗ ಮತ್ತು ಕೆಆರ್‌ಇಡಿಎಲ್ ಸಂಸ್ಥೆಗಳ ಸಹಯೋಗದಲ್ಲಿ ರಾಜ್ಯದಲ್ಲಿ ಈ ಯೋಜನೆ ಜಾರಿಗೆ ಬಂದಿದೆ. ಡೀಸೆಲ್ ಮೇಲಿನ ಅವಲಂಬನೆ ಕಡಿಮೆಯಾಗಿ, ರೈತರ ಆದಾಯದಲ್ಲಿ ಗಣನೀಯ ಏರಿಕೆಯಾಗಿಸುವ ಉದ್ದೇಶದಲ್ಲಿ ಸರ್ಕಾರ ಈ ಯೋಜನೆಯನ್ನು ಜಾರಿಗೆ ತಂದಿದೆ.

### ಏನಿದು ಪಿಎಂ ಕುಸುಮ್ ಬಿ ಯೋಜನೆ

ಕೃಷಿ ಕ್ಷೇತ್ರದಲ್ಲಿ ನವೀಕರಿಸಬಹುದಾದ ಇಂಧನ ಬಳಕೆಯನ್ನು ಉತ್ತೇಜಿಸಲು ಮಹತ್ವದ ಹೆಜ್ಜೆ ಇಟ್ಟಿರುವ ಕರ್ನಾಟಕ ಸರ್ಕಾರವು, ಪ್ರಧಾನ ಮಂತ್ರಿ ಕಿಸಾನ್ ಊರ್ಜಾ ಸುರಕ್ಷಾ ಏವಂ ಉತ್ಥಾನ ಮಹಾಭಿಯಾನ ಯೋಜನೆಯ ಘಟಕ–ಬಿ ಅಡಿಯಲ್ಲಿ ರೈತರಿಗೆ ಭಾರಿ ಸಬ್ಸಿಡಿಯೊಂದಿಗೆ ಸೌರಶಕ್ತಿ ಚಾಲಿತ ಪಂಪ್‌ಸೆಟ್‌ಗಳನ್ನು ಒದಗಿಸಲು



ಮುಂದಾಗಿದೆ. ಯೋಜನೆಯಡಿ ಅರ್ಜಿ ಸಲ್ಲಿಸಲು ಅವಕಾಶವನ್ನು ಒದಗಿಸಲಾಗಿದೆ.

ರೈತರಿಗೆ 7.5 ಎಚ್.ಪಿ. ಸಾಮರ್ಥ್ಯದವರೆಗೆ ಸ್ವತಂತ್ರ ಸೌರಶಕ್ತಿ ಚಾಲಿತ ಕೃಷಿ ಪಂಪ್‌ಗಳನ್ನು ಅಳವಡಿಸಿಕೊಳ್ಳಲು ಈ ಯೋಜನೆ ಅವಕಾಶ ನೀಡುತ್ತದೆ. ರೈತರು ಸಧ್ಯ ಡೀಸೆಲ್ ಪಂಪ್‌ಗಳನ್ನು ಬಳಸುತ್ತಿದ್ದಾರೆ. ಇದರ ಬದಲಿಗೆ ಸೌರ ಪಂಪ್‌ಗಳನ್ನು ಅಳವಡಿಸಿದರೆ ರೈತರು ಡೀಸಲ್ ಉಳಿತಾಯ ಸಾಧಿಸಬಹುದು, ಅಲ್ಲದೆ ಹಗಲುಹೊತ್ತಿನಲ್ಲೇ ತಮ್ಮ ತೋಟ, ಗದ್ದೆಗಳಿಗೆ ನೀರು ಹರಿಸಲು ಅನುಕೂಲವಾಗುತ್ತದೆ. ನೀರಾವರಿ ವೆಚ್ಚ ಕಡಿಮೆಯಾಗುವುದಲ್ಲದೆ, ಡೀಸಲ್ ಪಂಪ್‌ಗಳಿಂದ ಉಂಟಾಗುವ ಮಾಲಿನ್ಯವನ್ನು ತಗ್ಗಿಸಬಹುದಾಗಿದೆ. ಕೃಷಿಯಲ್ಲಿ ಸೌರಶಕ್ತಿಯ ಬಳಕೆಯನ್ನು ಗಣನೀಯವಾಗಿ ಹೆಚ್ಚಿಸಿ, ರಾಜ್ಯದ ವಿದ್ಯುತ್ ಮೂಲಸೌಕರ್ಯದ ಮೇಲಿನ ಹೊರೆಯನ್ನು ಕಡಿಮೆ ಮಾಡುವ ಉದ್ದೇಶವೂ ಇದೆ.

### ರೈತರು ಕೇವಲ 20% ಪಾಲು ಭರಿಸಿಬೇಕಷ್ಟೆ

ಈ ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರದ ಶೇ.30ರಷ್ಟು ಹಾಗೂ ರಾಜ್ಯ ಸರ್ಕಾರದ ಶೇ.50ರಷ್ಟು ಸಹಾಧನ ದೊರೆಯಲಿದೆ. ರೈತರು ಕೇವಲ 20% ಪಾಲನ್ನು ಮಾತ್ರ ಭರಿಸಬೇಕಾಗುತ್ತದೆ.

### ಸೋಲಾರ್ ಪಂಪ್‌ಸೆಟ್‌ಗೆ ಅರ್ಜಿ ಸಲ್ಲಿಕೆ ಹೇಗೆ?

ಆಸಕ್ತ ರೈತರು ಡಬ್ಲು.ಡಬ್ಲು.ಡಬ್ಲು.ಸೌರಮಿತ್ರ.ಕಾಂ ಮೂಲಕ ಅರ್ಜಿ ಸಲ್ಲಿಸಬೇಕು. ಆಧಾರ್ ಕಾರ್ಡ್, ಭೂ ದಾಖಲೆ, ಬ್ಯಾಂಕ್ ಪಾಸ್ ಬುಕ್, ಘೋಷಣಾ ಪತ್ರ, ಪಾಸ್‌ಪೋರ್ಟ್ ಫೋಟೋ ಮತ್ತು ಮೊಬೈಲ್ ಸಂಖ್ಯೆ ಕೊಡಬೇಕು. ಇದೇ ವೇಳೆ ರೈತರು ಮಾರಾಟಗಾರ/ಏಜೆನ್ಸಿಯನ್ನು ಆಯ್ಕೆ ಮಾಡಬೇಕಾಗಿದೆ. 3 ಎಚ್.ಪಿ, 5 ಎಚ್.ಪಿ, 7.5 ಎಚ್.ಪಿ ಅಥವಾ 10 ಎಚ್.ಪಿ. ಪಂಪ್‌ಗಳನ್ನು ಆಯ್ಕೆಯ ಮಾಡಬಹುದು. ಈ ಸಮಾರ್ಥ್ಯದ ಸರ್ಫೇಸ್ ಮತ್ತು ಸಬ್‌ಮರ್ಸಿಬಲ್ ಪಂಪ್‌ಗಳು ಲಭ್ಯವಿದೆ. ರೈತರು ಹೆಚ್ಚಿನ ಮಾಹಿತಿಗೆ ಕೆ.ಆರ್.ಇ.ಡಿ.ಎಲ್ ಸಹಾಯವಾಣಿ 080–22202100 ಅಥವಾ 8095132100 ಗೆ ಸಂಪರ್ಕಿಸಬಹುದು.

ಮೊದಲ ಪುಟದಿಂದ

## ಕಾವೇರಿ–2 ತಂತ್ರಾಂಶ ಸಮಸ್ಯೆ ಪರಿಹಾರ

ಸರ್ಕಾರ ಆದೇಶಿಸಿರುತ್ತದೆ ಎಂದು ಹೇಳಿದರು. ಕಂದಾಯ ನ್ಯಾಯಲಯಗಳ ನಿರ್ವಹಣೆಯಲ್ಲಿ ಪಾರದರ್ಶಕತೆ, ದಕ್ಷತೆ, ಸಕಾಲಿಕ ವಿಲೇವಾರಿ ಮತ್ತು ಲಭ್ಯತೆಯ ಹಿತದೃಷ್ಟಿಯಿಂದ ಡಿಜಿಟಲ್ ಸಹಿ ಅಥವಾ ಸಮಾನವಾದ ಕಾನೂನು ಬದ್ಧವಾಗಿ ಗುರುತಿಸಲ್ಪಟ್ಟ ಎಲೆಕ್ಟ್ರಾನಿಕ್ ವಿಧಾನಗಳಿಂದ ದೃಢೀಕರಣ ಮಾಡಲಾಗುತ್ತದೆ. ಜೊತೆಗೆ ಕೇಂದ್ರೀಕೃತ ವೇದಿಕೆಯ ಮೂಲಕ ಅಂತಹ ಎಲ್ಲಾ ಎರಡು ಪ್ರಕ್ರಿಯೆಗಳ ಆನ್ ಲೈನ್ ಫೈಲಿಂಗ್ ಮತ್ತು ಎಲೆಕ್ಟ್ರಾನಿಕ್ ನಿರ್ವಹಣೆಯನ್ನು ಒದಗಿಸುವುದು ಸೂಕ್ತವೆಂದು ಪರಿಗಣಿಸಿದೆ. ಈ ಸಂಬಂಧ ಕರ್ನಾಟಕ ಕಂದಾಯ ನ್ಯಾಯಾಲಯದ ನಡವಳಿಗಳ ಕುರಿತು (ಆನ್ ಲೈನ್ ಸಲ್ಲಿಕೆ, ದೃಢೀಕರಣ ಮತ್ತು ಡಿಜಿಟಲೀಕರಣ) ಸರ್ಕಾರ 2025ರ ಆಗಸ್ಟ್ 29ರಂದು ಅಧಿಸೂಚನೆ ಹೊರಡಿಸಿದೆ. ಇದರಿಂದಾಗಿ ಕಂದಾಯ ನ್ಯಾಯಾಲಯಗಳು ನಿರ್ವಹಣೆಯನ್ನು ಕಡ್ಡಾಯವಾಗಿ ಆರ್‌ಸಿಎಂಎಸ್ ತಂತ್ರಾಂಶದಲ್ಲಿಯೇ ನಿರ್ದೇಶಿಸಲಾಗಿರುತ್ತದೆ ಎಂದು ಸದನಕ್ಕೆ ಮಾಹಿತಿ ನೀಡಿದರು.

## ಉರುಳಿಗೆ ಸಿಕ್ಕಿ ಹುಲಿ ಸಾವು

ವರದಿಗಾಗಿ ಕಾಯಲಾಗುತ್ತಿದೆ ಎಂದು ಮಡಿಕೇರಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಅಭಿಷೇಕ್ ವಿ ತಿಳಿಸಿದ್ದಾರೆ.

# ಡಿ.21ಕ್ಕೆ ಫ್ರೀಡಂ ಪಾರ್ಕ್‌ನಲ್ಲಿ ಜನದನಿ ರ್‍ಯಾಲಿ

ಮೈಸೂರು: ರಾಜ್ಯದಲ್ಲಿ ಪರ್ಯಾಯ ರಾಜಕಾರಣಕ್ಕಾಗಿ ಜನರ ಮನವೊಲಿಕೆ ಹಾಗೂ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಜನವಿರೋಧೀ, ಕಾರ್ಮಿಕ, ರೈತ ವಿರೋಧಿ ಧೋರಣೆ ಖಂಡಿಸಿ ಡಿ.21ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ವತಿಯಿಂದ ಪರ್ಯಾಯ ರಾಜಕಾರಣಕ್ಕಾಗಿ ಸಿಪಿಐ (ಎಂ) ಜನದನಿ ರ?ಯಾಲಿ ಆಯೋಜಿಸಲಾಗಿದೆ ಎಂದು ಜಿಲ್ಲಾ ಕಾರ್ಯದರ್ಶಿ ಜಗದೀಶ್ ಸೂರ್ಯ ತಿಳಿಸಿದರು.

ನಗರದಲ್ಲಿ ಸುದಿಗಾರರೊಡನೆ ಮಾತನಾಡಿ, ಇದರಲ್ಲಿ ರಾಜ್ಯದ ಎಲ್ಲ ಜಿಲ್ಲೆಗಳಿಂದ ಸುಮಾರು 40 ಸಾವಿರ ಮಂದಿ ಪಾಲ್ಗೊಳ್ಳಲಿದ್ದಾರೆ, ಮೈಸೂರಿನಿಂದ ಸುಮಾರು ಒಂದೂವರೆ ಸಾವಿರ ಮಂದಿ ತೆರಳಲಿದ್ದಾರೆ. ಮಧ್ಯಮ, ಬಡ ರೈತರು, ಬಗರ್‌ಹುಕುಂ ಸಾಗುವಳಿದಾದರರು, ಭೂಸ್ವಾಧೀನ ವಿರೋಧೀ ಹೋರಾಟ ನಿರತ ಸಂತ್ರಸ್ತ ರೈತರು, ಅಸಂಘಟಿಕ ವಲಯದ ಕಾರ್ಮಿಕರು, ಸರ್ಕಾರಿ ವಲಯದ ಯೋಜನಾ ಕಾರ್ಮಿಕರು, ಖಾಸಗಿ ಸರ್ಕಾರಿ ವಲಯಗಳ ಗುತ್ತಿಗೆ ನೌಕರರು, ಗ್ರಾಮೀಣ ವಲಯದ ಉದ್ಯೋಗ ಖಾತ್ರಿ, ಕೃಷಿ ಕೂಲಿಕಾರರು, ಮಹಿಳೆಯರು, ವಿದ್ಯಾರ್ಥಿ, ಯುವಜನರು ಭಾಗಿಯಾಗಲಿದ್ದಾರೆಂದರು. ಅಂದು ಬೆಳಗ್ಗೆ 11ಕ್ಕೆ ಅಲ್ಲಿ ಪ್ರತಿಭಟನಾ ಧರಣಿ ಪ್ರಾರಂಭವಾಗಲಿದೆ. ಸಿಎಂ ಸಿದ್ದರಾಮಯ್ಯ ತಾವು ಭೇಟಿ ನೀಡುವುದಾಗಿ ಭರವಸೆ ನೀಡಿದ್ದಾರೆ. ಇನ್ನಿತರ ಸಚಿವರೂ ಇರುವರು, ಇವರಿಗೆ ಜನದನಿ ರ?ಯಾಲಿ




ಅಂಗವಾಗಿ ವಿವಿಧೆಡೆ ಸಂಗ್ರಹಿಸಿದ ಸಹಿ ಪ್ರತಿಯನ್ನು ಸಲ್ಲಿಸಲಾಗುವುದು, ರಾಷ್ಟ್ರಪತಿಗಳಿಗೂ ಸಹಾ ರಾಜ್ಯಪಾಲರ ಮೂಲಕ ಸಹಿ ಸಂಗ್ರಹದ ಪ್ರತಿ ರವಾನಿಸಲಾಗುವುದೆಂದರು. ಕೃಷಿ ಬಿಕ್ಕಟ್ಟು, ಬಲವಂತದ ಭೂ ಸ್ವಾಧೀನ, ಕಾರ್ಮಿಕರ ಹಕ್ಕುಗಳನ್ನು ಮೊಟಕುಗೊಳಿಸುವುದು, ನಿರುದ್ಯೋಗ, ಭ್ರಷ್ಟಾಚಾರ, ಶಿಕ್ಷಣ ಕ್ಷೇತ್ರದ ಅವ್ಯವಸ್ಥೆ, ಆರೋಗ್ಯ ಕ್ಷೇತ್ರದಲ್ಲಿನ ಖಾಸಗೀಕರಣ, ಪಡಿತರ ವ್ಯವಸ್ಥೆಯಲ್ಲಿನ ಲೋಪ, ಮಹಿಳೆಯರು, ದಲಿತರ ಮೇಲಿನ ದೌರ್ಜನ್ಯ, ಕೋಮುವಾದ, ಜಾತಿವಾದ, ಸೇವೆಗಳ ಖಾಸಗೀಕರಣ, ಶ್ರೀಮಂತರು– ಬಡವರ ನಡುವಿನ ಅಸಮಾನತೆ ಹೆಚ್ಚಳ ಮೊದಲಾದ ವಿಷಯಗಳನ್ನು ಈ ರ?ಯಾಲಿ ಕೇಂದ್ರೀಕರಿಸಿಕೊಂಡಿದೆ ಎಂದು ಮಾಹಿತಿ ನೀಡಿದರು. ಕಾರ್ಮಿಕ ಮುಖಂಡರಾದ ಕೆ.ಬಸವರಾಜು, ಜಿ.ಜಯರಾಂ, ಶಕುಂತಲಾ, ರಾಜೇಂದ್ರ ಇದ್ದರು.

# 14,077 ಪ್ರಕರಣ ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ ಇತ್ಯರ್ಥ

ಮೈಸೂರು: ಮೈಸೂರು ನಗರ ಮತ್ತು ತಾಲ್ಲೂಕುಗಳಲ್ಲಿನ ನ್ಯಾಯಾಲಯಗಳಲ್ಲಿ ಒಟ್ಟು 1,30,887 ಪ್ರಕರಣಗಳು ವಿಚಾರಣೆಗೆ ಬಾಕಿಯಿದ್ದು, ಅವುಗಳ ಪೈಕಿ 65,170 ಸಿವಿಲ್ ಪ್ರಕರಣಗಳು ಹಾಗೂ 65,666 ಕ್ರಿಮಿನಲ್ ಪ್ರಕರಣಗಳಿದ್ದು, ಪ್ರಸ್ತುತ ಸದರಿ ಪ್ರಕರಣಗಳಲ್ಲಿ 49,645 ಪ್ರಕರಣಗಳನ್ನು ರಾಜಿಯಾಗಬಹುದಾದ ಪ್ರಕರಣಗಳಿದ್ದು, ಅವುಗಳ ಪೈಕಿ 26,694 ರಾಜಿ ಸಂಧಾನಕ್ಕಾಗಿ ತೆಗೆದುಕೊಳ್ಳಲಾಗಿತ್ತು. ರಾಜಿ ಸಂಧಾನಕ್ಕಾಗಿ ತೆಗೆದುಕೊಂಡ ಪ್ರಕರಣಗಳಲ್ಲಿ (ನ್ಯಾಯಾಲಯದಲ್ಲಿ ಬಾಕಿ ಇರುವ) 14,077 ಪ್ರಕರಣಗಳನ್ನು ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ ಇತ್ಯರ್ಥಪಡಿಸಲಾಗಿರುತ್ತದೆ.

ನವದೆಹಲಿ ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ಬೆಂಗಳೂರು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ನಿರ್ದೇಶನದಂತೆ ಡಿ.13ರಂದು ಮೈಸೂರು ಜಿಲ್ಲೆಯನ್ನೊಳಗೊಂಡಂತೆ ರಾಜ್ಯಾದ್ಯಂತ ಎಲ್ಲಾ ನ್ಯಾಯಾಲಯಗಳಲ್ಲಿ ಬಾಕಿಯಿರುವ ಪ್ರಕರಣಗಳಲ್ಲಿ ಕಾನೂನಿನ ಪ್ರಕಾರ ರಾಜಿಯಾಗಬಹುದಾದ ಪ್ರಕರಣಗಳನ್ನು ಮತ್ತು ವಾಜ್ಯ ಪೂರ್ವ ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಇತ್ಯರ್ಥಪಡಿಸುವ ಉದ್ದೇಶದಿಂದ ರಾಷ್ಟ್ರೀಯ ಲೋಕ್ ಅದಾಲತ್‌ನ್ನು ಹಮ್ಮಿಕೊಳ್ಳಲಾಗಿದೆ.

ಈ ಬಾರಿಯ ಲೋಕ್ ಅದಾಲತ್‌ನಲ್ಲಿ ವಿಶೇಷವಾಗಿ ಟ್ರಾಫಿಕ್ ಚಾಲನ್ ಶೇ.50ಗೆ ಸಂಬಂಧಿಸಿದ ಪ್ರಕರಣಗಳಲ್ಲಿ ಜಿಲ್ಲೆಯಾದ್ಯಂತ ಒಟ್ಟು 10,41,732 ಪ್ರಕರಣಗಳು ವಿಲೇವಾರಿಯಾಗಿದ್ದು, ಸದರಿ ಪ್ರಕರಣಗಳಲ್ಲಿ ಒಟ್ಟು ರೂ. 23,61,37,150/– ಗಳು ಸ್ವೀಕೃತವಾಗಿರುತ್ತದೆ. ಸಾರಿಗೆ ಇಲಾಖೆಯಲ್ಲಿ 1991–92 ರಿಂದ 2019–20 ರ ಅವಧಿಯಲ್ಲಿ ದಾಖಲಾಗಿ, ಪಾವತಿಗೆ ಬಾಕಿಯಿರುವ ಪ್ರಕರಣಗಳ ಮೊತ್ತದಲ್ಲಿ ಶೇಕಡ 50% ರಷ್ಟು ರಿಯಾಯಿತಿಯನ್ನು ನೀಡಿದ್ದು, ಜಿಲ್ಲೆಯಾದ್ಯಂತ ಒಟ್ಟು 116 ಪ್ರಕರಣಗಳು ಇತ್ಯರ್ಥವಾಗಿದ್ದು, 141,900ಗಳು ಸ್ವೀಕೃತವಾಗಿರುತ್ತದೆ. ಕೌಟುಂಬಿಕ ವಿವಾದದ ಪ್ರಕರಣಗಳಲ್ಲಿ ಮೈಸೂರು ನಗರ ಹಾಗೂ




ಮೈಸೂರು ತಾಲ್ಲೂಕು ನ್ಯಾಯಾಲಯಗಳಿಗೆ ಸಂಬಂಧಿಸಿದಂತೆ ಒಟ್ಟು 42 ದಂಪತಿಗಳು ತಮ್ಮ ಮಧ್ಯದ ವಾಜ್ಯಗಳನ್ನು ಬಗೆಹರಿಸಿಕೊಂಡು ಒಂದಾಗಿರುತ್ತಾರೆ. ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ ಒಟ್ಟಾರೆಯಾಗಿ 14,077 ನ್ಯಾಯಾಲಯದಲ್ಲಿ ಬಾಕಿಯಿದ್ದ ಪ್ರಕರಣಗಳು ತೀರ್ಮಾನವಾಗಿರುತ್ತದೆ. ಎಲ್ಲಾ ಪ್ರಕರಣಗಳಿಗೆ ಸಂಬಂಧಿಸಿದಂತೆ ರಾಜಿ ಸಂಧಾನ ಮೂಲಕ ಒಟ್ಟು 73,55,63,277 ಮೊತ್ತಗಳು ಇತ್ಯರ್ಥವಾಗಿರುತ್ತದೆ. ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಉಷಾರಾಣಿ ಕೃತಜ್ಞತೆಯನ್ನು ಸಲ್ಲಿಸಿದರು. ಹಿರಿಯ ಸಿವಿಲ್ ನ್ಯಾಯಾಧೀಶ ಅಮರ್‌ನಾಥ್, ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್, ಕಾರ್ಯದರ್ಶಿ ಎ.ಜಿ.ಸುಧೀರ್ ಇತರರು ಹಾಜರಿದ್ದರು.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

ಮೊದಲ ಪುಟದಿಂದ

## ಅಧಿವೇಶನದಲ್ಲಿ 'ಗೃಹಲಕ್ಷ್ಮಿ ಕೋಲಾಹಲ'

ಉಪಸ್ಥಿತಿಯನ್ನು ಕೋರಿ ಸದನದ ಬಾವಿಗೆ ನುಗ್ಗಿದರು. ಇದು ಕಲಾಪ ಮುಂದೂಡಿಕೆಗೆ ಕಾರಣವಾಯಿತು.

### ಹೆಬ್ಬಾಳ್ಕರ್ ಬೆನ್ನಿಗೆ ನಿಂತ ಡಿಕೆಶಿ

ಹಣಕ್ಕಾಗಿ ಕಾತರದಿಂದ ಕಾಯುತ್ತಿದ್ದ 1.26 ಕೋಟಿ ಫಲಾನುಭವಿಗಳಿಗೂ ನೋವಾಗಿದೆ ಎಂದು ಈ ವಿಷಯವನ್ನು ಎತ್ತಲಾಗಿದೆ. ಸುಳ್ಳನ್ನು ಸದನದ ದಾಖಲೆಗಳಿಂದ ತೆಗೆದುಹಾಕಬೇಕೆಂದು ಒತ್ತಾಯಿಸಿ, ಬಾಕಿ ಹಣವನ್ನು ಫಲಾನುಭವಿಗಳಿಗೆ ಯಾವಾಗ ಪಾವತಿಸಲಾಗುವುದು ಎಂದು ದಿನಾಂಕವನ್ನು ಘೋಷಿಸಬೇಕು ಎಂದು ಒತ್ತಾಯಿಸಿದರು.

### ತಪ್ಪು ಒಪ್ಪಿಕೊಂಡ ಹೆಬ್ಬಾಳ್ಕರ್

ಗೃಹಲಕ್ಷ್ಮಿ ಯೋಜನೆಯ ಎರಡು ತಿಂಗಳ ಹಣ ಪಾವತಿ ಮಾಡದಿದ್ದರೂ ಸದನಕ್ಕೆ ಮಾಹಿತಿ ನೀಡುವಲ್ಲಿ ವಿಫಲವಾಗಿರುವ ಬಗ್ಗೆ ತಮ್ಮ ತಪ್ಪು ಒಪ್ಪಿಕೊಂಡರು. ನನಗೆ ಜವಾಬ್ದಾರಿಯ ಅರಿವಿದ್ದು, ಹಣಕಾಸು ಸಚಿವರೂ ಆಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಚರ್ಚಿಸಿ ಸಮಸ್ಯೆ ಬಗೆಹರಿಸುವುದಾಗಿ ಭರವಸೆ ನೀಡಿದರು.

### 15 ವರ್ಷ ಮೀರಿದ ವಾಹನ ಗುಜರಿಗೆ

ಆರ್‌ವಿಎಸ್ ಎಫ್ ನಲ್ಲಿ ಒಟ್ಟು 1,493 ವಾಹನಗಳನ್ನು ಆಫ್ ಮಾಡಲಾಗಿದೆ ಮತ್ತು 17,059 ವಾಹನಗಳನ್ನು ಆಫ್ ಮಾಡುವುದು ಬಾಕಿ ಇದೆ ಎಂದು ತಿಳಿಸಿದರು.

2023ರಿಂದ ಇಲ್ಲಿವರೆಗೆ ರಾಜ್ಯದ ನಾಲ್ಕು ಸಾರಿಗೆ ನಿಗಮಗಳ 3212 ವಾಹನಗಳು ನಿಷ್ಕ್ರೀಯಗೊಂಡಿವೆ. 579 ವಾಹನಗಳನ್ನು ನಿಷ್ಕ್ರೀಯಗೊಳಿಸಲು ಬಾಕಿ ಇದೆ ಎಂದು ಸಚಿವ ರಾಮಲಿಂಗಾರೆಡ್ಡಿ ಮಾಹಿತಿ ನೀಡಿದ್ದಾರೆ.

### ಬೌದ್ಧ ಬಿಕ್ಕುಗಳಿಗೆ ಮಾಸಾಸನ

ನೀಡಿದರು. ಜೈನ ಬಸದಿ ಅರ್ಚಕರಿಗೆ 6 ಸಾವಿರ, ಸಹಾಯಕ ಅರ್ಚಕರಿಗೆ 5 ಸಾವಿರ ಕೊಡಲಾಗುತ್ತಿದೆ. ಪೇಶ್ ಇಮಾಮ್‌ಗಳಿಗೆ 6 ಸಾವಿರ ಮತ್ತು ಮುಯೀಜ್ಜನ್‌ಗೆ 5 ಸಾವಿರ ಮಾಸಿಕ ಗೌರವಧನ ಕೊಡಲಾಗುತ್ತಿದೆ. ಬೌದ್ಧ ಬಿಕ್ಕುಗಳಿಗೆ ಸರ್ಕಾರ ಮಾಸಿಗ ಗೌರವ ಧನ ಕೊಡಲಿದೆ. ಶೀಘ್ರವೇ ಗೌರವ ಧನ ಕೊಡುತ್ತೇವೆ ಎಂದು ಸಚಿವರು ಘೋಷಿಸಿದರು.

### ವಿಪಕ್ಷ ಗುರಿಯಾಗಿಸಿ ದ್ವೇಷ ರಾಜಕೀಯ: ಖರ್ಗೆ ವಾಗ್ದಾಳಿ

ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ರಾಜೀನಾಮೆ ನೀಡಬೇಕೆಂದು ಆಗ್ರಹಿಸಿದರು. ನ್ಯಾಷನಲ್ ಹೆರಾಲ್ಡ್ ಪತ್ರಿಕೆಯನ್ನು ಪ್ರಕಟಿಸುವ ಅಸೋಸಿಯೇಟೆಡ್ ಜರ್ನಲ್ಸ್ ಲಿಮಿಟೆಡ್ ಗೆ ಸೇರಿದ ಸುಮಾರು 2,000 ಕೋಟಿ ರೂ. ಮೌಲ್ಯದ ಆಸ್ತಿಗಳನ್ನು ಅಕ್ರಮವಾಗಿ ಸಂಪಾದಿಸಿದ್ದಾರೆ ಎಂದು ಆರೋಪಿಸಲಾಗಿದೆ. ಯಂಗ್ ಇಂಡಿಯನ್‌ನಲ್ಲಿ ಸೋನಿಯಾ ಗಾಂಧಿ ಕುಟುಂಬ ಬಹುಪಾಲು ಶೇಕಡಾ 76ರಷ್ಟು ಷೇರುಗಳನ್ನು ಹೊಂದಿದೆ.

ಪುಟದಿಂದ

## ಗಾಂಧೀಜಿ ಬಗ್ಗೆ ಬಿಜೆಪಿಗೆ ದ್ವೇಷ

ಎಂದು ಆರೋಪಿಸಿದರು.

ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ ಕೇವಲ ಒಂದು ಕಲ್ಯಾಣ ಕಾರ್ಯಕ್ರಮವಲ್ಲ. ಇದು ಉದ್ಯೋಗ ಭದ್ರತೆ ಮತ್ತು ಸಾಮಾಜಿಕ ನ್ಯಾಯದ ಸಂಕೇತವೂ ಆಗಿದೆ. ಮಹಾತ್ಮ ಗಾಂಧಿ ಹೆಸರನ್ನು ಒಳಗೊಳ್ಳುವ ಮೂಲಕ ಈ ಯೋಜನೆಗೆ ನೈತಿಕ ಮೌಲ್ಯದ ಆಯಾಮವು ದೊರೆತಿದೆ. ಮಹಾತ್ಮ ಗಾಂಧಿಯವರ ಗ್ರಾಮ ಸ್ವರಾಜ್ಯದ ಕನಸನ್ನು ನನಸಾಗಿಸಲು ಶ್ರಮಿಸುತ್ತಿರುವ ಮನರೇಗಾದ ಹೆಸರು ಬದಲಿಸಲು ಹೊರಟಿರುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಎಲ್ಲರೂ ಖಂಡಿಸಲೇಬೇಕು. ಮನರೇಗಾ ಯೋಜನೆಯ ಹೆಸರು ಬದಲಿಸುವ ಹುನ್ನಾರ ಯಾಕೆ? ಇದು ಎಂತಹ ಮತಿಗೇಡಿತನದ ನಿರ್ಧಾರ? ಎಂದು ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

ವಿದೇಶಗಳಲ್ಲಿ ಗಾಂಧಿಯವರನ್ನು ಜಪಿಸುವ ಪ್ರಧಾನಿಗಳು ತಮ್ಮದೇ ದೇಶದಲ್ಲಿ ಗಾಂಧಿ ಹೆಸರಿಗೆ ಅಪಚಾರ ಮಾಡಲು ಹೊರಟಿರುವುದು ಖಂಡನೀಯ ಎಂದು ಸಿದ್ದರಾಮಯ್ಯ ಕಿಡಿಕಾರಿದರು.


**ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು**
ಝಾನ್ಸಿಲಕ್ಷ್ಮೀಬಾಯಿ ರಸ್ತೆ, ಮೈಸೂರು – 570 005

ಸಂಖ್ಯೆ: ಮೈಅಪ್ರಾ:ನಯೋಶಾ:ಭೂಉಬ:ನಯೋ–1:2025–26/E-40156 ದಿನಾಂಕ: 15.12.2025

**ಸಾರ್ವಜನಿಕ ಪ್ರಕಟಣೆ**

**ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಪ್ರಕರಣ 14(ಎ)ರನ್ವಯ** ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, **ಬೊಮ್ಮೇನಹಳ್ಳಿ** ಗ್ರಾಮದ **ಸ.ನಂ. 167 ರ 01 ಎಕರೆ 18 ಗುಂಟೆ** ವಿಸ್ತೀರ್ಣದ ಜಮೀನನ್ನು **ಕೆ.ಟಿ.ಸಿ.ಪಿ. ಕಾಯ್ದೆ 1961 ರ ಪ್ರಕರಣ 14(ಎ) ರನ್ವಯ ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡುವಂತೆ ಶ್ರೀ ಪಿ.ಎಸ್. ಪ್ರಭಾಕರ್** ಇವರು ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆಯಿಂದ **"ಈ ಜಮೀನುಗಳಲ್ಲಿ ವಿನ್ಯಾಸ ಅಭಿವೃದ್ಧಿ ಪಡಿಸುವುದರಿಂದ ಬಡವರು ಮತ್ತು ಮಧ್ಯಮ ವರ್ಗದವರಿಗೆ ಹಾಗೂ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತವೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವ ಸಂಧರ್ಭದಲ್ಲಿ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ ಮತ್ತು ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಲಿನ ಪ್ರದೇಶದ ಅಭಿವೃದ್ಧಿ ಹೊಂದುತ್ತದೆ"** ಮತ್ತು ಸಾರ್ವಜನಿಕ ಹಿತಾಸಕ್ತಿ ಕುರಿತು ಮನವಿಯಲ್ಲಿ ತಿಳಿಸಿರುತ್ತಾರೆ. ಸದರಿ ಜಮೀನಿನ ಭೂ ಉಪಯೋಗದ ಬದಲಾವಣೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಸಾರ್ವಜನಿಕರು ಈ ಪ್ರಕಟಣೆಯ ಪತ್ರಿಕೆಯಲ್ಲಿ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ನಗರ ಯೋಜಕ ಸದಸ್ಯರು, ಅಭಿವೃದ್ಧಿ ಪ್ರಾಧಿಕಾರ, ಮೈಸೂರು–570005 ಇವರಿಗೆ ಮುದ್ದಾಂ ಅಥವಾ ನೋಂದಾಯಿತ ಅಂಚೆ ಮೂಲಕ ತಲುಪಿಸಬಹುದಾಗಿದೆ.

KEY PLAN




ವಾಸಾಸಂಇ/ಮೈಸೂರು/1378/ ಶಿರಡಿಸಾಯಿ/2025–26

ಸಹಿ/– ನಗರ ಯೋಜಕ ಸದಸ್ಯರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು.

## ರಾಷ್ಟ್ರಕ್ಕಾಗಿ ವಿಶೇಷ ಅಭಿಯಾನ: ಮಧ್ಯಸ್ಥಿಕೆ

ಮೈಸೂರು: ರಾಷ್ಟ್ರಕ್ಕಾಗಿ ಕಾನೂನು ಸೇವೆಗಳ ಪ್ರಾಧಿಕಾರ, ನವದೆಹಲಿ ಹಾಗೂ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು ರವರ ನಿರ್ದೇಶನದಂತೆ ರಾಜ್ಯಾದ್ಯಂತ ದಿನಾಂಕ 02-01-2026 ರಿಂದ 90 ದಿನಗಳವರೆಗೆ "ರಾಷ್ಟ್ರಕ್ಕಾಗಿ ವಿಶೇಷ ಅಭಿಯಾನ – ಮಧ್ಯಸ್ಥಿಕೆ 90 ದಿನಗಳ ಅಭಿಯಾನ ಎಲ್ಲಾ ತಾಲೂಕು ನ್ಯಾಯಾಲಯಗಳು ಮತ್ತು ಜಿಲ್ಲಾ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳನ್ನು ಮಧ್ಯಸ್ಥಿಕೆಯ ಮೂಲಕ ಇತ್ಯರ್ಥಪಡಿಸುವ ಸಂಬಂಧ ಆಯೋಜಿಸಲಾಗಿದೆ.

ಸಾರ್ವಜನಿಕರು ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳಲ್ಲಿ ತಕ್ಷಣ ಪರಿಹಾರ ಪಡೆದುಕೊಳ್ಳಲು ಇದೊಂದು ಸುವರ್ಣಾವಕಾಶವಾಗಿದೆ. "ರಾಷ್ಟ್ರಕ್ಕಾಗಿ ವಿಶೇಷ ಅಭಿಯಾನ– ಮಧ್ಯಸ್ಥಿಕೆ 90 ದಿನಗಳ ಅಭಿಯಾನದಲ್ಲಿ ಈ ಕೆಳಗಿನ ಪ್ರಕರಣಗಳನ್ನು ರಾಜೀ ಮೂಲಕ ಇತ್ಯರ್ಥಪಡಿಸಿಕೊಳ್ಳಬಹುದಾಗಿದೆ. ರಾಜಿಯಾಗಬಲ್ಲ ಅಪರಾಧಿಕ ಪ್ರಕರಣಗಳು, ಮೋಟಾರು ಅಪಘಾತ ಪರಿಹಾರ ನ್ಯಾಯಾಧೀಕರಣದ ಪ್ರಕರಣಗಳು, ಬ್ಯಾಂಕ್ ವಸೂಲಾತಿ ಪ್ರಕರಣಗಳು, ಕಾರ್ಮಿಕ ವಿವಾದಗಳು, ಕೈಗಾರಿಕಾ ಕಾರ್ಮಿಕರ ವೇತನಕ್ಕೆ ಸಂಬಂಧಿಸಿದ ಕ್ಲೇಮುಗಳು, ಭೂಸ್ವಾಧೀನ ಪ್ರಕರಣಗಳ, ಚೆಕ್ಕು ಅಮಾನ್ಯದ ಪ್ರಕರಣಗಳು, ರಾಜಿಯಾಗಬಲ್ಲ ಸಿವಿಲ್ ಮತ್ತು ಇತರೆ ಪ್ರಕರಣಗಳು, ವೈವಾಹಿಕ, ಟುಂಬ ನ್ಯಾಯಾಲಯದ ಪ್ರಕರಣಗಳು (ವಿಚ್ಛೇದನೆಯನ್ನು ಹೊರತುಪಡಿಸಿ), ನ್ಯಾಯಾಲಯಗಳಲ್ಲಿ ಉಭಯ ಪಕ್ಷಕಾರರು ರಾಜೀ ಮಾಡಿಕೊಳ್ಳಲು ಸೂಕ್ತ ಮಾರ್ಗದರ್ಶನ ಮಾಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಂಪರ್ಕವಾಣಿ 15100 ತಾಲ್ಲೂಕುಗಳಿಗೆ ಸಂಬಂಧಿಸಿದಂತೆ ತಾಲ್ಲೂಕು ಕಾನೂನು ಸೇವಾ ಸಮಿತಿಗಳನ್ನು ನೇರವಾಗಿ ಸಂಪರ್ಕಿಸಬಹುದು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಇತರರು ತಿಳಿಸಿದ್ದಾರೆ.

# ಮುಂದಿನ ಪೀಳಿಗೆಗೆ ರಾಷ್ಟ್ರ ಪ್ರಾಮುಖ್ಯತೆ ತಿಳಿಸೋಣ

### ನಿವೃತ್ತ ಪ್ರಾಧ್ಯಾಪಕಿ ಪ್ರೊ.ಅಸ್ನಾ ಉರೂಜ್ ಕರೆ | ಐಕ್ಯತಾ ಸಪ್ತಾಹ ದಿನ



ಮೈಸೂರು: ಹಿಂದೆಲ್ಲಾ ಬಳಷ್ಟು ನಾಯಕರಿದ್ದರೂ ಅವರಿಗೆಲ್ಲಾ ಧರ್ಮ ಮುಖ್ಯ ಆಗಿರಲಿಲ್ಲ. ರಾಷ್ಟ್ರವನ್ನು ಮುಖ್ಯವಾಗಿಸಿಕೊಂಡಿದ್ದರು. ನಮ್ಮ ಮುಂದಿನ ಪೀಳಿಗೆಗೂ ನಾವು ರಾಷ್ಟ್ರ ಮುಖ್ಯ ಎಂಬುದನ್ನು ತಿಳಿಸಿಕೊಂಡು ಕಾಪಾಡಿಕೊಂಡು ಹೋಗಬೇಕಾದ ಜವಾಬ್ದಾರಿ ನಮ್ಮ ಮೇಲಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕಿ ಪ್ರೊ.ಅಸ್ನಾ ಉರೂಜ್ ತಿಳಿಸಿದರು.


ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಆಡಳಿತ ಭವನದ ಸಭಾಂಗಣದಲ್ಲಿ ಬುಧವಾರ ನಡೆದ ರಾಷ್ಟ್ರೀಯ ಐಕ್ಯತಾ ಸಪ್ತಾಹ ದಿನಾಚರಣೆ ಅಂಗವಾಗಿ ಆಯೋಜಿಸಲಾಗಿದ್ದ ಅಲ್ಪಸಂಖ್ಯಾತರ ಕಲ್ಯಾಣ ದಿನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಮ್ಮ ದೇಶದಲ್ಲಿ ವೈವಿಧತೆಯಲ್ಲಿ ಏಕತೆ ಇದೆ. ಬೇರೆ ಬೇರೆ ಧರ್ಮದವರು, ಬೇರೆ ಬೇರೆ ಭಾಷೆ ಮಾತನಾಡುವವರು ಇದ್ದಾರೆ. ಇಷ್ಟೆಲ್ಲಾ ವೈವಿಧತೆ ಇದ್ದರೂ ಸಹ ನಮ್ಮಲ್ಲಿ ಏಕತೆ ಇದೆ. ಇಲ್ಲಿಯವರೆಗೂ ನಾವೆಲ್ಲರೂ ಒಟ್ಟಿಗೆ ಏಕತೆಯಿಂದ ಬಂದಿದ್ದೇವೆ. ಇದನ್ನೇ ನಾವು ಮುಂದುವರೆಸಿಕೊಂಡು ಹೋಗಬೇಕು. ಇದರ ಬಗ್ಗೆ ನಮ್ಮ ಮಕ್ಕಳಿಗೂ ನಾವು ತಿಳಿಸಬೇಕು ಎಂದರು.

ಡಾ.ಬಿ.ಬಿ.ಆರ್.ಅಂಬೇಡ್ಕರ್ ಅವರ ದೂರದೃಷ್ಟಿಯ ಮಹತ್ವ ಈಗ ನಮಗೆ ತಿಳಿಯುತ್ತಿದೆ. ಅಷ್ಟರ ಮಟ್ಟಿಗೆ ಅವರು ಆಲೋಚಿಸಿ ಹಲವಾರು ಅಂಶಗಳನ್ನು ಸಂವಿಧಾನದಲ್ಲಿ ಅಳವಡಿಸಿದ್ದಾರೆ. ನಾವು ಸಂವಿಧಾನವನ್ನು ಸರಿಯಾಗಿ ಪಾಲಿಸಿದರೆ ಖಂಡಿತವಾಗಿಯೂ ನಮ್ಮ ದೇಶದಲ್ಲಿ ಯಾವುದೇ ಗಲಭೆ, ಸಂಘರ್ಷಗಳು ನಡೆಯುವುದಿಲ್ಲ. ಇತರ ದೇಶಗಳಂತೆ ಭಾರತದಲ್ಲಿಯೂ ಸಹ ಅಲ್ಪಸಂಖ್ಯಾತರಿದ್ದಾರೆ. ಸಂವಿಧಾನ ನೀಡಿರುವ ಹಕ್ಕುಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕು. ಹಿಂದೆ ಧರ್ಮ ಮುಖ್ಯವಾಗಿರಲಿಲ್ಲ. ರಾಷ್ಟ್ರ ಮುಖ್ಯವಾಗಿರುತ್ತಿತ್ತು. ಅದನ್ನು ನಾವು ನಮ್ಮ ಮುಂದಿನ ಪೀಳಿಗೆಗೆ ತಿಳಿಸಬೇಕು. ಇದನ್ನು ಕಾಪಾಡಿಕೊಂಡು ಹೋಗುವ ದೊಡ್ಡ ಜವಾಬ್ದಾರಿ ನಮ್ಮ ಮೇಲಿದೆ ಎಂದು ಹೇಳಿದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಮಾತನಾಡಿ, ಸಮ ಸಮಾಜ ನಿರ್ಮಿಸಬೇಕಾದರೆ ಪ್ರತಿಯೊಬ್ಬರಿಗೂ ಸಮಾನ ಹಕ್ಕು ನೀಡಬೇಕು. ಶಿಕ್ಷಣ ಬಹಳ ಮುಖ್ಯ. ಅಲ್ಪ ಸಂಖ್ಯಾತರ ಮಕ್ಕಳಿಗೆ ಶಿಕ್ಷಣ ಕೊಟ್ಟರೆ ಸಮಾನತೆ ಬೆಳೆಯುತ್ತದೆ ಹಾಗೂ ಸಮ ಸಮಾಜ ನಿರ್ಮಿಸಲು ಸಾಧ್ಯವಾಗುತ್ತದೆ. ಅಲ್ಪ ಸಂಖ್ಯಾತರು ಸರ್ಕಾರ ನೀಡಿರುವ ಸೌಲಭ್ಯಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕು. ನಮ್ಮ ವಿಶ್ವವಿದ್ಯಾನಿಲಯದಲ್ಲಿ 5 ಸಾವಿರ ಮೇಲ್ಪಟ್ಟ ಅಲ್ಪ ಸಂಖ್ಯಾತ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡಲಾಗುತ್ತಿದ್ದು, ಈಗಾಗಲೇ 5,300 ಅಲ್ಪ ಸಂಖ್ಯಾತರ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡಲಾಗುತ್ತಿದೆ. ಅಲ್ಪ ಸಂಖ್ಯಾತರ ವಿದ್ಯಾರ್ಥಿಗಳಿಗಾಗಿ ಸರ್ಕಾರ 500 ಕೋಟಿ ರೂ ಹಣ ನೀಡಿದೆ ಎಂದು ಹೇಳಿದರು.

ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೂ ಅವಕಾಶ ನೀಡಿದರೆ ಅವರು ಬೆಳೆಯುತ್ತಾರೆ. ಹೀಗಾಗಿ ಇವರಿಗೆ ಸೌಲಭ್ಯ ನೀಡಲು ಸರ್ಕಾರ ಹಲವಾರು ಯೋಜನೆಗಳನ್ನು ಜಾರಿಗೆ ತಂದಿದೆ. ಇಂತಹ ಯೋಜನೆಗಳನ್ನು ಚಾಚೂ ತಪ್ಪದೆ ಬಳಸಿಕೊಂಡರೆ ಸಮ ಸಮಾಜ ನಿರ್ಮಾಣ ಸಾಧ್ಯ. ನಮ್ಮ ದೇಶದಲ್ಲಿ ಹಲವಾರು ಜಾತಿ, ಪಂಗಡ, ಧರ್ಮ ಇದ್ದರೂ ಮಾನವ ಮೌಲ್ಯಧಾರಿತ ಜೀವನ ನಡೆಸಬೇಕು. ಯಾವುದೇ ಸಮಾಜ, ಧರ್ಮ ಕೆಟ್ಟದನ್ನು ಮಾಡಿ ಎಂದು ಹೇಳುವುದಿಲ್ಲ ಎಂದರು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ.ಎನ್.ಕೆ.ನವೀನ್ ಕುಮಾರ್, ಪರಿಕ್ಷಾಂಗ ಕುಲಸಚಿವ ಆನಂದ್ ಕುಮಾರ್, ಶೈಕ್ಷಣಿಕ ವಿಭಾಗದ ಡೀನ್ ಪ್ರೊ.ಎಂ.ರಾಮನಾಥಂ ನಾಯುಡು, ಕಾರ್ಯಕ್ರಮದ ಸಂಯೋಜನಾಧಿಕಾರಿಗಳಾದ ಮೊಹಮ್ಮದ್ ನಸ್ರುಲ್ಲಾ ಖಾನ್, ಡಾ.ಸೈಯದ ಇಶ್ರತ್–ಫಾತಿಮಾ ಇನ್ನಿತರರು ಉಪಸ್ಥಿತರಿದ್ದರು.

## ಕೃಷ್ಣ ವಂದನ



ಸ್ನೇಹಾ ಆನಂದ್



### ಹೇ ಕೃಷ್ಣಾ!

ನಂಬಿ ಕೆಟ್ಟವರಿಲ್ಲವೋ ಕೃಷ್ಣನ ಪಾದ
ನಂಬಿ ಕೆಟ್ಟವರಿಲ್ಲವೋ ಕೇಶವನ ಪಾದ!

ನಂಬದೇ ಹೋದರೆ ಕಂಬ ಒಡೆದು ಬಂದ
ನರಸಿಂಹ ರೂಪವ ಕಂಡನು ಹಿರಣ್ಯನು!
ಕಂಸನ ಕೊಂದನು ಹಿಂಸೆಯ ತಡೆದು
ಹಂಸನಾಮಕನಾದ ಶ್ರೀಹರಿ ಎನಿಸಿದ ಕೃಷ್ಣನು

ಕೌರವರ ಕೆಟ್ಟತನಕೆ ಕೊಟ್ಟನು ಪೆಟ್ಟು
ಪಾಂಡವರ ಪಕ್ಷಕೆ ನೀಡಿದ ಅಭಯವ ಕೊಟ್ಟು
ಕೃಷ್ಣ, ಕೃಷ್ಣ ಎಂದ ದ್ರೌಪದಿಯ ಕೈ ಪಿಡಿದ
ದುರುಳರ ಸಂಚನು ಇಂಚಿಂಚು ತೋರಿದ!

ಬೆಟ್ಟವನೆತ್ತಿದ ರಂಗ ಕೈ ಬೆರಳಿನಲ್ಲೇ
ಸರ್ಪದ ಹೆಡೆ ಮುರಿದ ಗೆಳೆಯರ ಸಂಗದಲ್ಲೆ
ಹೇಮಗಿರೀಶನೆಂದು ಬಿರುದು ಪಡೆದು
ಭಕ್ತರ ಅಭಿಷ್ಟೆಯ ತೀರಿಸಿ ನಡೆದು!

## ಮಹಿಳೆಯರಿಗಾಗಿ "ಆಟೋಟ" ಸ್ಪರ್ಧೆ

ಮೈಸೂರು: ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ವತಿಯಿಂದ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ 2025ರ ದಸರಾ ವಸ್ತು ಪ್ರದರ್ಶನವನ್ನು ಡಿ.20ರವೆರೆಗೆ ಆಯೋಜಿಸಲಾಗಿದ್ದು, ಈ ಸಂಬಂದ ಡಿ.18ರಂದು ಮಧ್ಯಾಹ್ನ 1 ಗಂಟೆಗೆ ವಸ್ತು ಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ಮಹಿಳಾ ಮತ್ತು ಮಕ್ಕಳ ಉಪ ಸಮಿತಿಯ ವತಿಯಿಂದ ಮಹಿಳೆಯರಿಗಾಗಿ "ಆಟೋಟ" ಸ್ಪರ್ಧಾ ಕಾರ್ಯಕ್ರಮ ಆಯೋಜಿಸಲಾಗಿದೆ.

ಮಹಿಳೆಯರ ವಯೋಮಿತಿಯು 18 ರಿಂದ 40 ಮತ್ತು 40 ರಿಂದ 60 ವರ್ಷ ವಯೋಮಿತಿಯುಳ್ಳ ಮಹಿಳೆಯರು ಸ್ಪರ್ಧೆಯಲ್ಲಿ ಭಾಗವಹಿಸಲು ಇಚ್ಛಿಸುವವರು. ತಮ್ಮ ಹೆಸರುಗಳನ್ನು ಮಹಿಳಾ ಮತ್ತು ಮಕ್ಕಳ ಉಪಸಮಿತಿ ಅಧ್ಯಕ್ಷ ಭವ್ಯ ಅಭಿಷೇಕ್ ಮೊ.ಸಂ.9844278737, ಅನುಸೂಯ ಮೊ.ಸಂ.9110213807ಗಳನ್ನು ಸಂಪರ್ಕಿಸಿ ನೊಂದಾಯಿಸಿಕೊಳ್ಳಬಹುದಾಗಿದೆ. ಮಹಿಳಾ ಮತ್ತು ಮಕ್ಕಳ ಉಪಸಮಿತಿ ಪರವಾಗಿ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಆಕರ್ಷಕ ಬಹುಮಾನ ನೀಡಲಾಗುವುದು ಎಂದು ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ತಿಳಿಸಿದ್ದಾರೆ.

## 'ವನ್ಯಜೀವಿ ವಿಜ್ಞಾನ'ಕುರಿತು ವಿಶೇಷ ಉಪನ್ಯಾಸ

ಮೈಸೂರು: ವನ್ಯಜೀವಿ ಸಂರಕ್ಷಣಾ ಕ್ಷೇತ್ರದಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರಾಂತ ವಿಜ್ಞಾನಿಯಾಗಿರುವ ಹಾಗೂ ಪ್ರತಿಷ್ಠಿತ ಭಾರತೀಯ ರಾಷ್ಟ್ರೀಯ ವಿಜ್ಞಾನ ಅಕಾಡೆಮಿಯಿಂದ ಫೆಲೋಷಿಪ್ ಪಡೆದಿರುವ ಡಾ. ಹೊನ್ನವಳ್ಳಿ ಎನ್. ಕುಮಾರ್, ಪ್ರಧಾನ ವಿಜ್ಞಾನಿಗಳು, ಸಲೀಂ ಅಲಿ ಪಕ್ಷಿ ವಿಜ್ಞಾನ ಮತ್ತು ನೈಸರ್ಗಿಕ ಇತಿಹಾಸ ಕೇಂದ್ರ ಕೊಯಮತ್ತೂರು, ರವರು 'ವನ್ಯಜೀವಿ ವಿಜ್ಞಾನ' ಕುರಿತು ವಿಶೇಷ ಉಪನ್ಯಾಸವನ್ನು ಮೈಸೂರು ನಗರ ಕೇಂದ್ರ ಗ್ರಂಥಾಲಯದ ಅಧೀನ ಪೀಪಲ್ಸ್ ಪಾರ್ಕ್ ಗ್ರಂಥಾಲಯದಲ್ಲಿ ಡಿ.18 ರಂದು ಸಂಜೆ 4.30 ಗಂಟೆಗೆ ನೀಡಲಿದ್ದಾರೆ.

## 20ರಿಂದ ಅಯ್ಯಪ್ಪಸ್ವಾಮಿ ಪೂಜಾ ಮಹೋತ್ಸವ



ಮೈಸೂರು: ಚಾಮುಂಡಿಬೆಟ್ಟದ ಪಾದದಲ್ಲಿನ ಶಬರಿಮಲೆ ಅಯ್ಯಪ್ಪಸ್ವಾಮಿ ದೇವಸ್ಥಾನದಲ್ಲಿನ ಪೂಜಾ ಸಮಿತಿ ವತಿಯಿಂದ 65ನೇ ವರ್ಷದ ವಾರ್ಷಿಕ ಪೂಜಾ ಮಹೋತ್ಸವ ಡಿ.20 ರಿಂದ ಡಿ.24 ರವರೆಗೆ ಅದ್ದೂರಿಯಾಗಿ ನೆರವೇರಲಿದೆ ಎಂದು ಅಧ್ಯಕ್ಷ ಜಿ.ಶ್ರೀನಿವಾಸ ತಿಳಿಸಿದರು.

ಕಳೆದ ನವೆಂಬರ್ 17 ರಿಂದಲೇ ವಿವಿಧ ಪೂಜಾ ಕೈಂಕರ್ಯ ಆರಂಭವಾಗಿವೆ. ಅಲ್ಲದೆ, ಮುಂದಿನ ವರ್ಷದ ಜ.19ರಂದು ಮಂಡಲ ಪೂಜಾ ಕಾರ್ಯಕ್ರಮ ನೆರವೇರಲಿದೆ. ಇದಲ್ಲದೆ, ಡಿ. 20 ರಿಂದ ಡಿ. 24 ರವರೆಗೆ ಮಹಾ ಅನ್ನದಾನ ನೆರವೇರಲಿದೆ. ಭಕ್ತಾದಿಗಳು ಶಬರಿಮಲೆಗೆ ತೆರಳುವಾಗ ದೇವಸ್ಥಾನದ ಆವರಣದಲ್ಲಿ ಮಾಲಾಧಾರಣೆ, ಇರುಮುಡಿ ಕಟ್ಟುವ ವ್ಯವಸ್ಥೆ ಮೊದಲಾದವುಗಳನ್ನು ಒದಗಿಸಲಾಗುತ್ತಿದೆ ಎಂದರು. ಇದೇ ವೇಳೆ, ದೇವಸ್ಥಾನದ ಹೊರ ಭಾಗಕ್ಕೆ ಹೊಂದಿಕೊಂಡಂತೆ ಕೆಲವರು ಸೈಕಲ್, ದ್ವಿಚಕ್ರ ವಾಹನ, ಕಾರುಗಳ ನಿಲುಗಡೆ ಟೆಂಡರ್ ಪಡೆದಿರುವುದಾಗಿ ಹೇಳಿಕೊಂಡು ಕಿರಕುಳ ನೀಡುತ್ತಿದ್ದಾರೆ. ದೇವಸ್ಥಾನಕ್ಕೆ ಆಗಮಿಸುವ ಭಕ್ತರಿಂದಲೂ ಹಣ ವಸೂಲಿಗಿಳಿದಿದ್ದಾರೆ. ಈ ಬಗ್ಗೆ ಚಾಮುಂಡಿಬೆಟ್ಟದ ಗ್ರಾಪಂ ಗಮನ ಸೆಳೆದರೂ ಪ್ರಯೋಜನವಾಗಿಲ್ಲ ಎಂದು ಬೇಸರಿಸಿದರು. ಜಿ.ಶ್ರೀನಿವಾಸ, ಆರ್.ಹರಿದಾಸ, ಕೆ.ಎನ್.ಬಸವಾರಾಧ್ಯ, ಸುನಿಲ್ ಕುಮಾರ್, ವಿರೂಪಾಕ್ಷ, ಶಂಕರ್ ಇದ್ದರು.

## ವಿದ್ಯಾರ್ಥಿಗಳಿಗೆ ಉಚಿತ ಟ್ಯೂಷನ್

ಕೆ.ಆರ್.ಪೇಟೆ :ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಿ.ಸಿ. ಟ್ರಸ್ಟ್ ? ಕಿಕ್ಕೇರಿ ಕಸಬಾ ವಲಯದ ವಿಠಲಾಪುರ ಸರ್ಕಾರಿ ಪ್ರೌಢಶಾಲೆಯಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಉಚಿತ ಟ್ಯೂಷನ್ ಕ್ಲಾಸ್ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ತಾಲೂಕು ಯೋಜನಾಧಿಕಾರಿಗಳಾದ ಪ್ರಸಾದ್ ಅವರು ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಅಧಿಕೃತ ಚಾಲನೆ ನೀಡಿದರು. ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಎಸ್‌ಎಸ್‌ಎಲ್‌ಸಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪೂರಕವಾದ ಶಿಕ್ಷಣ ಸಹಾಯ ನೀಡುವ ನಿಟ್ಟಿನಲ್ಲಿ ರಾಜ್ಯವ್ಯಾಪಿಯಾಗಿ ಈ ಟ್ಯೂಷನ್ ಕ್ಲಾಸ್ ಯೋಜನೆಯನ್ನು ಪೂಜ್ಯರಾದ ಡಾ. ಡಿ. ವೀರೇಂದ್ರ ಹೆಗ್ಗಡೆಯವರ ಮಾರ್ಗದರ್ಶನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು. ಇದರಿಂದ ವಿದ್ಯಾರ್ಥಿಗಳು ಉತ್ತಮ ಅಂಕಗಳೊಂದಿಗೆ ಪರೀಕ್ಷೆಯಲ್ಲಿ ಯಶಸ್ಸು



ಸಾಧಿಸಲು ಸಹಕಾರಿಯಾಗಲಿದೆ ಎಂದರು. ಅದೇ ಸಂದರ್ಭದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಪರಿಸರ ಸಂರಕ್ಷಣೆ, ಸ್ವಚ್ಛತಾ ಅಭಿಯಾನ, ಸ್ವಾಸ್ಥ್ಯ ಸಂಕಲ್ಪ, ಜ್ಞಾನದೀಪ, ಶಿಕ್ಷಕರ ಸಹಕಾರ ಸೇರಿದಂತೆ ಹಲವಾರು ಸಾಮಾಜಿಕ ಹಾಗೂ ಶೈಕ್ಷಣಿಕ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸಲಾಗುತ್ತಿದೆ ಎಂದು ವಿವರಿಸಿದರು.

ಶಾಲಾ ಮುಖ್ಯ ಶಿಕ್ಷಕರಾದ ಶಂಕರ್ ಅವರು ಮಾತನಾಡಿದರು. ಕಾರ್ಯಕ್ರಮದಲ್ಲಿ ಕಾಲೇಜು ಪ್ರಾಂಶುಪಾಲರಾದ ಮಲ್ಲಿಕಾರ್ಜುನ್, ವಲಯದ ಮೇಲ್ವಿಚಾರಕಿ ಗುಣಶ್ರೀ, ಶಾಲಾ ಶಿಕ್ಷಕರಾದ ಯೋಗೇಶ್, ಸುಚಿತ್ರ, ಸುಪ್ರೀತಾ, ಸೇವಾ ಪ್ರತಿನಿಧಿಗಳಾದ ಶ್ವೇತ, ಜೀವಿತ, ಶಶಿಕಲಾ ಸೇರಿದಂತೆ ಹಲವರು ಉಪಸ್ಥಿತರಿದ್ದರು

## ಒಳ ಮೀಸಲಾತಿ ಜಾರಿಗೆ ತರಾತುರಿ ಏಕೆ?

ಮೈಸೂರು: ಸರ್ಕಾರ ಒಳ ಮೀಸಲಾತಿ ಜಾರಿಗೆ ತರಲು ತರಾತುರಿ ಮಾಡುತ್ತಿರುವುದು ಏಕೆ? ಎಂದು ಕರ್ನಾಟಕ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಪ್ರಶ್ನಿಸಿದರು.

ಬೆಳಗಾವಿಯಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದಲ್ಲಿ ಒಳ ಮೀಸಲಾತಿ ಮಸೂದೆ ಮಂಡಿ ಸಲು ಸರ್ಕಾರ ಸಿದ್ಧತೆ ನಡೆಸಿದೆ. ಸಮಗ್ರವಾಗಿ ಚರ್ಚೆಯಾಗದೇ ಈ ಮಸೂದೆ ಮಂಡಿಸುವ ನಿರ್ಧಾರವು ಅಕ್ಷಮ್ಯವಾಗಿದೆ. ಒಳ ಮೀಸಲಾತಿ ಹಂಚಿಕೆಗೆ ರಾಜ್ಯ ಸರ್ಕಾರ ನಿವೃತ್ತ ನ್ಯಾಯಮೂರ್ತಿ ಎಚ್.ನಾಗಮೋಹನ್ ದಾಸ್ ಏಕ ಸದಸ್ಯ ಸಮಿತಿ ನೇಮಿಸಿತು. ಸಮಿತಿ ನಿರ್ದೇಶನದ ಮೇರೆಗೆ ಸರ್ಕಾರ ಮೂರು ಗುಂಪುಗಳನ್ನು ಮಾಡಿ 6, 6, 5 ಮೀಸಲಾತಿಯನ್ನು ಹಂಚಿಕೆ ಮಾಡಿತು. ಇದನ್ನು ಸ್ವೀಕರಿಸಲಾಗಿದೆ. ಆಗಿದ್ದೂ ಒಳ ಮೀಸಲಾತಿಯಲ್ಲಿ ರುವ ನ್ಯೂನತೆಗಳಿವೆ. ಇವುಗಳನ್ನು ಸರಿಪಡಿಸದೇ ಈ ಅಧಿವೇಶನದಲ್ಲಿ ಮಂಡಿಸಲು ಮುಂದಾಗಿ ರುವುದು ಸರಿಯಲ್ಲ. ಸರ್ಕಾರದ ಈ ನಿರ್ಧಾರ ದಿಂದ ಬಲಗೈ ಸಮುದಾಯಕ್ಕೆ ಅನ್ಯಾಯವಾಗಲಿದೆ. ರಾಜ್ಯ ಸರ್ಕಾರ ಯಾವ ಸಮಾಜಕ್ಕೆ ಅನ್ಯಾಯ ಮಾಡದಂತೆ ನಿರ್ಣಯ ಕೈಗೊಳ್ಳಬೇಕೆಂದು ಒತ್ತಾಯಿಸಿದರು. ಬಲಗೈ ಸಮುದಾಯಕ್ಕೆ ಅನ್ಯಾಯವಾಗುವ ನಿರ್ಧಾರ ಕೈಗೊಂಡರೆ ಸರ್ಕಾರದ ವಿರುದ್ಧ ಸಂಘ ಸಂಸ್ಥೆಗಳೊಂದಿಗೆ ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

> ಒಳ ಮೀಸಲಾತಿ ಶಿಕ್ಷಣ ಮತ್ತು ಉದ್ಯೋಗಕ್ಕೆ ಮಾತ್ರ ಎಂದು ಸುಪ್ರೀಂ ಕೋರ್ಟ್ ಸ್ಪಷ್ಟವಾಗಿ ಹೇಳಿದೆ. ಆದರೆ, ಸರ್ಕಾರ ನ್ಯಾಯಾಲಯದ ಆದೇಶವನ್ನು ಧಿಕ್ಕರಿಸಿ ಮುಂಬಡ್ತಿಗೂ ಒಳ ಮೀಸಲಾತಿ ಜಾರಿಗೆ ಮುಂದಾಗಿದೆ. ಇದರಿಂದ ಬಲಗೈ ಸಮುದಾಯಕ್ಕೆ ಅನ್ಯಾಯವಾಗಲಿದೆ. ಈ ಬಗ್ಗೆ ವಿಸ್ತೃತವಾಗಿ ಚರ್ಚಿಸಿ ಅನಂತರ ಮಸೂದೆ ಮಂಡಿಸಬೇಕು.
>
> ▸▸ **ಡಾ.ಚಂದ್ರಶೇಖರಯ್ಯ** ರಾಜ್ಯಾಧ್ಯಕ್ಷ, ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಂಘ

## ಯೂನಿಟಿ ಮಾಲ್ ಸ್ಥಳಾಂತರಿಸಲು ಆಗ್ರಹ

ಮೈಸೂರು: ವಸ್ತು ಪ್ರದರ್ಶನದ ಮುಂಭಾಗ ಇರುವ ದೊಡ್ಡಕೆರೆ ಮೈದಾನಕ್ಕೆ ಕಾಯಕಲ್ಪ ನೀಡುವಂತೆ ಹಾಗೂ ಯುನಿಟ್ ಮಾಲ್ ಅನ್ನು ನಗರದ ಬೇರೆ ಕಡೆ ಸ್ಥಳಾಂತರ ಮಾಡುವಂತೆ ಒತ್ತಾಯಿಸಿ, ದೊಡ್ಡ ಕೆರೆ ಮೈದಾನದ ಬಳಿ ಮೈಸೂರು ರಕ್ಷಣಾ ವೇದಿಕೆ ವತಿಯಿಂದ ಬುಧವಾರ ಪ್ರತಿಭಟನೆ ನಡೆಸಲಾಯಿತು.

ಈ ವೇಳೆಯಲ್ಲಿ ವೇದಿಕೆ ಅಧ್ಯಕ್ಷ ಮೈ.ಕಾ.ಪ್ರೇಮ್ ಕುಮಾರ್ ಮಾತನಾಡಿ, ದೊಡ್ಡ ಕೆರೆ ಮೈದಾನಕ್ಕೆ ನೀರು ತುಂಬಿಸಿ, ಕಾಯಕಲ್ಪ ಮಾಡಬೇಕು. ಯುನಿಟಿ ಮಹಲ್ ಕೆರೆ ಸಮೀಪ ಯಾಕೆ ನಿರ್ಮಾಣ ಮಾಡಬೇಕು, ಇದರಿಂ ದಾಗಿ ಮೈಸೂರು ಪರಂಪರೆ , ಅರಮನೆ ಸೌಂದರ್ಯ ಹಾಳಾಗುತ್ತದೆ . ಈಜಾಗದಲ್ಲಿ ಯುನಿಟಿ ಮಾಲ್ ಅನ್ನು ಸಂಸದರು ನಿರ್ಮಾಣ ಮಾಡಲು ಮುಂದಾಗಬಾರದು. ಕೆರೆಯ ಜಾಗದಲ್ಲಿ ಕಟ್ಟಡವನ್ನು ನಿರ್ಮಿಸಲು ಅವಕಾಶ ನೀಡಬೇಡಿ ಎಂದು ಒತ್ತಾಯಿಸಿದರು.

ಪ್ರಮೋದಾದೇವಿ ಒಡೆಯರ್ ಅವರು, ಈ ಕೆರೆಗೆ ಸಂಬಂಧಿಸಿದ ದಾಖಲೆ ಪತ್ರವನ್ನು ಸಂಬಂಧಿಸಿದವರಿಗೆ ಒದಗಿಸಿ ಸರಕಾರದ ವಶಕ್ಕೆ ನೀಡಿದರೆ ,ಅರಮನೆಯ ಶ್ರೇಯಸ್ಸು ಹೆಚ್ಚಾಗುತ್ತದೆ ಹಾಗೂ ಅರಮನೆಯ ಸೌಂದರ್ಯ ಹಾಗೂ ಪರಂಪರೆಯ ಗೌರವವನ್ನು ಕಾಪಾಡಬಹುದು ಎಂದರು.

131 ಎಕರೆ ಪ್ರದೇಶದ ದೊಡ್ಡ ಕೆರೆ ಮೈದಾನವನ್ನು ಪುನರ್




ನಿರ್ಮಾಣ ಮಾಡಿ , ದೊಡ್ಡಕೆರೆಗೆ ನೀರು ತುಂಬಿಸಿ ಮೈಸೂರು ಪರಂಪರೆ ಸೌಂದರ್ಯ ಹೆಚ್ಚು ಮಾಡಬೇಕು , ಕೆಆರ್‌ಎಸ್ ನಿಂದ ಕೇವಲ 15 ಕಿಮೀ ದೂರದಲ್ಲಿರುವ ದೊಡ್ಡಕೆರೆ ಮೈದಾನಕ್ಕೆ ನೀರು ತುಂಬಿಸಲು ಸರಕಾರಕ್ಕೆ ದೊಡ್ಡ ಕೆಲಸವಲ್ಲ .ಸಿದ್ದರಾಮಯ್ಯ ರವರ ಹೆಸರು ಅಜರಾಮರ ವಾಗುರಬೇಕಾದರೆ, ದೊಡ್ಡಕೆರೆಗೆ ನೀರು ತುಂಬಿಸಿ ಜೀವಕಳೆ ತರಬೇಕು,ಸದನ ನಡೆಯುತ್ತಿದೆ ಚರ್ಚೆ ನಡೆಸಿ ಕೂಡಲೇ ಹಣ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿದರು. ಜಿಲ್ಲಾಧಿಕಾರಿಗಳು ಸರಕಾರದ ಹಾದಿ ತಪ್ಪಿಸುತ್ತಿದ್ದಾರೆ , ದೊಡ್ಡಕೆರೆ ಮೈದಾನವನ್ನು ಕೇಂದ್ರ ಸರ ಕಾರಕ್ಕೆ ಯುನಿಟಿ ಮಹಲ್ ಕಟ್ಟಲು ಅವಕಾಶ ನೀಡಿದ್ದಾರೆ . ಎಷ್ಟೋ ಜನ ಜಿಲ್ಲಾಧಿಕಾರಿ ರವರು ದೊಡ್ಡಕೆರೆ ಮೈದಾನವನ್ನು ಕಾಯಿಕೊಂಡು ಬಂದಿದ್ದಾರೆ , ಯುನಿಟಿ ಮಹಲ್ ನಿರ್ಮಾಣ ಮಾಡಲು ಹಣವನ್ನು ಬಿಡುಗಡೆ ಮಾಡಿಸಿಕೊಂಡು ಬಂದಿರುವುದು ಅಪಮಾನವಾಗಿದೆ. ಅಧಿಕಾರಿಗಳು ಎಸಿ ರೂಮ್ ನಲ್ಲಿ ಕುಳಿತು ಯೋಜನೆ ಸಿದ್ದಪಡಿಸಿ ಹಣವನ್ನು ಮಾಡುತ್ತಿದ್ದಾರೆ . ಅದೇ ಒಳ್ಳೆಯ ಕೆಲಸವನ್ನು ಮಾಡಿ ಹಣ ಮಾಡಿ ಎಂದು ಆಗ್ರಹಿಸಿದರು. ಯುನಿಟಿ ಮಹಲ್ ನಿರ್ಮಾಣಕ್ಕೆ ವಿರೋಧ ಇದೆ. ಈಗಾ ಗಲೇ ಕಾನೂನು ತಜ್ಞರ ಅಭಿಪ್ರಾಯ ಸಂಗ್ರಹಿಸಿ ಸಾರ್ವಜ ನಿಕ ಹಿತಾಸಕ್ತಿ ಅರ್ಜಿಗಳನ್ನು ಹಾಕುತ್ತೇವೆ.ಮೈಸೂರು ಹಿತಾಸಕ್ತಿ ಬಯಸುವ ಪ್ರತಿಯೊಬ್ಬ ನಾಗರೀಕರು ನಮ್ಮ ಹೋರಾಟಕ್ಕೆ ಸ್ಪಂದಿಸುವ ಮೂಲಕ ದೊಡ್ಡಕೆರೆ ಪುನರ್ ನಿರ್ಮಾಣ ಆಗಬೇಕು ಎಂದರು.

## ಡಿ.19 ರಿಂದ 21ರ ವರೆಗೆ ರೋಟರಿ ಸಿಲ್ಕ್

### ಸಿಟಿ ವತಿಯಿಂದ ಆಹಾರ ಮೇಳ, ವಸ್ತು ಪ್ರದರ್ಶನ ಆಯೋಜನೆ

ಚಾಮರಾಜನಗರ, ನಗರದ ರೋಟರಿ ಸಿಲ್ಕ್ ಸಿಟಿಯ ಪ್ರಾಯೋಜತ್ವದಡಿ ಡಿ, 19, 20, 21 ರಂದು ಮೂರು ದಿನಗಳ ಕಾಲ ನಗರದ ಬಿ.ರಾಚಯ್ಯ ಜೋಡಿ ರಸ್ತೆಯಲ್ಲಿನ ವಿರಕ್ತ ಮಠದಲ್ಲಿ ಆಹಾರ ಮೇಳ ಮತ್ತು ವಸ್ತ್ರ ಪ್ರದರ್ಶನ ಏರ್ಪಡಿಸಲಾಗಿದೆ ಎಂದು ರೋಟರಿ ಸಿಲ್ಕ್ ಸಿಟಿಯ ದೊಡ್ಡರಾಯಪೇಟೆ ಗಿರೀಶ್ ತಿಳಿಸಿದರು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಭಾಗವಹಿಸಿ ಮಾತನಾಡಿದ ಅವರು ಆಹಾರ ಮೇಳದ ಅಂಗವಾಗಿ 24 ಆಹಾರ ಮಳಿಗೆಗಳನ್ನು ತೆರೆಯಲಾಗುತ್ತಿದ್ದು, ವಿವಿಧ ಬಗೆಯ ಸಸ್ಯಹಾರಿ ಆಹಾರವನ್ನು ಆಸ್ವಾದಿಸಬಹುದಾಗಿದೆ. ಅದೇ ರೀತಿ ವಸ್ತು ಪ್ರದರ್ಶನ ಮತ್ತು ಕಾರ್ ಎಕ್ಸ್ ಪೋ ಆಯೋಜಿಸಲಾಗಿದೆ. ಡಿ. 19 ರಂದು ಬೆಳಗ್ಗೆ 11 ಕ್ಕೆ ನಗರದ ವಿರಕ್ತ ಮಠದ ಮಠಾಧೀಶರಾದ ಶ್ರೀ ಚೆನ್ನಬಸವಸ್ವಾಮಿಗಳು ವಸ್ತು ಪ್ರದರ್ಶನ ಉದ್ಘಾಟಿಸಲಿದ್ದು, ರೋಟರಿ ಸಿಲ್ಕ್ ಸಿಟಿಯ ಪಿ.ರಾಮಕೃಷ್ಣ, ಜಿಲ್ಲಾಧಿಕಾರಿ ಶಿಲ್ಪನಾಗ್ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು. ಆಹಾರ ಮೇಳ ಮತ್ತು ವಸ್ತು ಪ್ರದರ್ಶನ ಅಂಗವಾಗಿ 19 ರಂದು ಸಂಜೆ 5 ರಿಂದ ರಾತ್ರಿ 9 ರವರೆಗೆ ಖ್ಯಾತ ಹಿನ್ನೆಲೆ ಗಾಯಕಿ ಜ್ಹೀ ಹಿಂದಿ ಸರಿಗಮದ ಖ್ಯಾತಿ ಸಿಂಚನ್ ಧೀಕ್ಷತ್ ಅವರಿಂದ ಸಂಗೀತ



ಸಂಜೆ ಮತ್ತು ಅಂತರಾಷ್ಟ್ರೀಯ ಕೊಳಲು ವಾದಕ ನೀತು ನಿನಾದ್ ಅವರಿಂದ ಕೊಳಲು ವಾದನ ನಡೆಯಲಿದೆ. ಡಿ. 21 ರಂದು ಸಂಜೆ 5 ರಿಂದ ರಾತ್ರಿ 9 ರವರೆಗೆ ರವರೆಗೆ ಮಿಸ್ಟರ್ ಮ್ಯಾಜೀಕ್ ಅವರಿಂದ ಜಾದೂ ಪ್ರದರ್ಶನ, ಪೃಥ್ವಿ ಪಿ. ಗೌಡ ಅವರಿಂದ ಸಮೂಹ ನೃತ್ಯ ಮತ್ತು ಮನರಂಜನೆ ಏರ್ಪಡಿಸಲಾಗಿದೆ ಮೂರು ದಿನಗಳ ಕಾಲ ಸುಮಾರು 5 ರಿಂದ 6 ಸಾವಿರ ಜನ ಸೇರುವ ನಿರೀಕ್ಷೆ ಇದೆ ಎಂದು ತಿಳಿಸಿದರು. ಮೇಳದಿಂದ ಸಂಗ್ರಹವಾಗುವ ಹಣವನ್ನು ಸಾರ್ವಜನಿಕ ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸಲಾಗುವುದು ಎಂದು ತಿಳಿಸಿದರು. ಸುದ್ದಿ ಗೋಷ್ಠಿಯಲ್ಲಿ ರೋಟರಿ ಸಿಲ್ಕ್ ಸಿಟಿಯ ಶಮಿತ್ ಕುಮಾರ್, ವಿಶ್ವಾಸ್, ಮುರುಗೇಂದ್ರಸ್ವಾಮಿ, ಶರತ್, ಅಜಯ್ ಇತರರು ಹಾಜರಿದ್ದರು.

### ಪಾರ್ಥ ಸಾರಥಿ ಕರೆ

## ನಿವೃತ್ತ ರೈಲ್ವೆ ನೌಕರರು ಪಿಂಚಣಿ ಬಗ್ಗೆ ತಿಳಿದುಕೊಳ್ಳಿ

ಮೈಸೂರು: ಹೆಚ್ಚಿನ ಮಂದಿ ರೈಲ್ವೆ ನೌಕರರು ಹಾಗೂ ಕುಟುಂಬದವರು ಪಿಂಚಣಿಯ ಬಗ್ಗೆ ತಿಳಿದುಕೊಳ್ಳಬೇಕಾದ ಅಗತ್ಯವಿದೆ ಎಂದು ರೈಲ್ವೆ ಪಿಂಚಣಿದಾರರ ಅಸೋಸಿಯೇಷನ್ ಅಧ್ಯಕ್ಷ ಪಾರ್ಥ ಸಾರಥಿ ತಿಳಿಸಿದರು.

ಮೈಸೂರಿನ ನೈಋತ್ವ ರೈಲ್ವೆಯ ಅಖಿಲ ಭಾರತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈಲ್ವೆ ನೌಕರರ ಸಂಘದ ಕಚೇರಿ ಆಯೋಜಿಸಿದ್ದ ರೈಲ್ವೆ ಪಿಂಚಣಿದಾರರ ವೆಲ್ ಫೇರ್ ಅಸೋಸಿಯೇಷನ್ ಪಿಂಚಣಿದಾರರ ದಿನದ ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಅವರು ಮಾತನಾಡಿದರು. ಇತ್ತೀಚಿನ ದಿನಗಳಲ್ಲಿ ರೈಲ್ವೆ ನಿವೃತ್ತರಿಗೆ ಪಿಂಚಣಿ ಕೊಡುವಲ್ಲಿ ಬ್ಯಾಂಕ್‌ಗಳು ಮೋಸ ಮಾಡುತ್ತಿರುವುದು ಗಮನಕ್ಕೆ ಬರುತ್ತಿದೆ. ಹೀಗಿ ಪ್ರತಿಯೊಬ್ಬರೂ ನಿಮ್ಮ ಪಿಂಚಣಿಯ ಪಿಒಪಿ ಎಷ್ಟು ಎಂಬುದರ ಬಗ್ಗೆ ಅರಿವು ಹೊಂದಿರಬೇಕಿದೆ ಎಂದರು. ರೈಲ್ವೆ ನೌಕರರ ಕೊನೆ ತಿಂಗಳ ಸಂಬಳದ ಶೇ.50ರಷ್ಟು ಪಿಂಚಣಿಯಿದ್ದರೆ, ಅವರ ಪತ್ನಿಗೆ ಶೇ.30ರಷ್ಟಿರುತ್ತದೆ. ನೌಕರ ಕರ್ತವ್ಯದಲ್ಲಿದ್ದಾಗಲೇ ಮರಣ ಹೊಂದಿ



ದರೆ ಕುಟುಂಬದವರಿಗೆ ಶೇ.60 ರಷ್ಟು ಪಿಂಚಣಿ ಕೊಡಬೇಕೆಂಬ ನಿಯಮವಿದೆ. ಎಷ್ಟು ಬ್ಯಾಂಕ್‌ಗಳು ಇದನ್ನು ನೀಡುತ್ತಿಲ್ಲ. ಅನೇಕ ಬ್ಯಾಂಕ್ ಗಳ ವಿಲೀನಗೊಂಡ ಬಳಿ ಅನೇಕ ಕಾರಣ ನೆಪವನ್ನು ಹೇಳುತ್ತಾ ಪಿಂಚಣಿಗಾಗಿ ಅಲೆ ದಾಡಿಸುತ್ತಿದ್ದಾರೆ. ಈ ಬಗ್ಗೆ ನಾವೆಲ್ಲರೂ ಜಾಗೃತ ರಾಗಬೇಕಿದೆ. ಎನ್.ಎಸ್. ನಾಕಾರ ಅವರು 1982ರ ಡಿ.17ರಲ್ಲಿ ನಮ್ಮೆಲ್ಲರ ಪರವಾಗಿ ಪಿಂಚಣಿ ಗಾಗಿ ಹೋರಾಡಿದ ಫಲವಾಗಿ ಅಂದು ಸುಪ್ರೀಕೋರ್ಟ್ ಅಂದಿನ ಸಂಬಳಕ್ಕೆ ಅನುಗುಣವಾಗಿ ಪಿಂಚಣಿ ನೀಡಬೇಕೆಂದು ಆದೇಶ ನೀಡಿತು. ಅದನ್ನು ಸ್ಮರಿಸುವ ಸಲುವಾಗಿ ಅಂದಿನಿಂದ ಪಿಂಚಣಿದಾರರ ದಿನವನ್ನು ಆಚರಿಸುತ್ತಿರುವುದಾಗಿ ತಿಳಿಸಿದರು. ರೈಲ್ವೆ ಪಿಂಚಣಿದಾರರ ವೆಲ್‌ಫೇರ್ ಅಸೋಸಿಯೇಷನ್ ಪ್ರಧಾನ ಕಾರ್ಯದರ್ಶಿ ಜಿ.ಎಸ್.ಸ್ವಾಮಿನಾಥನ್, ಉಪಾಧ್ಯಕ್ಷ ಎಂ.ಗೋವಿಂದ ಇನ್ನಿತರರು ಉಪಸ್ಥಿತರಿದ್ದರು.

# ಪತಿ ಕಿರುಕುಳಕ್ಕೆ ಪತ್ನಿ ಆತ್ಮಹತ್ಯೆ ಪ್ರಕರಣ:ಅಪರಾಧಿಗಳಿಗೆ ಜೈಲು

ಮೈಸೂರು: ಪತಿಯ ಕಿರುಕುಳಕ್ಕೆ ಬೇಸತ್ತು ವರ್ಷದಲ್ಲೇ ಪತ್ನಿಯೂ ಅಧಿಕ ಮಾತ್ರೆ ಸೇವಿಸಿ ಆತ್ಮಹತ್ಯೆ ಮಾಡಿಕೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರೂ ಆರೋಪಿಗಳಿಗೆ ವಿವಿಧ ಸೆಕ್ಷನ್ ಅಡಿಯಲ್ಲಿ ಜೈಲು ಹಾಗೂ ದಂಡ ಶಿಕ್ಷೆ ವಿಧಿಸಿ ನ್ಯಾಯಾಲಯ ಆದೇಶ ಹೊರಡಿಸಿದೆ.

2017ರಲ್ಲಿ ಎನ್.ನವೀನ್ ಕುಮಾರ್ ಮತ್ತು ತೇಜಮಣಿ ನಡುವೆ ಮದುವೆ ಆಗಿತ್ತು. ಈ ವೇಳೆ ಮೊದಲ ಆರೋಪಿ ಎನ್.ನವೀನ್



ಕುಮಾರ್ ಮತ್ತು ಎರಡನೇ ಆರೋಪಿ ರಾಣಿ ಬೇಡಿಕೆಗೆ ಅನುಗುಣವಾಗಿ 60 ಗ್ರಾಂ ಚಿನ್ನ, ಬಟ್ಟೆ ಇತರ ವಸ್ತುಗಳನ್ನು ನೀಡಿ 8ಲಕ್ಷ ರೂ. ಹಣ ಖರ್ಚು ಮಾಡಿ ಅದ್ದೂರಿಯಾಗಿ ಮದುವೆ ಮಾಡಿರುತ್ತಾರೆ. ಈ ವೇಳೆ ಕೆಲ ತಿಂಗಳ ಬಳಿಕ ಆರೋಪಿತರು ತವರು ಮನೆಯಿಂದ 10ಲಕ್ಷ ರೂ. ವರದಕ್ಷಿಣೆ ತರುವಂತೆ ಮಾನಸಿಕ ಕಿರುಕುಳ ನೀಡಲಾರಂಭಿಸಿದ್ದಾರೆ. ಮೃತಳಿಗೆ ಬರುತ್ತಿದ್ದ ಸಂಬಳವನ್ನು ತಮಗೆ ನೀಡಬೇಕೆಂದು ಒತ್ತಡ ಹೇರಿದ್ದಾರೆ ಎನ್ನಲಾಗಿದೆ. ಇದಾದ ಬಳಿಕ ತೇಜಮಣಿಯನ್ನು ಚುಚ್ಚು ಮಾತುಗಳಿಂದ ನಿಂದಿಸಿದ್ದು, ತವರಿಗೆ ಹಿಂದುರುಗಿದ್ದಾರೆ. 2018ರ ಆ.7ಕ್ಕೆ ಆರೋಪಿತರು ಮೃತರ ತವರಿನ ಮನೆ ಬಳಿಗೆ ತೆರಳಿ ಗಲಾಟೆ ಮಾಡಿ ಬೈದು ಇನ್ನೆರಡು ದಿನದಲ್ಲಿ ವರದಕ್ಷಿಣೆ ಕೊಡದಿದ್ದರೆ ಬೇರೊಂದು ವಿವಾಹ ಆಗುವುದಾಗಿ ತಿಳಿಸಿದ್ದಾರೆ. ನೊಂದ ತೇಜಮಣಿ ಮಾನಸಿಕ ನೋವು ಹಾಗೂ ಅವಮಾನವನ್ನು ತಳಲಾರದೇ ಜಯನಗರದ ಇಸ್ಕಾನ್ ಟೆಂಪಲ್ ಸಮೀಪದ ಮೆಡಿಕಲ್ ಸ್ಟೋರ್‌ನಿಂದ ಅಧಿಕ ಮಾತ್ರೆಯನ್ನು ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದರು. ವಿಚಾರಣೆ ನಡೆಸಿದ ಎನ್.ಆರ್.ವಿಭಾಗದ ಸಹಾಯಕ ಪೊಲೀಸ್ ಆಯುಕ್ತ ಸಿ.ಗೋಪಾಲ್ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು.

ಇದರ ವಿಚಾರಣೆ ನಡೆಸಿದ 5ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾ ಕೆ.ಎನ್.ರೂಪ ಆರೋಪಿಗೆ 1ಗೆ 304(ಬಿ) 34 ಐಪಿಸಿ ಅಡಿಯ ಅಪರಾಧಕ್ಕೆ 10 ವರ್ಷ ಕಠಿಣ ಕಾರಾಗೃಹ ಮತ್ತು 1ಲಕ್ಷ ದಂಡ(ತಪ್ಪಿದರೆ 6ತಿಂಗಳಸಾದಾ ಶಿಕ್ಷೆ), ಆರೋಪಿ 2ಗೆ 304(ಬಿ) 34 ಐಪಿಸಿ ಅಡಿಯ ಅಪರಾಧಕ್ಕೆ 7 ವರ್ಷ ಕಠಿಣ ಕಾರಾಗೃಹ ಶಿಕ್ಷೆ ಮತ್ತು 50ಸಾವಿರ ದಂಡ(ತಪ್ಪಿದ್ದಲ್ಲಿ 3ತಿಂಗಳ ಸಾದಾ ಶಿಕ್ಷೆ) ವಿಧಿಸಿದ್ದಾರೆ. ಇಬ್ಬರೂ ಆರೋಪಿಗಳಿಗೂ 498(ಎ) 34 ಐಪಿಸಿ ಅಡಿ ಅಪರಾಧಕ್ಕೆ 3ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ಮತ್ತು ತಲಾ 25ಸಾವಿರ, ಕಲಂ 3ಅಡಿಯಲ್ಲಿ ವರದಕ್ಷಿಣೆ ನಿಷೇಧ ಕಾಯಿದೆ ಅಡಿಯ ಅಪರಾಧಕ್ಕೆ 5ವರ್ಷಗಳ ಕಠೀಣ ಕಾರಾಗೃಹ ಶಿಕ್ಷೆ ಮತ್ತು 15ಸಾವಿರ ದಂಡ, ಕಲಂ 4ರ ಅಡಿಯಲ್ಲಿ 2 ವರ್ಷಗಳ ಕಠಿಣ ಕಾರಾಗೃಹ ಶಿಕ್ಷ ಮತ್ತು 10ಸಾವಿರ ದಂಡ ವಿಧಿಸಿದೆ. ಈ 5ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಸರ್ಕಾರದ ಅಭಿಯೋಜಕ ಬಿ.ಈ.ಯೋಗೇಶ್ವರ ಸರ್ಕಾರದ ಪರ ವಾದ ಮಂಡಿಸಿದ್ದರು.

# ವಸ್ತುಪ್ರದರ್ಶನ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮ

ಮೈಸೂರು: 2025 ದಸರಾ ವಸ್ತುಪ್ರದರ್ಶನ ಅಂಗವಾಗಿ ಗಾನ ಕೋಗಿಲೆ ಪಿ.ಕಾಳಿಂಗರಾವ್ ರಂಗಮಂಟಪದಲ್ಲಿ ಡಿ.17 ಮತ್ತು 18 ರವರೆಗೆ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ಡಿ.17 ರಂದು 7 ಗಂಟೆಯಿಂದ 9:30 ಗಂಟೆಗೆ ಜನಪದ ಸಮೂಹ ಗಾಯನ ಜಗದೀಶ್ ಕುಮಾರ್ ಸೂತ್ರ ಫೌಂಡೇಷನ್ ಮತ್ತು ಡಿ.18 ರಂದು 5 ಗಂಟೆಯಿಂದ 8 ಗಂಟೆಯವರೆಗೆ "ಫ್ಯಾಷನ್ ಷೋ" ರಾಜ್ ಫೌಂಡೇಷ 8 ಗಂಟೆಯಿಂದ 9.30 ಗಂಟೆಯವರೆಗೆ ಯೋಗ ಟ್ರಸ್ಟ್ (ಆಶಾದೇವಿ) ಅವರಿಂದ ನಡೆಯಲಿದೆ ಎಂದು ದಸರಾ ವಸ್ತುಪ್ರದರ್ಶನ ಸಾಂಸ್ಕೃತಿಕ ಉಪಸಮಿತಿ ಸದಸ್ಯ ಕಾರ್ಯದರ್ಶಿ ತಿಳಿಸಿದ್ದಾರೆ.

# ಸಮರ್ಥನಂ ಅಂಗವಿಕಲರ ಸಂಸ್ಥೆಯಿಂದ ಉಚಿತ ಉದ್ಯೋಗ ವಿಕಸನ ತರಬೇತಿ

ಚಾಮರಾಜನಗರ: ಸಮರ್ಥನಂ ಅಂಗವಿಕಲರ ಸಂಸ್ಥೆ ವತಿಯಿಂದ ಜನವರಿಯಲ್ಲಿ ಮೈಸೂರಿನ ಲಕ್ಷ್ಮೀ ಚಿತ್ರಮಂದಿರದ ಸಮೀಪದಲ್ಲಿ

ಮತ್ತು ಬೆಂಗಳೂರಿನ ಹೆಚ್ ಎಸ್ ಆರ್ ಲೇಔಟ್ ನಲ್ಲಿ ಉಚಿತ ಉದ್ಯೋಗ ವಿಕಸನ ತರಬೇತಿ ನೀಡಲಾಗುತ್ತದೆ ಎಂದು ಸಂಸ್ಥೆಯ ಸಂಯೋಜಕ ರಂಗಸ್ವಾಮಿ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ವಿವಿಧ ನವೀನ ರೀತಿಯನ್ನೊಳಗೊಂಡ ಕಾರ್ಯಕ್ರಮಗಳಿಂದ ಅಸಕ್ತರನ್ನು ಮತ್ತು ಅವಕಾಶ ವಂಚಿತರನ್ನು ಸಮರ್ಥಗೊಳಿಸುವ ಮುಖ್ಯ ಉದ್ದೇಶದಿಂದ ವಿಕಲಚೇತನರು, ನಿರುದ್ಯೋಗಿ ಮಹಿಳೆಯರು, ಪುರುಷರು, ಬಿಪಿಎಲ್ ಕಾರ್ಡ್ ಹೊಂದಿರುವವರು, 10ನೇ ತರಗತಿ ಮೇಲ್ಪಟ್ಟು 18 ರಿಂದ 35 ವರ್ಷದೊಳಗಿನ ವರಿಗೆ ಪ್ರತಿ ಮೂರು ತಿಂಗಳೊಮ್ಮೆ ಟ್ಯಾಲಿ, ಬಿಪಿಓ, ಕಂಪ್ಯೂಟರ್ ಸ್ಕಿಲ್ಸ್ , ಕಮ್ಯೂನಿಕೇಶನ್ಸ್ ಸ್ಕಿಲ್ಸ್ ತರಬೇತಿ



ನೀಡಿ, ಉದ್ಯೋಗ ಅವಕಾಶ ಕಲ್ಪಿಸಿ ಕೊಡಲಾಗುವುದು ಇಂತಹ ಸುವರ್ಣಾವಕಾಶವನ್ನು ಸದುಪಯೋಗ ಪಡಿಸಿಕೊಳ್ಳಬೇಕು ಹೆಚ್ಚಿನ ಮಾಹಿತಿಗಾಗಿ 9035084948, 9449864699, 9035084949, 636486 7818, 9035084950 ಸಂಪರ್ಕಿಸಬಹುದು ಎಂದು ಮನವಿ ಮಾಡಿದರು. ಪತ್ರಿಕಾಗೋಷ್ಠಿ ಯಲ್ಲಿ ಸಂಸ್ಥೆಯ ಮೈಸೂರು ಸಂಯೋಜಕ ಅಜಯ್ ಹಾಜರಿದ್ದರು.

# ದರ್ಶನ್ ಅಭಿಮಾನಿಗಳಿಗೆ ಕಳಂಕ ತರಲು ಪುನೀತ್ ಬ್ಯಾನರ್ ಹರಿದ ಕಿಡಿಗೇಡಿಗಳು

ಕೆ.ಆರ್.ಪೇಟೆ, ತಾಲ್ಲೂಕಿನ ಪ್ರವಾಸಿ ಮಂದಿರದಲ್ಲಿ ವೃತ್ತದಲ್ಲಿರುವ ಕರ್ನಾಟಕ ರತ್ನ ಡಾ.ಪುನೀತ್ ರಾಜ್‌ಕುಮಾರ್ ಪುತ್ಥಳಿ ಬಳಿ ಅಳವಡಿಸಿದ್ದ ಅಲ್ಯೂಮಿನಿಯಂ ಫ್ರೇಮ್ ಒಳಗೊಂಡ ಬ್ಯಾನರ್ ಅನ್ನು ಯಾರೋ ಕಿಡಿಕೇಡಿಗಳು ನೆನ್ನೆ ರಾತ್ರಿ ಹರಿದು ಬಿಸಾಡುವ ಮೂಲಕ ಪುನೀತ್ ರಾಜ್‌ಕುಮಾರ್ ಅವರಿಗೆ ಅವಮಾನ ಮಾಡಿದ್ದಾರೆ. ಅಲ್ಲದೆ ಡೇವಿಲ್ ಸಿನಿಮಾ ಬಿಡುಗಡೆಯಾಗಿರುವ ಕಾರಣ ದರ್ಶನ್ ಮತ್ತು ಅಪ್ಪು ಅಭಿಮಾನಿಗಳ ನಡುವೆ ಕಂದಕವನ್ನು ಸೃಷ್ಠಿ ಮಾಡಲು ಈ ಕೃತ್ಯ ಮಾಡಿರುತ್ತಾರೆ ಎಂದು ಆಕ್ರೋಶ ವ್ಯಕ್ತಪಡಿಸಿರುವ ತಾಲ್ಲೂಕು ಕರ್ನಾಟಕ ರತ್ನ ಡಾ.ಪುನೀತ್ ರಾಜ್‌ಕುಮಾರ್ ಅಭಿಮಾನಿಗಳು ಪುತ್ತಳಿ ಬಳಿ ಪ್ರತಿಭಟನೆ ನಡೆಸಿ ಪಟ್ಟಣ ಪೊಲೀಸ್ ಠಾಣೆಗೆ ದೂರು ನೀಡಿ ಕಿಡಿಗೇಡಿಗಳನ್ನು ಕೂಡಲೇ ಬಂಧಿಸಬೇಕು ಎಂದು ಒತ್ತಾಯ ಮಾಡಿದರು.

ಪೊಲೀಸರಿಗೆ ಮನವಿ ಸಲ್ಲಿಸಿ ಮಾತನಾಡಿದ ತಾಲ್ಲೂಕು ಅಪ್ಪು ಯುವ ಸೇನಾ ಸಮಾಜ ಸೇವಾ ಟ್ರಸ್ಟ್ ಅಧ್ಯಕ್ಷ ಕೆ.ಎಲ್.ಮಹೇಶ್ ಅವರು ಪೊಲೀಸರು ಪ್ರವಾಸಿ ಮಂದಿರ ವೃತ್ತದಲ್ಲಿ ಟ್ರಾಫಿಕ್ ಪೊಲೀಸರು ಅಳವಡಿಸಿರುವ ಸಿಸಿ ಟೀವಿ ಪುಟೇಜ್ ಪರಿಶೀಲಿಸಿ



ಕಿಡಿಗೇಡಿಗಳನ್ನು ಬಂಧಿಸಬೇಕು ಎಂದು ಕೆ.ಎಲ್.ಮಹೇಶ್ ಪೊಲೀಸ್ ಅಧಿಕಾರಿಗಳನ್ನು ಒತ್ತಾಯ ಮಾಡಿದರು. ಪ್ರತಿಭಟನೆಯಲ್ಲಿ ಈ ಸಂದರ್ಭದಲ್ಲಿ ತಾಲ್ಲೂಕು ಜಯಕರ್ನಾಟಕ ಸಂಘಟನೆಯ ಅಧ್ಯಕ್ಷ ಹೊನ್ನೇನಹಳ್ಳಿ ಸೋಮಶೇಖರ್, ಅಪ್ಪು ಸೇವಾ ಟ್ರಸ್ಟ್ ಕಾರ್ಯದರ್ಶಿ ಹರೀಶ್, ಗೌರವಾಧ್ಯಕ್ಷ ಜಗದೀಶ್, ಪ್ರಿಂಟ್ ಪುನೀತ್, ದರ್ಶನ್ ಅಭಿಮಾನಿಗಳ ಬಳಗದ ಯುವರಾಜ್, ಚಂದ್ರು, ರಾಮಣ್ಣ, ಶ್ರೀನಿಧಿ, ಸತೀಶ್, ಅನಿಲ್, ಹೋಟೆಲ್ ಯೋಗರಾಜ್ ಸೇರಿದಂತೆ ತಾಲ್ಲೂಕು ದರ್ಶನ್, ಡಾ.ಪುನೀತ್ ರಾಜ್‌ಕುಮಾರ್ ಅಭಿಮಾನಿ ಬಳದ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಧರ್ಮ ಪರಿಪಾಲನೆ: ಮಠದ ಸೇವೆ ಅನನ್ಯ

## ಸಿದ್ದಾಗಂಗಾಶ್ರೀಗಳು ಹೇಳಿಕೆ | ಬಸವೋತ್ಸವ, ಗುರುಪಟ್ಟಾಧಿಕಾರ ರಜತ ಮಹೋತ್ಸವ

ಚಾಮರಾಜನಗರ,ಬಸವ ಧರ್ಮ ಪರಿಪಾಲನೆ ಮಾಡುವ ಜೊತೆಗೆ ಶ್ರೀಮಠದ ಸೇವೆಯನ್ನು ಈ ಭಾಗದ ಜನರಿಗೆ ನೀಡುತ್ತಿರುವುದು ನಿಜವಾದ ಕಾಯಕವಾಗಿದ್ದು, ಅಂಥ ಪವಿತ್ರ ಕಾರ್ಯವನ್ನು ಇಮ್ಮಡಿ ಮುರುಘರಾಜೇಂದ್ರಸ್ವಾಮಿ ಸಕಾರಗೊಳಿಸುತ್ತಾ ಬಂದಿದ್ದಾರೆ ಎಂದು ತುಮಕೂರು ಸಿದ್ದಗಂಗಾ ಕ್ಷೇತ್ರದ ಶ್ರೀ ಸಿದ್ದಲಿಂಗಮಹಾಸ್ವಾಮೀಜಿ ತಿಳಿಸಿದರು.

ತಾಲೂಕಿನ ಮರಿಯಾಲ ಗ್ರಾಮದಲ್ಲಿರುವ ಶ್ರೀಮುರುಘರಾಜೇಂದ್ರಸ್ವಾಮಿ ಮಹಾ ಸಂಸ್ಥಾನ ಶ್ರೀಮಠದಲ್ಲಿ ನಡೆದ ಬಸವೋತ್ಸವ, ಮುರುಘರಾಜೇಂದ್ರಸ್ವಾಮೀಜಿ ಅವರ 109 ನೇ ವರ್ಷದ ಸ್ಮರಣೋತ್ಸವ, ಮಹಾಂತ ಮಂಟಪದ ಉದ್ಘಾಟನೆ, ನೂತನ ಬಸವದ್ವಾರ ಹಾಗೂ ಪುತ್ಥಳಿಗಳ ಅನಾವರಣ ಹಾಗೂ ಶ್ರೀ ಇಮ್ಮಡಿ ಮುರುಘರಾಜೇಂದ್ರ ಸ್ವಾಮೀಜಿ ಅವರ ಗುರುಪಟ್ಟಾಧಿಕಾರ ರಜತ ಮಹೋತ್ಸವ ಕಾರ್ಯಕ್ರಮದ ಧಾರ್ಮಿಕ ಸಮಾರಂಭದ ದಿವ್ಯ ಸಾನಿಧ್ಯವಹಿಸಿ ಅವರು ಮಾತನಾಡಿದರು. ಮರಿಯಾಲದಲ್ಲಿ ಶ್ರೀಮಠವು ಬಸವ ತತ್ವ ಭೋಧನೆ ಮಾಡುತ್ತಾ, ಜನರನ್ನು ಜಾಗೃತಿಗೊಳಿಸುವ ಕೆಲಸವನ್ನು 19ನೇ ಶತಮಾನದಿಂದಲೂ ಮಾಡುತ್ತಾ ಬಂದಿದೆ. ಉತ್ತರಿಂದ ಬಂದಂತಹ ಶ್ರೀ ಗುರುಮಲ್ಲೇಶ್ವರರು ಹಾಗು ಮುರುಘರಾಜೇಂದ್ರಸ್ವಾಮಿಗಳು ಈ ಭಾಗದ ಜನರಲ್ಲಿ ಬಸವ ಧರ್ಮವನ್ನು ಪ್ರಚುರ ಮಾಡುತ್ತಾ ನೆಲೆಯಾಗಿ ನಿಂತು ಬಸವ ದೀಕ್ಷೆಯನ್ನು ನೀಡಿದರು. ಅವರು ಅಂದು ಹಚ್ಚಿದ ಧರ್ಮ ಜ್ಯೋತಿ ನಿರಂತರವಾಗಿ



ನಡೆದುಕೊಂಡು ಬರುತ್ತಿದೆ. ಇಂಥ ಪವಿತ್ರ ಕಾರ್ಯದಲ್ಲಿ ತಮ್ಮನ್ನು ಸಮರ್ಪಣೆ ಮಾಡಿಕೊಂಡಿರುವ ಇಮ್ಮಡಿ ಮುರುಘರಾಜೇಂದ್ರಸ್ವಾಮಿಗಳು 25ನೇ ಪಟ್ಟಾಧಿಕಾರದ ರಜತ ಮಹೋತ್ಸವ ಅದ್ದೂರಿಯಾಗಿ ನಡೆಯುತ್ತಿದೆ. ಈ ಕಾರ್ಯಕ್ರಮದ ಮೂರು ದಿನಗಳಿಂದ ಬಸವ ಉತ್ಸವ ನಡೆಯುತ್ತಿದೆ ಎಂದು ಶ್ರೀಗಳು ಮೆಚ್ಚುಗೆ ವ್ಯಕ್ತಪಡಿಸಿದರು.

ರಜತ ಮಹೋತ್ಸವಕ್ಕಾಗಿ 25 ಕಾರ್ಯಕ್ರಮಗಳನ್ನು ಆಯೋಜನೆ ಮಾಡುವ ಭರದಲ್ಲಿ ಶ್ರೀಗಳು 150ಕ್ಕು ಹೆಚ್ಚು ಕಾರ್ಯಗಳನ್ನು ಇಲ್ಲಿ ಕೈಗೊಂಡಿದ್ದಾರೆ. ಇದು ಅವರ ಕಾರ್ಯಕ್ಷಮತೆ ಕಾರಣವಾಗಿದೆ. ಶ್ರೀ ಮಹಾಂತಸ್ವಾಮಿಗಳ ದೂರ ದೃಷ್ಠಿ ಚಿಂತನೆ ಫಲವಾಗಿ ಇಂದು ಧಾರ್ಮಿಕ ಅಭಿವೃದ್ದಿ ಜೊತೆಗೆ ಶೈಕ್ಷಣ ಕ ಪ್ರಗತಿಯನ್ನು ಹೊಂದಿದೆ. ದೊಡ್ಡ ಕ್ಯಾಂಪಸ್ ನಿರ್ಮಾಣವಾಗಿದೆ. ಆದೇ ರೀತಿ ಭಕ್ತವೃಂದವು ಸಹ ಮಠದ ಅಭಿವೃದ್ದಿಯಲ್ಲಿ ಹೆಚ್ಚಿನ ಸಹಕಾರ ನೀಡುತ್ತಿದೆ. ಈ ಎಲ್ಲಾ ಕಾರ್ಯಕ್ರಮಗಳು ನಡೆಯಲು ಅವರ ಸಹಕಾರ ಪ್ರೇರಣೆ ಸಾಕ್ಷಿಯಾಗಿದೆ ಎಂದರು.

ಬೀದರ್ ಜಿಲ್ಲೆಯ ಬಾಲ್ಕಿ ಹಿರೇಮಠ ಮಹಾಸಂಸ್ಥಾನದ ಡಾ. ಶ್ರೀ ಬಸ ವ ಲಿಂಗಪಟ್ಟದೇವರು ಸಮಾರಂಭ ಉದ್ಘಾಟಿಸಿ ಮಾತನಾಡಿ, ಪ್ರತಿಯೊಬ್ಬರು ಬಸವಣ್ಣನವರ ವಚನಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಉತ್ತಮ ಪ್ರಜೆಗಳಾಗಬೇಕೆಂದರು. ಬಸವಣ್ಣ ಅವರನ್ನು ಹೃದಯದಲ್ಲಿಟ್ಟುಕೊಂಡು ಬದುಕಬೇಕು. ಬಸವ ಸೂತ್ರದ ಮೂಲಕ ನಾವೆ ಲ್ಲರೂ ಒಗ್ಗಟ್ಟಾಗಿ ಸಾಗಬೇಕಾಗಿದೆ. ಆಗ ಮಾತ್ರ ಏನನ್ನಾದರೂ ಸಾಧನೆ ಮಾಡಬಹುದು. ಅಂದಿನ ವಚನಕಾರರು ತಮ್ಮ ಪ್ರಾಣವನ್ನೇ ಕೊಟ್ಟು ಬಸವ ವಚನವನ್ನು ಸಂರಕ್ಷಣೆ ಮಾಡಿದ್ದಾರೆ ಎಂದರು. ಆದ್ದರಿಂದ ನಾವು ವಚನ ಸಾಹಿತ್ಯವನ್ನು ಉಳಿಸಿ ಬೆಳೆಸಿಕೊಂಡು ಹೋಗಬೇಕು. ಅವರನ್ನು ಪ್ರತಿಯೊಬ್ಬರು ನಂಬಬೇಕು. ಮೊಟ್ಟ ಮೊದಲಿಗೆ ಪ್ರಜಾಪ್ರಭುತ್ವವನ್ನು ಕೊಟ್ಟಿದ್ದು ವಚನ ಸಾಹಿತ್ಯ. ವಚನಗಳ ಮೂಲಕ ಬಸವಣ್ಣನವರು ಸಮ ಸಮಾಜವನ್ನು ನಿರ್ಮಾಣ ಮಾಡಿದರು ಎಂದರು. ಕಾಲೇಜಿನ ಉಪನ್ಯಾಸಕ ಅಶೋಕ ಬಾಗಳಿ ಯಾಲ ಮಠದ ಗುರು ಪರಂಪರೆಯ 'ಮಹಾಂತರು ಬೆಳಗಿದ ಮುರುಘ ಪ್ರಭೆ' ಗ್ರಂಥವನ್ನು ಇಳಕಲ್‌ನ ಮಹಾಂತೇಶ್ವರ ಸಂಸ್ಥಾನಮಠದ ಶ್ರೀ ಮಹಾಂತಸ್ವಾಮೀಜಿ ಬಿಡುಗಡೆಗೊಳಿಸಿ ಮಾತನಾಡಿದರು.ಕಾರ್ಯಕ್ರಮದಲ್ಲಿ ಸಿದ್ದಗಂಗಾ ಮಠದ ಶ್ರೀ ಸಿದ್ದಲಿಂಗಮಹಾಸ್ವಾಮೀಜಿ, ಚಿತ್ತರಗಿ ವಿಜಯ ಮಹಾಂತೇಶ್ವರ ಸಂಸ್ಥಾನದ ಗುರುಮಹಾಂತಸ್ವಾಮೀಜಿ, ದೇವನೂರು ದಾಸೋಹ ಮಠದ ಮಹಾಂತಸ್ವಾಮೀಜಿ, ಸಿದ್ದಮಲ್ಲೇಶ್ವರ ವಿರಕ್ತ ಮಠದ ಚನ್ನಬಸವಸ್ವಾಮೀಜಿ, ಹಾಸನದ ಶ್ರೀ ಗುರು ಮುಕುಂದೂರು ವಿರಕ್ತ ಮಠದ ಡಾ.ಶ್ರೀಮಹಾಂತ ಬಸವಲಿಂಗಸ್ವಾಮೀಜಿ, ಹರಗುರು ಚರಮೂರ್ತಿಗಳು ಹಾಗೂ ಮರಿಯಾಲ ಮತ್ತು ಸುತಮತ್ತಲಿನ ಭಕ್ತರು ಉಪಸ್ಥಿತರಿದ್ದರು. ಎರಡು ದಿನಗಳ ಶ್ರೀಮಠದಲ್ಲಿ ವಿವಿಧ ಕಾರ್ಯಕ್ರಮಗಳು ನಡೆಯಿತು.

# ಶ್ರೀ ಧರ್ಮಸ್ಥಳ ಟ್ರಸ್ಟ್‌ನಿಂದ ಆರ್ಥಿಕವಾಗಿ ಹಿಂದುಳಿದಿರುವ ಮಹಿಳೆಗೆ ಮನೆ ನಿರ್ಮಾಣ



ರಾಮನಗರ: ಆರ್ಥಿಕವಾಗಿ ತೀರಾ ಹಿಂದುಳಿದು, ನೆಮ್ಮದಿಯ ಜೀವನ ನಡೆಸಲು ಸಹ ಪರದಾಡುತ್ತಿದ್ದ ತಾಲ್ಲೂಕಿನ ಸುಗ್ಗನಹಳ್ಳಿ ಗ್ರಾಮದ ನಿವಾಸಿ ಮಂಗಳಗೌರಮ್ಮ ಅವರ ನೆರವಿಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ನೆರವ8ಗೆ ಬಂದಿದೆ.

ಯೋಜನೆಯ ಸುಗ್ಗನನಹಳ್ಳಿ ಕಾರ್ಯಕ್ಷೇತ್ರದ ಮಂಗಳ ಗೌರಮ್ಮ ರವರಿಗೆ ವಾತ್ಸಲ್ಯ ಮನೆ ನಿರ್ಮಿಸಿಕೊಡಲಾಗುತ್ತಿದೆ. ಈ ಸಂಬಂಧ ಗುದ್ದಲಿ ಪೂಜೆ ನಡೆಸಲಾಗಿದೆ. ಈ ವಿಚಾರದಲ್ಲಿ ಪತ್ರಿಕೆಯೊಂದಿಗೆ ಮಾತನಾಡಿದ ಜಿಲ್ಲಾ ನಿರ್ದೇಶಕರಾದ ಜಯಕರ್ ಶೆಟ್ಟಿ, ಮಂಗಳ ಗೌರಮ್ಮ ರವರು ಆರ್ಥಿಕವಾಗಿ ಹಿಂದುಳಿದಿದ್ದಾರೆ. ಇವರಿಗೆ ಯೋಜನೆಯಿಂದ ಮಾಶಾಸನ ಒಂದು ಸಾವಿರ ದಂತೆ ನೀಡಲಾಗುತ್ತಿದೆ. ಇದೀಗ ಅವರು ನೆಮ್ಮದಿಯಿಂದ ವಾಸ ಮಾಡಲು ಅನುಕೂಲ ಮಾಎಇಕೊಡುವ ಉದ್ದೇಶದಲ್ಲಿ "ವಾತ್ಸಲ್ಯ" ಯೋಜನೆಯಡಿ ಮನೆ ನಿರ್ಮಿಸಿಕೊಡಲಾಗುತ್ತಿದೆ. ಇಂದು ಗುದ್ದಲಿ ಪೂಜೆಯನ್ನು ನೆರವೇರಿಸಿದ್ದೇವೆ ಎಂದು ಮಾಹಿತಿ ಕೊಟ್ಟರು. ಶ್ರೀ ಕ್ಷೇತ್ರ ಧರ್ಮಸ್ಥಳ ಟ್ರಸ್ಟ್ ಮೂಲಕ ಜಿಲ್ಲೆಯಲ್ಲಿ ಇಂತಹ ಹಲವಾರು ಜನಹಿತ ಕಾರ್ಯಕ್ರಮಗಳು ಜಾರಿಯಲ್ಲಿವೆ ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯ ಮಂಜುನಾಥ್, ತಾಲೂಕಿನ ಯೋಜನಾಧಿಕಾರಿ ಮುರಳಿಧರ್, ಸುಗುನಳ್ಳಿ ಗ್ರಾಮ ಪಂಚಾಯತ್ ಸದಸ್ಯೆ ಪ್ರೇಮ ಗೋವಿಂದಯ್ಯ, ಮಲ್ಲೇಶ್, ವಲಯದ ಮೇಲ್ವಿಚಾರಕರಾದ ಆಕಾಶ್ ಜ್ಞಾನವಿಕಾಸ ಸಮನ್ವಯಾಧಿಕಾರಿ ಉಷಾ ಕಲ್ಯಾಣಿ, ಮನೆ ನಿರ್ಮಾಣಕ್ಕಾಗಿ ಭೂಮಿ ದಾನ ಮಾಡಿದ ಮಹಾದೇವ್ ಮಂಜುಳಾ ದಂಪತಿ, ಸೇವಾ ಪ್ರತಿನಿಧಿಯಾದ ಶೋಭಾ ಹಾಗೂ, ಊರಿನ ಗಣ್ಯರು, ತಂಡದ ಸದಸ್ಯರು ಉಪಸ್ಥಿತರಿದ್ದರು

# ತಮಿಳುನಾಡು, ಕೇರಳದಲ್ಲಿ ಕನ್ನಡಿಗರಿಗೆ ತೊಂದರೆ ಕೊಟ್ಟರೆ ಗಡಿ ಬಂದ್

ಚಾಮರಾಜನಗರ, ತಮಿಳುನಾಡು ಹಾಗೂ ಕೇರಳದಲ್ಲಿ ಪ್ರವಾಸ ಹಾಗೂ ಧಾರ್ಮಿಕ ಕ್ಷೇತ್ರಗಳಿಗೆ ತೆರಳುತ್ತಿರುವ ಕನ್ನಡಿಗರ ಮೇಲೆ ನಿರಂತರ ದೌರ್ಜನ್ಯ ಹಾಗು ಕಿರುಕುಳ ನಡೆಯುತ್ತಿದೆ. ಇದೇ ರೀತಿ ಮುಂದುವರಿದರೆ ಮುಂದಿನ ದಿನಗಳಲ್ಲಿ ಕೇರಳ ಹಾಗೂ ತಮಿಳುನಾಡು ಗಡಿ ಬಂದ್ ಚಳವಳಿಯನ್ನು ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಕರ್ನಾಟಕ ರಕ್ಷಣಾ ವೇದಿಕೆಯ ಜಿಲ್ಲಾಧ್ಯಕ್ಷ ಹೊನ್ನಹಳ್ಳಿ



ಮಂಜೇಶ್ ಎಚ್ಚರಿಕೆ ನೀಡಿದ್ದಾರೆ.

ಇತ್ತೀಚೆಗೆ ಕರ್ನಾಟಕದಿಂದ ಬಹಳಷ್ಟು ಮಂದಿ, ತಮಿಳುನಾಡು ಹಾಗೂ ಕೇರಳ ಪ್ರವಾಸ ಕೈಗೊಂಡಿದ್ದಾರೆ. ತಮಿಳುನಾಡಿನ ಓಂಶಕ್ತಿ ಹಾಗು ಕೇರಳದ ಅಯ್ಯಪ್ಪಸ್ವಾಮಿ ದೇವಸ್ಥಾನಕ್ಕೆ ತೆರಳುವ ಭಕ್ತರು ಹಾಗೂ ಕರ್ನಾಟಕ ನೋಂದಣಿ ಹೊಂದಿರುವ ವಾಹನಗಳ ಮೇಲೆ ದೌರ್ಜನ್ಯಗಳು ನಡೆಯುತ್ತಿದೆ. ಕೆಲವು ಪುಂಡರು ವಾಹನಗಳನ್ನು ತಡೆದು ಪ್ರಶ್ನೆ ಮಾಡುವುದು, ಕನ್ನಡ ಬಾವುಟಗಳನ್ನು ತೆಗೆದು ನಮ್ಮ ರಾಜ್ಯ ಪ್ರವೇಶ ಮಾಡಿ ಎನ್ನುವುದು, ಬಾವುಟವನ್ನು ಕಿತ್ತು ಹಾಕುವಂತಹ ದುಸ್ಸಾಹಸಕ್ಕೆ ಹೋಗುತ್ತಿದ್ದಾರೆ. ಇಂಥ ದೌರ್ಜನ್ಯಗಳು ನಿಲ್ಲಬೇಕು. ಅಲ್ಲಿನ ರಾಜ್ಯ ಸರ್ಕಾರ, ಪೊಲೀಸ್ ಇಲಾಖೆಯ ಹಾಗೂ ಆಡಳಿತ ವರ್ಗ ಇಂಥ ಪುಂಡರ ವಿರುದ್ದ ಕ್ರಮ ಕೈಗೊಳ್ಳಬೇಕು. ಹೊರ ರಾಜ್ಯದ ಪ್ರವಾಸಿಗರಿಗೆ ರಕ್ಷಣೆ ನೀಡಬೇಕು ಎಂದು ಒತ್ತಾಯಿಸಿದರು. ಇದೇ ರೀತಿ ಉದ್ದಟತನವನ್ನು ತಮಿಳು ಹಾಗು ಕೇರಳಿಗರು ಮುಂದುವರಿಸಿದರೆ ಮುಂದಿನ ದಿನಗಳಲ್ಲಿ ಕರ್ನಾಟಕ ರಕ್ಷಣಾ ವೇದಿಕೆಯ ಪದಾಧಿಕಾರಿಗಳು ಹಾಗು ಸ್ವಾಭಿಮಾನಿ ಕನ್ನಡಿಗರು ತಮಿಳುನಾಡು ಹಾಗೂ ಕೇರಳ ಗಡಿಯನ್ನು ಬಂದ್ ಮಾಡಿ, ಈ ರಾಜ್ಯಗಳ ವಾಹನಗಳು ರಾಜ್ಯ ಪ್ರವೇಶ ಮಾಡದಂತೆ ತಡೆಯಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

# ಗುಣಾತ್ಮಕ ಶಿಕ್ಷಣಕ್ಕೆ ಪೋಷಕರ ಬೆಂಬಲ



ಮೈಸೂರು: ಪ್ರಸ್ತುತ ದಿನಮಾನಗಳಲ್ಲಿ ಗುಣಾತ್ಮಕ ಶಿಕ್ಷಣ ನೀಡಿದರೆ ಪೋಷಕರು ಬೆಂಬಲ ನೀಡುತ್ತಾರೆ ಎಂದು ಎಂಡಿಎ ಮಾಜಿ ಅಧ್ಯಕ್ಷ ಎಚ್.ವಿ.ರಾಜೀವ್ ಹೇಳಿದರು.

ನಗರದ ಶ್ರೀರಾಂಪುರ ಪರಸಯ್ಯಹುಂಡಿ ಶ್ರೀ ಚನ್ನಕೇಶವ ಸ್ವಾಮಿ ಪ್ರೌಢಶಾಲೆಯ ವಾರ್ಷಿಕೋತ್ಸವ, ಗುರುವಂದನೆ ಹಾಗೂ ಸ್ನೇಹಸಮ್ಮಿಲನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು. ಹಿಂದೆ ಕಾಳಯ್ಯನವರು ಗ್ರಾಮೀಣ ಪ್ರದೇಶದ ಮಕ್ಕಳಿಗೂ ಉತ್ತಮ ಶಿಕ್ಷಣ ಸಿಗಲಿ ಎಂಬ ಸೇವಾಮನೋಭಾವದಿಂದ ಈ ಶಾಲೆಯನ್ನು ಆರಂಬಿಸಿದರು. ಯಾವುದೇ ಶುಲ್ಕ ಪಡೆಯುತ್ತಿರಲಿಲ್ಲ. ಆದರೆ ಈಗ ಪರಿಸ್ಥಿತಿ ಬದಲಾಗಿದೆ. ಬಂಡವಾಳ ಹಾಕಿ ಬಂಡವಾಳ ತೆಗೆಯುತ್ತಿದ್ದಾರೆ. ಶುಲ್ಕ ಪಡೆಯದೇ ಶಾಲೆಗಳನ್ನು ಅದರಲ್ಲೂ ಕನ್ನಡ ಮಾಧ್ಯಮ ಶಾಲೆಗಳನ್ನು ನಡೆಸಲು ಸಾಧ್ಯವೇ ಇಲ್ಲ ಎಂದರು. ಇವತ್ತು ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕುಸಿದಿದೆ. ಆದರೆ ಖಾಸಗಿ ಶಾಲೆಗಳಲ್ಲಿ ಉತ್ತಮ ಶಿಕ್ಷಣ ನೀಡಿದರೆ ಪೋಷಕರು ಶುಲ್ಕದ ಬಗ್ಗೆ ಯೋಚನೆ ಮಾಡುವುದಿಲ್ಲ. ಆದ್ದರಿಂದ ಅತ್ಯುತ್ತಮ ಶಿಕ್ಷಕರನ್ನು ನೇಮಿಸಿಕೊಂಡು ಗುಣಾತ್ಮಕ ಶಿಕ್ಷಣ ನೀಡುವ ಮೂಲಕ ಶಾಲೆಯನ್ನು ಉಳಿಸಬೇಕು ಎಂದು ಕಿವಿಮಾತು ಹೇಳಿದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿದರು. ಸಾಲಿಗ್ರಾಮ ಎಸ್‌ಸಿಇಎಲ್ ಅಧ್ಯಕ್ಷ ಲೋಕೇಶ್ವರ, ನಿರ್ದೇಶಕ ಕೆ.ಆರ್.ಬಸವರಾಜು, ಗೌ. ಕಾರ್ಯದರ್ಶಿ ಚನ್ನಮಲ್ಲಯ್ಯ, ವಸತಿ ನಿಲಯ ಪಾಲಕ ಗುರುಪ್ರಸಾದ್, ಎಸ್‌ಸಿಇಎಲ್ ನಿರ್ದೇಶಕರಾದ ಶಿವಪ್ಪ, ಎಂ.ಎಲ್.ಯುಕ್ತಶ್ರೀ, ರಂಗರಾಮು, ಅಶೋಕಪುರಂ ಅಶೋಕ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಎಂ.ರಾಜೀವ್, ಆಡಳಿತಾಧಿಕಾರಿ ತತ್ಸಮ, ಸಿ.ಕೆ. ಡ್ರೀಮ್ ಇಂಗ್ಲಿಷ್ ಶಾಲೆಯ ಆಡಳಿತಾಧಿಕಾರಿ ವಿ. ಸುಶ್ಮಿತಾ ಪವಾರ್, ಮುಖ್ಯ ಶಿಕ್ಷಕ ಶಂಕರ್, ಜಾನ್ ಪೀಟರ್, ದೇವರಾಜ್ ಮೊದಲಾದವರು ಇದ್ದರು. ಗಿರೀಶ್, ಜೂ.ಅಂಬರೀಶ್, ಜೂ.ಮಾಲಾಶ್ರೀ ಅವರಿಂದ ಮನರಂಜನೆ, ಅಮ್ಮ ರಾಮಚಂದ್ರ ಗಾಯನ ಕಾರ್ಯಕ್ರಮ ನಡೆಯಿತು.

# ವಾತ್ಸಲ್ಯ ಮನೆ ನಿರ್ಮಾಣಕ್ಕೆ ಭೂಮಿ ಪೂಜೆ



ಗುಂಡ್ಲುಪೇಟೆ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಪಟ್ಟಣದ ಕುಂಬಾರ ಬೀದಿಯ ನಿವಾಸಿ ಸರಸ್ವತಿ ಎಂಬುವರಿಗೆ ವಾತ್ಸಲ್ಯ ಯೋಜನೆಯಡಿ ಮನೆ ನಿರ್ಮಾಣಕ್ಕೆ ಪುರಸಭಾ ಮಾಜಿ ಸದಸ್ಯ ನಾಗೇಶ್ ಭೂಮಿ ಪೂಜೆ ನೆರವೇರಿಸಿದರು.

ಈ ವೇಳೆ ಮಾತನಾಡಿದ ಅವರು,ಮಾತೃಶ್ರೀ ಹೇಮಾವತಿ ಅಮ್ಮನವರ ಆಶಯಗಳಂತೆ ಧರ್ಮಸ್ಥಳವು ಬಡವರಿಗೆ, ನಿರ್ಗತಿಕರಿಗೆ ತಿಂಗಳಿಗೆ ಒಂದು ಸಾವಿರದಂತೆ ಮಾಸಾಸನವನ್ನು ನೀಡುತ್ತಿದೆ ಹಾಗೂ ಮನೆ ಇಲ್ಲದವರಿಗೆ ಮನೆ ಕಟ್ಟಿಕೊಡುವ ಕೆಲಸವನ್ನು ಮತ್ತು ಅನಾರೋಗ್ಯದಿಂದ ಬಳಲುತ್ತಿದ್ದವರಿಗೆ ವಾಟರ್ ಬೆಡ್, ವೀಲ್ ಚೇರ್ , ಹ್ಯಾಂಡ್ ಸ್ಟಿಕ್ ,ಜಲಮಂಗಳ ಸೇರಿದಂತೆ ಇನ್ನಿತರ ಸಾಮಾಜಿಕ ಕಾರ್ಯಕ್ರಮವೆಂದು ನಡೆಸಿಕೊಂಡು ಬರುತ್ತಿದೆ.ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಬದುಕುವ ಸೌಲಭ್ಯಗಳ ಕಲ್ಪಿಸುತ್ತಿರುವ ಧರ್ಮಸ್ಥಳ ಸಂಸ್ಥೆ ಎಂದು ಹೇಳಲು ಹೆಮ್ಮೆಯಾಗುತ್ತಿದೆ ಎಂದು ತಿಳಿಸಿದರು.

ತಾಲೂಕು ಧರ್ಮಸ್ಥಳ ಗ್ರಾಮಾಭಿ ವೃದ್ದಿ ಸಂಸ್ಥೆಯ ಯೋಜನಾಧಿಕಾರಿ ಚಂದ್ರಶೇಖರ್ ಮಾತನಾಡಿ, ತಾಲ್ಲೂಕಿನಲ್ಲಿ ಅಸಹಾಯಕರನ್ನು ಗುರು ತಿಸಿ ಮನೆ ನಿರ್ಮಾಣ ಮಾಸಾಸನ ಸೇರಿದಂತೆ ಹಲವು ಸೌಲಭ್ಯಗಳನ್ನು ಸಂಸ್ಥೆಯಿಂದ ಯಶಸ್ವಿಯಾಗಿ ನಡೆಸಿಕೊಂಡು ಬರಲಾಗುತ್ತಿದೆ ಎಂದು ಹೇಳಿದರು. ಈ ಕಾರ್ಯಕ್ರಮದಲ್ಲಿ ವಲಯ ಮೇಲ್ವಿಚಾರಕ ಮಂಜುನಾಥ್, ಮತ್ತು ಜ್ಞಾನವಿಕ ಸಮನ್ವಯಾಧಿಕಾರಿ ಚೈತ್ರ ಹಾಗೂ ಸೇವಾ ಪ್ರತಿನಿಧಿ ಶೀಲಾ ಮತ್ತು ಸದಸ್ಯರು ಪಾಲ್ಗೊಂಡಿದ್ದರು.

## ಜಯ ಕರ್ನಾಟಕ ಸಂಘಟನೆಯ ರಾಜ್ಯಾಧ್ಯಕ್ಷ ಡಾ.ಜಗದೀಶ್ ಹೇಳಿಕೆ

# ನಾಡು-ನುಡಿ, ನೆಲ-ಜಲ ಸಂರಕ್ಷಣೆಗೆ ಹೋರಾಟ

ಕೆ.ಆರ್.ಪೇಟೆ: ಕನ್ನಡ ನಾಡು-ನುಡಿ, ನೆಲ-ಜಲದ ಸಂರಕ್ಷಣೆ ಸೇರಿದಂತೆ ರಾಜ್ಯದ ಜ್ವಲಂತ ಸಮಸ್ಯೆಗಳ ನಿರ್ಮೂಲನೆಗೆ ಜಯ ಕರ್ನಾಟಕ ಸಂಘಟನೆಯು ಪ್ರಾಮಾಣಿಕವಾಗಿ, ಕ್ರಿಯಾಶೀಲವಾಗಿ ರಾಜ್ಯದ ಉದ್ದಗ ಲಕ್ಕೂ ಹೋರಾಟ ಮಾಡುತ್ತಿದೆ ಎಂದು ಜಯ ಕರ್ನಾಟಕ ಸಂಘಟನೆಯ ರಾಜ್ಯಾಧ್ಯಕ್ಷ ಡಾ.ಜಗದೀಶ್ ಹೇಳಿದರು.

ಪಟ್ಟಣದ ಪುರಸಭಾ ಕಚೇರಿಯ ಪಕ್ಕದ ತಮ್ಮಣ್ಣ ಗೌಡ ಬಡಾವಣೆ(ಟಿ.ಬಿ.ಬಡಾವಣೆ)ಯಲ್ಲಿ ತಾಲ್ಲೂಕು ಜಯ ಕರ್ನಾಟಕ ಸಂಘಟನೆಯ ವತಿಯಿಂದ ಆಯೋಜಿಸಿದ್ದ 2025ನೇ ಸಾಲಿನ ಕನ್ನಡ ರಾಜ್ಯೋತ್ಸವ ಸಮಾರಂಭವನ್ನು ಜ್ಯೋತಿ ಬೆಳಗಿಸಿ ಉದ್ಘಾಟಿಸಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರು, ನಿವೃತ್ತ ಯೋಧರು ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಿ, ಗೌರವಿಸಿ ಮಾತನಾಡಿದರು.

ಶಾಸಕ ಹೆಚ್.ಟಿ.ಮಂಜು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ತೆಂಡೇಕೆರೆ ಬಾಳೆಹೊನ್ನೂರು ಶಾಖ ಮಠದ ಪೂಜ್ಯ ಸ್ವಾಮೀಜಿಗಳಾದ ಗಂಗಾಧರ ಶಿವಾಚಾರ್ಯ ಸ್ವಾಮೀಜಿ, ಕಾಪನಹಳ್ಳಿ ಗವಿಮಠದ



ಪೂಜ್ಯ ಸ್ವಾಮಿಗಳಾದ ಶ್ರೀ ಸ್ವತಂತ್ರ ಚನ್ನವೀರಯ್ಯ ಸ್ವಾಮೀಜಿ, ಬೆಡದಹಳ್ಳಿಯ ಪಂಚಭೂತೇಶ್ವರ ಮಠದ ಸ್ವಾಮೀಜಿಗಳಾದ ಶ್ರೀ ರುದ್ರಮುನಿ ಸ್ವಾಮೀಜಿ ಅವರು ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ್ದರು. ಆದಿಚುಂಚನಗಿರಿ ಹೇಮಗಿರಿ ಶಾಖಾ ಮಠದ ಗೌರವ ಕಾರ್ಯದರ್ಶಿಗಳಾದ ಡಾ.ಜೆ.ಎನ್. ರಾಮಕೃಷ್ಣೇಗೌಡ, ಕರ್ನಾಟಕ ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಿ.ನಾಗೇಂದ್ರಕುಮಾರ್, ರಾಜ್ಯ ಆರ್‌ಟಿಓ ಅಧಿಕಾರಿಗಳ ಸಂಘದ ಅಧ್ಯಕ್ಷ ಮಲ್ಲಿಕಾರ್ಜುನ್, ವಿಷ್ಣು ಸೇನಾ ಸಮಿತಿಯ ರಾಜ್ಯಾಧ್ಯಕ್ಷ ಡಾ.ಪ್ರಶಾಂತ್ ಚಕ್ರವರ್ತಿ, ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎ.ಬಿ.ಕುಮಾರ್, ಜಯಕರ್ನಾಟಕ ಸಂಘಟನೆಯ ರಾಜ್ಯ ಉಪಾಧ್ಯಕ್ಷರು ಹಾಗೂ ರಾಜ್ಯ ಕಾನೂನು ಸಲಹೆಗಾರ ನಾರಾಯಣಸ್ವಾಮಿ, ಗೌರವಾಧ್ಯಕ್ಷ ಮುನಿಸ್ವಾಮಿ, ರಾಜ್ಯ ಉಪಾಧ್ಯಕ್ಷ ವಿಜಯ, ಮಂಡ್ಯ ಜಿಲ್ಲಾಧ್ಯಕ್ಷ ಡಾ. ಯೋಗಣ್ಣ, ಹಾಸ್ಯ ನಟರಾದ ಟೆನ್ನಿಸ್ ಕೃಷ್ಣ, ಕಿರುತೆರೆ ಕಲಾವಿದರಾದ ಶಿವಣ್ಣ, ಚಾರ್ಲಿ ಕುಮಾರ್, ನಂದೀಶ್, ಜಯ ಕರ್ನಾಟಕ ಸಂಘಟನೆ ತಾಲೂಕು ಘಟಕದ ಅಧ್ಯಕ್ಷ ಹೆಚ್.ಆರ್.ಸೋಮಶೇಖರ್, ತಾಲೂಕು ಯುವ ಘಟಕದ ಅಧ್ಯಕ್ಷ ಕೆ.ಎಲ್.ಮಹೇಶ್, ಮಹಿಳಾ ಘಟಕದ ಅಧ್ಯಕ್ಷೆ ಜಯಲಕ್ಷಿ ?ಮ, ಸರಸ್ವತಿ, ಮಂಜುಳಾ, ರತ್ನಮ್ಮ, ಮಧು, ಕುಮಾರ್ ಸೇರಿದಂತೆ ನೂರಾರು ಜನರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರಾದ ವಿಷ್ಣು ಸೇನಾ ಸಮಿತಿಯ ರಾಜ್ಯಾಧ್ಯಕ್ಷ ಡಾ.ಪ್ರಶಾಂತ್ ಚಕ್ರವರ್ತಿ, ರೈತ ಮುಖಂಡ ವಡಕಹಳ್ಳಿ ಮಂಜಣ್ಣ, ನಿವೃತ್ತ ಸೈನಿಕ ಸುಕುಮಾರ್, ಡಾ.ಶ್ರೀಕಾಂತ್, ಡಾ. ಕಾವ್ಯ, ಅವರನ್ನು ಗಣ್ಯರು ಸನ್ಮಾನಿಸಿ ಗೌರವಿಸಲಾಯಿತು.

## ಎಸ್.ಎಸ್.ಎಲ್.ಸಿ. ಪರೀಕ್ಷಾ ಫಲಿತಾಂಶ ಹೆಚ್ಚಿಸಲು ಸೂಚನೆ: ಜಿ.ಪಂ. ಸಿಇಓ

# ಫಲಿತಾಂಶ ಹೆಚ್ಚಳ ಸಂಬಂಧ 56 ನೋಡಲ್ ಅಧಿಕಾರಿಗಳ ನೇಮಕ





**ಮಂಡ್ಯ:** ಎಸ್.ಎಸ್.ಎಲ್.ಸಿ ಪರೀಕ್ಷೆಯ ಫಲಿತಾಂಶ ಉತ್ತಮಗೊಳಿಸುವ ಸಂಬಂಧ 56 ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಲಾಗಿದ್ದು, ಈ ಅಧಿಕಾರಿಗಳು ತಮ್ಮ ವ್ಯಾಪ್ತಿಯ ಶಾಲೆಗಳಿಗೆ ಭೇಟಿ ನೀಡಿ ಫಲಿತಾಂಶ ಉತ್ತಮಗೊಳಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಬೇಕೆಂದು ಜಿ.ಪಂ. ಸಿಇಓ ನಂದಿನಿ ಕೆ.ಆರ್. ಸೂಚಿಸಿದರು.

ಬುಧವಾರ ಜಿಲ್ಲಾ ಪಂಚಾಯತ್ ನ ಕಾವೇರಿ ಸಭಾಂಗಣದಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಯ ಫಲಿತಾಂಶ ಉತ್ತಮಗೊಳಿಸುವ ಸಂಬಂಧ ಸಿಇಓ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ನೋಡಲ್ ಅಧಿಕಾರಿಗಳು ತಮಗೆ ವಹಿಸಲಾಗಿರುವ ಶಾಲೆಗಳಿಗೆ ಡಿಸೆಂಬರ್ 20 ರೊಳಗಾಗಿ ಭೇಟಿ ನೀಡಿ ಶಾಲೆಯಲ್ಲಿನ ಸಮಸ್ಯೆಗಳ ಬಗ್ಗೆ ಪಟ್ಟಿ ಮಾಡಿ ಆಯಾ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ಡಿಡಿಪಿಐ ಅವರಿಗೆ ಸಲ್ಲಿಸಬೇಕು ಎಂದು ತಿಳಿಸಿದರು.

ಕೆಲವು ಶಾಲೆಗಳಲ್ಲಿ ಪಠ್ಯಗಳನ್ನು ಸರಿಯಾಗಿ ಭೋದಿಸುತ್ತಿಲ್ಲ, ಕೆಲವು ಶಿಕ್ಷಕರು ಆನೇಕ ಕಾರಣಗಳನ್ನು ನೀಡಿ ತರಗತಿಗಳನ್ನು ತೆಗೆದುಕೊಳ್ಳುತ್ತಿಲ್ಲ, ಯಾವುದೇ ವಿಶೇಷ ತರಗತಿಗಳನ್ನು ತೆಗೆದುಕೊಳ್ಳುತ್ತಿಲ್ಲ ಹಾಗೂ ಮಾದರಿ ಪರೀಕ್ಷೆಗಳನ್ನು ನಡೆಸಿ ಪರೀಕ್ಷೆಗೆ ಸಜ್ಜುಗೊಳಿಸಲು ಪ್ರಯತ್ನಿಸುತ್ತಿಲ್ಲ ಎಂಬ ಬಗ್ಗೆ ಆನೇಕ ದೂರುಗಳು ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಿಂದ ಕೇಳಿ ಬರುತ್ತಿವೆ. ಈ ಬಗ್ಗೆ ಶಾಲೆಗಳಿಗೆ ಭೇಟಿ ನೀಡಿ ಸ್ವತಃ ಪರಿಶೀಲಿಸಿ ಖಚಿತಪಡಿಸಿಕೊಂಡು ಸಮಸ್ಯೆಗಳನ್ನು ಸರಿಪಡಿಸಲು ಅಧಿಕಾರಿಗಳಿಗೆ ಸೂಚಿಸಿದ್ದೇನೆ ಎಂದರು.

ಮಾದರಿ ಪರೀಕ್ಷೆಗಳನ್ನು ಮಾಡಲು ಕರೆ: ಜಿಲ್ಲೆಯ ಎಲ್ಲಾ 253 ಹೈಸ್ಕೂಲ್ ಗಳಲ್ಲಿಯೂ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ಮಾದರಿ ಪರೀಕ್ಷೆಗಳನ್ನು ಮಾಡಬೇಕು. ಸದರಿ ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು ಅಂತರ ತಾಲ್ಲೂಕು ಶಿಕ್ಷಕರಿಂದ ಮೌಲ್ಯಮಾಪನ ಮಾಡಿಸಲು ಜಿ.ಪಂ. ಸಿಇಓ ಸೂಚಿಸಿದರು.

ಸದರಿ ಪರೀಕ್ಷೆಗಳಲ್ಲಿ ಅನುತ್ತೀರ್ಣರಾಗುವ ವಿದ್ಯಾರ್ಥಿಗಳಿಗೆ ವಿಶೇಷ ಗಮನ ನೀಡಿ ಯಾವ ವಿಷಯಗಳಲ್ಲಿ ದುರ್ಬಲರಾಗಿದ್ದಾರೆ ಎಂಬ ಬಗ್ಗೆ ಪರಿಶೀಲಿಸಿ ಸದರಿ ವಿಷಯಗಳಿಗೆ ಹೆಚ್ಚಿನ ಒತ್ತು ನೀಡಿ ಪುನಾರಾವರ್ತನೆ ಮತ್ತು ವಿಶೇಷ ತರಗತಿಗಳ ಮೂಲಕ ವಿಷಯವನ್ನು ಮನದಟ್ಟು ಮಾಡಿಸಲು ಪ್ರಯತ್ನಿಸಬೇಕು.

ಕಳೆದ ಸಾಲಿನಲ್ಲಿ ಕಡಿಮೆ ಫಲಿತಾಂಶ ಪಡೆದಿರುವ ಶಾಲೆಗಳಿಗೆ ಹೆಚ್ಚಿನ ಆದ್ಯತೆ ನೀಡಿ: ನೋಡಲ್ ಅಧಿಕಾರಿಗಳು ತಮಗೆ ನೀಡಲಾಗಿರುವ 6ರಿಂದ 8 ಶಾಲೆಗಳ ಪೈಕಿ ಕಡಿಮೆ ಫಲಿತಾಂಶ ಪಡೆದಿರುವ ಶಾಲೆಗಳಿಗೆ ಆದ್ಯತೆ ನೀಡಿ ಆಗಿಂದಾಗ್ಗೆ ಭೇಟಿ ನೀಡಿ ಪರಿಶೀಲಿಸಿ ವಿದ್ಯಾರ್ಥಿಗಳ ಕಲಿಕೆಯ ಮಟ್ಟದಲ್ಲಿನ ಬದಲಾವಣೆ, ಶಿಕ್ಷಕರು ವೇಳಾಪಟ್ಟಿಯಂತೆ ತರಗತಿಗಳನ್ನು ತೆಗೆದುಕೊಳ್ಳುತ್ತಿರುವ ಬಗ್ಗೆ, ವಿದ್ಯಾರ್ಥಿಗಳು ಶಾಲೆಗೆ ಹಾಜರಾಗುತ್ತಿರುವ ಬಗ್ಗೆ, ಮಾದರಿ ಪರೀಕ್ಷೆಗಳನ್ನು ನಡೆಸುತ್ತಿರುವ ಬಗ್ಗೆ ಪರಿಶೀಲಿಸಬೇಕು ಎಂದು ಸೂಚಿಸಿದರು.

ವಿದ್ಯಾರ್ಥಿಗಳಿಗೆ ಆತ್ಮ ಸ್ಥೈರ್ಯ ತುಂಬಬೇಕು, ಓದಿನಲ್ಲಿ ಹಿಂದುಳಿದಿರುವ ವಿದ್ಯಾರ್ಥಿಗಳನ್ನು ಗುರುತಿಸಿ ಅವರ ಪೋಷಕರೊಂದಿಗೆ ಚರ್ಚಿಸಿ ಮನೆಯಲ್ಲಿಯೂ ಓದಲು ಉತ್ತಮ ವಾತಾವರಣ ನಿರ್ಮಾಣ ಮಾಡುವಂತೆ ತಿಳಿಸಬೇಕು, ವಿದ್ಯಾರ್ಥಿಗಳೊಂದಿಗೆ ವೈಯಕ್ತಿಕವಾಗಿ ಚರ್ಚಿಸಿ ಯಾವುದಾದರೂ ವಿಷಯಗಳಲ್ಲಿ ಸಮಸ್ಯೆ ಇದಯೇ ಎಂಬ ಬಗ್ಗೆ ತಿಳಿಯಬೇಕು ಎಂದು ತಿಳಿಸಿದರು.

ಶಿಕ್ಷಕರು ಜವಬ್ದಾರಿಯಿಂದ ಕರ್ತವ್ಯ ನಿರ್ವಹಿಸಿ: ಪ್ರತಿಯೊಬ್ಬ ವ್ಯಕ್ತಿಯು ತಾನು ಎಷ್ಟೇ ಎತ್ತರಕ್ಕೆ ಬೆಳೆದರೂ ತನಗೆ ಪಾಠ ಕಲಿಸಿದ ಗುರುವನ್ನು ಮರೆಯುವುದಿಲ್ಲ ಹಾಗೂ ಬಹಳ ಗೌರವದಿಂದ ಕಾಣುತ್ತಾನೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳ ಜೀವನ ಶಿಕ್ಷಕರ ಪಾತ್ರ ಬಹಳ ಪ್ರಮುಖವಾದುದಾಗಿದೆ. ಆದ್ದರಿಂದ ಎಲ್ಲಾ ಶಿಕ್ಷಕರು ತಮ್ಮ ಜವಬ್ದಾರಿಯನ್ನು ಅರಿತು ಕರ್ತವ್ಯ ನಿರ್ವಹಿಸುವಂತೆ ತಿಳಿಸಿದರು.

ಎಸ್.ಎಸ್.ಎಲ್.ಸಿ. ಎನ್ನುವುದು ವಿದ್ಯಾರ್ಥಿಯ ಜೀವನದಲ್ಲಿ ಪ್ರಮುಖವಾದ ಘಟ್ಟವಾಗಿದ್ದು, ಈ ಪರೀಕ್ಷೆಯಲ್ಲಿ ಅನುತ್ತೀರ್ಣರಾಗುವ ಬಹುತೇಕ ವಿದ್ಯಾರ್ಥಿಗಳ ಶಿಕ್ಷಣ ಅಂತಿಮಗೊಳ್ಳುತ್ತದೆ. ಅದರಲ್ಲಿಯೂ ಹೆಣ್ಣುಮಕ್ಕಳು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಅನುತ್ತೀರ್ಣರಾದಲ್ಲಿ ಮತ್ತೊಮ್ಮೆ ಶಿಕ್ಷಣ ಮುಂದುವರೆಸುವುದು ಕಷ್ಟಸಾಧ್ಯವಾದುದಾಗಿರುತ್ತದೆ. ಆ ಹಿನ್ನೆಲೆಯಲ್ಲಿ ಶಿಕ್ಷಕರು ತಮ್ಮ ಜವಬ್ದಾರಿಯನ್ನು ಅರಿತು ಕೆಲಸ ನಿರ್ವಹಿಸಬೇಕು ಎಂದು ತಿಳಿಸಿದರು.

ವಾಟ್ಸಪ್ ಗುಂಪು ರಚಿಸಿ ಜಿ.ಪಂ. ಕಚೇರಿಯಿಂದ ಮೇಲ್ವಿಚಾರಣೆ: ನೋಡಲ್ ಅಧಿಕಾರಿಗಳು, ಬಿಇಓ ಗಳು, ಡಿಡಿಪಿಐ ಸೇರಿದಂತೆ ಇತರೆ ಅಧಿಕಾರಿಗಳ ವಾಟ್ಸಪ್ ಗುಂಪು ಸೃಜಿಸಿ ಜಿ.ಪಂ. ಕಚೇರಿಯಿಂದ ಮೇಲ್ವಿಚಾರಣೆ ನಡೆಸಲು ಉದ್ದೇಶಿಸಲಾಗಿದ್ದು, ಇಂದಿನಿಂದಲೇ ಎಲ್ಲಾ ನೋಡಲ್ ಅಧಿಕಾರಿಗಳು ಕಾರ್ಯಪವೃತ್ತರಾಗಿ ಶಾಲಾ ಭೇಟಿಯ ಛಾಯಾಚಿತ್ರಗಳು, ಫಲಿತಾಂಶ ಉತ್ತಮಗೊಳಿಸಲು ಸಲಹೆಗಳು, ಫಲಿತಾಂಶ ಉತ್ತಮಗೊಳಿಸಲು ಹಮ್ಮಿಕೊಳ್ಳಲಾಗಿರುವ ಕಾರ್ಯತಂತ್ರಗಳ ಬಗ್ಗೆ ಮಾಹಿತಿ ಹಂಚಿಕೊಳ್ಳಲು ಸೂಚಿಸಿದರು.

ಈ ಸಂದರ್ಭದಲ್ಲಿ ಶಾಲಾ ಶಿಕ್ಷಣ ಇಲಾಖೆಯ ಡಿಡಿಪಿಐ ಲೋಕೇಶ್ ಜಿ., ಡಯಟ್ ಪ್ರಾಂಶುಪಾಲರಾದ ಯೋಗೇಶ್, ಜಿಲ್ಲಾ ಪಂಚಾಯತ್ ನ ಸಹಾಯಕ ಕಾರ್ಯದರ್ಶಿ (ಅಭಿವೃದ್ಧಿ) ಚಂದ್ರು, ಜಿಲ್ಲೆಯ ಎಲ್ಲಾ ಬಿಇಓ ಗಳು, ಬಿ.ಆರ್.ಸಿ. & ಸಿ.ಆರ್.ಸಿ. ಗಳು ಸೇರಿದಂತೆ ಇತರರು ಹಾಜರಿದ್ದರು.

## ಮಿಷನ್ 90ಗೆ ಚಾಲನೆ

**ಪರೀಕ್ಷೆ ಆರಂಭವಾಗಲೂ ಇನ್ನೂ 92 ದಿನಗಳು ಬಾಕಿ ಇದ್ದು, ಎಲ್ಲಾ ದಿನಗಳಲ್ಲಿಯೂ ಎಸ್.ಎಸ್.ಎಲ್.ಸಿ. ಫಲಿತಾಂಶ ಉತ್ತಮಗೊಳಿಸಲು ಶಿಕ್ಷಣ ಇಲಾಖೆಯ ಎಲ್ಲಾ ಹಂತದ ಅಧಿಕಾರಿಗಳು, ಸಿಬ್ಬಂದಿಗಳು, ಶಿಕ್ಷಕರು ಕಾರ್ಯಪವೃತ್ತರಾಗಬೇಕು. ನಾಳೆಯಿಂದ 3 ದಿನಗಳ ಕಾಲ ಅಂದರೆ ಗುರುವಾರ, ಶುಕ್ರವಾರ ಮತ್ತು ಶನಿವಾರ ಗಳಂದು ಪ್ರತಿ ದಿನ 2 ವಿಷಯಗಳಂತೆ ಪರೀಕ್ಷೆ ಹಮ್ಮಿಕೊಳ್ಳಬೇಕು. ಪ್ರಶ್ನೆ ಪತ್ರಿಕೆಯನ್ನು ಜಿಲ್ಲಾ ಹಂತದಿಂದ ನೀಡಬೇಕು. ಪರೀಕ್ಷೆಯನ್ನು ಪಾರದರ್ಶಕವಾಗಿ ನಡೆಸಬೇಕು. ಉತ್ತರ ಪತ್ರಿಕೆಗಳನ್ನು ಬೇರೆ ತಾಲ್ಲೂಕಿನ ಶಿಕ್ಷಕರಿಂದ ಮೌಲ್ಯಮಾಪನ ನಡೆಸಬೇಕು. ಶೇಕಡ 50ಕ್ಕಿಂತ ಕಡಿಮೆ ಅಂಕ ತೆಗೆದುಕೊಳ್ಳುವ ವಿದ್ಯಾರ್ಥಿಗಳಿಗೆ ಹೆಚ್ಚಿನ ಗಮನ ನೀಡಬೇಕು.**

**ರಾಜ್ಯ ಕಚೇರಿಯಿಂದ ನೀಡಲಾಗಿರುವ ಖಣಾಜಜಟಣ ಅಂಡಿಟಜಡಿ ನಲ್ಲಿ ಲಭ್ಯವಿರುವ ನೀಲಿ ನಕ್ಷೆ ಯಂತೆ ಎಲ್ಲಾ ಆರು ವಿಷಯಗಳಿಗೆ 2 ದಿನ ಪಾಠ 3ನೇ ದಿನ ಕಿರು ಪರೀಕ್ಷೆ ನಡೆಸಬೇಕು. ಖಣಾಜಜಟಣ ಅಂಡಿಟಜಡಿ ನಲ್ಲಿ ಲಭ್ಯವಿರುವ ಪ್ರಶ್ನೆಗಳ ಪೈಕಿ ಪ್ರಶ್ನೆಗಳ ಅಂಕಗಳ ಆಧಾರದಲ್ಲಿ ಪ್ರತ್ಯೇಕ ಬುಕ್ ಲೆಟ್ ಸಿದ್ದಪಡಿಸಿ ಎಲ್ಲಾ ಶಾಲೆಗಳಿಗೆ ವಿತರಿಸಬೇಕು. ಈ ಜವಬ್ದಾರಿಯನ್ನು ಡಯಟ್ ಪ್ರಾಂಶುಪಾಲರು ವಹಿಸಿಕೊಳ್ಳಬೇಕು.**

**ಅನುದಾನಿತ ಮತ್ತು ಖಾಸಗಿ ಶಾಲೆಗಳ ಫಲಿತಾಂಶ ಹೆಚ್ಚಿಸಲು ಕ್ರಿಯಾ ಯೋಜನೆ ಸಿದ್ದಪಡಿಸಿ: ಈ ಸಭೆಗೆ ಅನುಪಾಲನಾ ಸಭೆಯನ್ನು 15 ದಿನಗಳ ನಂತರ ಏರ್ಪಡಿಸಲಾಗುತ್ತಿದ್ದು, ಸದರಿ ಸಭೆಗೆ ಅನುದಾನಿತ ಮತ್ತು ಖಾಸಗಿ ಶಾಲೆಗಳ ಫಲಿತಾಂಶ ಹೆಚ್ಚಿಸುವ ಸಂಬಂಧ ಕ್ರಿಯಾ ಯೋಜನೆಯೊಂದಿಗೆ ಬರುವಂತೆ ನೋಡಲ್ ಅಧಿಕಾರಿಗಳು ಮತ್ತು ಡಿಡಿಪಿಐ ರವರಿಗೆ ತಿಳಿಸಿದರು.**

# ಶಬರಿಮಲೆ ಚಿನ್ನದ ಹಗರಣ: ಟಿಡಿಬಿ ಮಾಜಿ ಅಧಿಕಾರಿ ಬಂಧನ

**ನವದೆಹಲಿ:** ಶಬರಿಮಲೆ ಚಿನ್ನ ನಷ್ಟ ಪ್ರಕರಣಗಳ ತನಿಖೆ ನಡೆಸುತ್ತಿರುವ ಎಸ್ಐಟಿ ಬುಧವಾರ ಟಿಡಿಬಿಯ ಮಾಜಿ ಆಡಳಿತ ಅಧಿಕಾರಿ ಎಸ್. ಶ್ರೀಕುಮಾರ್ ಅವರನ್ನು ಬಂಧಿಸಲಾಗಿದೆ.

ಅವರ ವಿರುದ್ಧದ ಆರೋಪಗಳು ಸಾಬೀತಾಗಿವೆ ಎಂದು ಹೇಳಿದ್ದ ಕೇರಳ ಹೈಕೋರ್ಟ್, ಶ್ರೀಕುಮಾರ್ ಅವರ ನಿರೀಕ್ಷಣಾ ಜಾಮೀನು ಅರ್ಜಿಯನ್ನು ತಿರಸ್ಕರಿಸಿದ ಕೇವಲ ಎರಡು ವಾರಗಳ ನಂತರ ಅವರ ಬಂಧನವಾಗಿದೆ. ಶ್ರೀ ಕುಮಾರ್ ಜೊತೆಗೆ, ತಿರುವಾಂಕೂರು ದೇವಸ್ವಂ ಮಂಡಳಿಯ (ಟಿಡಿಬಿ) ಮಾಜಿ ಕಾರ್ಯದರ್ಶಿ ಎಸ್. ಜಯಶ್ರೀ ಅವರ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಸಹ ತಿರಸ್ಕರಿಸಲಾಗಿದೆ. ಇಬ್ಬರು ಆರೋಪಿಗಳಿಗೆ ಬಂಧನ ಪೂರ್ವ ಜಾಮೀನು ನೀಡಿದರೆ, ದೇವಾಲಯದಿಂದ ಚಿನ್ನ ಕಳೆದುಹೋದ ಸಂಪೂರ್ಣ ತನಿಖೆ ಕುಸಿಯುತ್ತದೆ ಮತ್ತು ಪರಿಣಾಮಕಾರಿ ತನಿಖೆ "ಅರ್ಥಹೀನವಾಗುತ್ತದೆ" ಎಂದು ನ್ಯಾಯಾಲಯ ಅರ್ಜಿ ತಿರಸ್ಕರಿಸುವಾಗ ಹೇಳಿತ್ತು.

ಶ್ರೀಕುಮಾರ್ ಮತ್ತು ಜಯಶ್ರೀ ಇಬ್ಬರೂ ಚಿನ್ನದ ಹೊದಿಕೆಯ ಬಗ್ಗೆ ಮಾಹಿತಿಯುಳ್ಳವರಾಗಿದ್ದರು.

# ನೂತನ ರೋಟರಿ ಮಾಂಡವ್ಯ ಪದಗ್ರಹಣ ವಿವಿಧ ಕ್ಷೇತ್ರದ ಸಾಧಕರಿಗೆ ಸನ್ಮಾನ



**ಮಂಡ್ಯ:** ನೂತನವಾಗಿ ಸ್ಥಾಪನೆಯಾದ ರೋಟರಿ ಮಾಂಡವ್ಯ ಪದಗ್ರಹಣ ಕಾರ್ಯಕ್ರಮವು ಮಂಡ್ಯ ನಗರದ ವಲಯದಲ್ಲಿರುವ ಲೆಮನ್ ಗ್ರಾಸ್ ಆವರಣದಲ್ಲಿ ಅರ್ಥಪೂರ್ಣವಾಗಿ ನೆರವೇರಿತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಎ.ಎನ್. ಪ್ರಕಾಶ್ ಗೌಡ (ಖಕಖ) ಮಾತನಾಡಿ, ಸಮಾಜದ ಅಭಿವೃದ್ಧಿಗೆ ಸರ್ಕಾರ ಮತ್ತು ಜನಸಾಮಾನ್ಯರ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸುವಲ್ಲಿ ಸೇವಾ ಸಂಸ್ಥೆಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಸಮಾಜದ ನಡುವೆ ಬಾಂಧವ್ಯದ ಕೊಂಡಿಯಾಗಿ ಕಾರ್ಯನಿರ್ವಹಿಸಿ ಸೇವೆಯ ಹೆಜ್ಜೆ ಇಡಬೇಕಾದರೆ ರೋಟರಿಯಂತಹ ಸಂಸ್ಥೆಗಳು ಮುಖ್ಯ ವೇದಿಕೆಯಾಗುತ್ತವೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ನೂತನ ಅಧ್ಯಕ್ಷರಾಗಿ ಅಶೋಕ್ ಡಿ.ಸಿ ಅವರು ಆಯ್ಕೆಯಾಗಿರುವುದು ಸಂತಸದ ವಿಷಯವೆಂದು ಹೇಳಿದ ಅವರು, ಅಶೋಕ್ ಅವರು ಬಾಲ್ಯದಿಂದಲೇ ರಾಷ್ಟ್ರೀಯ ಸೇವಾ ಯೋಜನೆ ಸೇರಿದಂತೆ ಹಲವು ಸಮಾಜಮುಖಿ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ಮನುಷ್ಯ ಹುಟ್ಟಿದ್ದು ಕೇವಲ ಹೆಸರಿಗಾಗಿ ಅಲ್ಲ; ಹುಟ್ಟು?ಸಾವುಗಳ ನಡುವಿನ ಬದುಕಿಗೆ ಅರ್ಥ ನೀಡುವ ಕಾರ್ಯಗಳೇ ಜೀವನದ ಸಾರ್ಥಕತೆ ಎಂದು ಅಭಿಪ್ರಾಯಪಟ್ಟರು.

ನಂತರ ಮಾತನಾಡಿದ ರೋಟರಿ ಜಿಲ್ಲಾ ರಾಜ್ಯಪಾಲರಾದ ಪ್ರೊಫೆಸರ್ ಡಾ. ಎಲಿಜಬೆತ್ ಚೆರಿಯನ್, ರೋಟರಿ ಒಂದು ಅಂತರಾಷ್ಟ್ರೀಯ ಸೇವಾ ಸಂಸ್ಥೆಯಾಗಿದ್ದು 120 ವರ್ಷಗಳ ಶ್ರೀಮಂತ ಇತಿಹಾಸ ಹೊಂದಿದೆ. ಈ ಮಹತ್ವದ ಸಂಸ್ಥೆಗೆ ನೂತನವಾಗಿ ರೋಟರಿ ಮಾಂಡವ್ಯ ಸೇರ್ಪಡೆಗೊಂಡಿರುವುದು ನಮಗೆಲ್ಲ ಹೆಮ್ಮೆಯ ವಿಷಯ. ಸಮಾಜಸೇವೆಯೇ ರೋಟರಿಯ ಅಸ್ತಿತ್ವ. ಮುಂದಿನ ದಿನಗಳಲ್ಲಿ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೆ ನಿರಂತರವಾಗಿ ಸೇವೆ ಸಲ್ಲಿಸುವ ಮೂಲಕ ಈ ಸಂಸ್ಥೆ ಉತ್ತಮ ಕಾರ್ಯಗಳನ್ನು ಮಾಡಲಿ ಎಂದು ಹಾರೈಸಿದರು.

ಈ ಸಂದರ್ಭದಲ್ಲಿ 2026ನೇ ಸಾಲಿನ ಕ್ಯಾಲೆಂಡರ್ ಹಾಗೂ ರೋಟರಿ ಧ್ವಜವನ್ನು ಬಿಡುಗಡೆಗೊಳಿಸಲಾಯಿತು.

ಕಾರ್ಯಕ್ರಮದ ಅಂಗವಾಗಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರನ್ನು ಗೌರವಿಸಲಾಯಿತು.

ಇದೇ ವೇಳೆ ಪ್ರತಿಭಾ ಪುರಸ್ಕಾರವನ್ನು ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಕೃಷ್ಣವೇಣಿ ಹಾಗೂ ಎಸ್ಎಸ್ಎಲ್ಸಿಯಲ್ಲಿ ಗ್ರಾಮೀಣ ಭಾಗದಿಂದ ಅತಿ ಹೆಚ್ಚು ಅಂಕ ಗಳಿಸಿದ ರಕ್ಷಿತಾ ಅವರಿಗೆ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಡಿಸ್ಟ್ರಿಕ್ಟ್ ಮೆಂಬರ್ ಚೆರ್ಮಾನ್ ಹಾಗೂ ಡಿಜಿಎನ್ ವಿನೋದ್ ಕುಮಾರ್,ಬಿ. ಎಸ್ ಮಾಜಿ ಜಿಲ್ಲಾ ಪಾಲಕರಾದ ರೋಟೇರಿಯನ್ ಶ್ರೀನಿವಾಸ್ ಮೂರ್ತಿ, ಜಿಲ್ಲಾ ಕಾರ್ಯದರ್ಶಿ ಹೊನ್ನೇಗೌಡ, ರಾಜೇಶ್ ತಿಪ್ಪೂರು, ಅಧ್ಯಕ್ಷರಾದ ಶ್ರೀನಿವಾಸು, ಕಾರ್ಯದರ್ಶಿಗಳಾದ ಮಂಜುನಾಥ್ ನಾಯ್ಡು, ನೂತನ ರೋಟರಿ ಮಾಂಡವ್ಯ ಅಧ್ಯಕ್ಷ ಅಶೋಕ್ ಡಿ.ಸಿ, ಕಾರ್ಯದರ್ಶಿ ಆದರ್ಶ ಎಚ್. ಆರ್, ನೂತನ ಪದಾಧಿಕಾರಿಗಳ ತಂಡ, ಸದಸ್ಯರು ಹಾಗೂ ಕುಟುಂಬ ವರ್ಗದವರು ಉಪಸ್ಥಿತರಿದ್ದರು.

# ರೈತರ ಬೆಳೆ ಸಮೀಕ್ಷೆಗೆ ಜಿಪಿಎಸ್ ಆಧಾರಿತ ಮೊಬೈಲ್ ತಂತ್ರಾಂಶ ಬಳಕೆ: ಚಲುವರಾಯಸ್ವಾಮಿ



**ಬೆಳಗಾವಿ:** ರೈತರ ಅನುಕೂಲಕ್ಕಾಗಿ ಜಮೀನುಗಳಲ್ಲಿ ಬೆಳೆದ ಬೆಳೆ ಸಮೀಕ್ಷೆಯನ್ನು ಕೈಗೊಳ್ಳಲು ಡಿಪಿಎಆರ್ ಇಲಾಖಾ ವತಿಯಿಂದ ಅಭಿವೃದ್ಧಿ ಪಡಿಸಿರುವ ಜಿ.ಪಿ.ಎಸ್ ಆಧಾರಿತ ಆ?ಯಂಡ್ರಾಯ್ಡ್ ಮೊಬೈಲ್ ತಂತ್ರಾಂಶವನ್ನು ಬಳಸಿ ರೈತರ ಬೆಳೆ ಸಮೀಕ್ಷೆ ನಡೆಸಲಾಗುತ್ತಿದೆ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿಯವರು ತಿಳಿಸಿದರು..

ತರೀಕೆರೆ ವಿಧಾನಸಭಾ ಕ್ಷೇತ್ರದ ಶಾಸಕ ಶ್ರೀನಿವಾಸ್ ಜಿ.ಹೆಚ್. ರವರ ಚುಕ್ಕೆ ಗುರುತಿನ ಪ್ರಶ್ನೆಗೆ ವಿಧಾನಸಭೆಯಲ್ಲಿಂದು ಉತ್ತರಿಸಿದ ಕೃಷಿ ಸಚಿವ ಎನ್.ಚಲುವರಾಯಸ್ವಾಮಿಯವರು, ರಾಜ್ಯದ ಎಲ್ಲಾ ಕಂದಾಯ ಗ್ರಾಮಗಳಲ್ಲಿ ಖಾಸಗಿ ಕೃಷಿ ಜಮೀನುಗಳಲ್ಲಿ ಬೆಳೆ ಸಮೀಕ್ಷೆಯನ್ನು ಕೈಗೊಳ್ಳಲಾಗುತ್ತಿದ್ದು ಸ್ವತಃ ರೈತರೇ " ಬೆಳೆ ಸಮೀಕ್ಷೆ ರೈತರ ಆಪ್" ನಲ್ಲಿ ಬೆಳೆ ಮಾಹಿತಿ ನಮೂದಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ಸಚಿವರು ತಿಳಿಸಿದರು..

2017 ನೇ ಸಾಲಿನಿಂದ ಸರ್ಕಾರಿ ಅಧಿಕಾರಿಗಳ ( ಕಂದಾಯ, ಕೃಷಿ , ತೋಟಗಾರಿಕೆ, ಹಾಗೂ ರೇಷ್ಮೆ) ಮೂಲಕ ಬೆಳೆ ಸಮೀಕ್ಷೆಯನ್ನು ಪ್ರಾರಂಭಿಸಲಾಗಿದ್ದು, 2018–19 ನೇ ಸಾಲಿನಿಂದ ಆಯಾ ಗ್ರಾಮಗಳಲ್ಲಿ ಲಭ್ಯವಿರುವ ಮಾಹಿತಿ ತಂತ್ರಜ್ಞಾನದ ಬಗ್ಗೆ ತಿಳುವಳಿಕೆ ಇರುವ ಯುವಕರನ್ನು (ಖಾಸಗಿ ನಿವಾಸಿಗಳು) ಬಳಸಿಕೊಂಡು ಖಾಸಗಿ ನಿವಾಸಿಗಳ ಆಪ್ ಮೂಲಕ ಸಮೀಕ್ಷೆ ಕೈಗೊಳ್ಳಲಾಗುತ್ತಿದೆ. ಕಾರ್ಯಕ್ರಮದ ಉದ್ದೇಶ ಜಿಪಿಎಸ್ ಆಧಾರಿತ ಮೊಬೈಲ್ ಅಪ್ಲಿಕೇಶನ್ ಬಳಸಿ ರೈತರ ಜಮೀನಿನ ಸರ್ವೆ ನಂಬರ್, ಉಪ ಸರ್ವೆ ನಂಬರ್ ವಾರು ಬೆಳೆ ಪ್ರದೇಶದ ನಿಖರ ಮಾಹಿತಿ ದಾಖಲಿಸಬಹುದು ಎಂದು ಸಚಿವರು ತಿಳಿಸಿದರು..

ಇನ್ನೂ 2020– 21 ನೇ ಸಾಲಿನಿಂದ ರೈತರೇ ಸ್ವತಃ ತಮ್ಮ ಜಮೀನಿನಲ್ಲಿ ಬೆಳದ ಬೆಳೆಯನ್ನು ರೈತರ ಆಪ್ ಮೂಲಕ ನಮೂದಿಸಲು ಅವಕಾಶ ಕಲ್ಪಿಸಿದ್ದು, 2024–25 ನೇ ಸಾಲಿನಲ್ಲಿ ರೈತರ ಬೆಳೆಯ ನೈಜ ಛಾಯಾಚಿತ್ರ ದಾಖಲಾತಿಯನ್ನು ಖಚಿತಪಡಿಸಿಕೊಳ್ಳಲು ಮೊಬೈಲ್ ಆಪ್ ನಲ್ಲಿ " ಖಿಟಣ ಚಿಟಿರಟಜ ಮತ್ತು "ಂಖ ಣಂರಂಟ" ವೈಶಿಷ್ಟ್ಯಗಳನ್ನು ಅಳವಡಿಸಲಾಗಿದೆ.

ಪ್ರಸ್ತುತ ರೈತರ ಮೊಬೈಲ್ ಆಪ್ ಹಾಗೂ ಖಾಸಗಿ ನಿವಾಸಿಗಳ ಆಪ್ ಮುಖಾಂತರ ಪೂರ್ವ ಮುಂಗಾರು, ಮುಂಗಾರು, ಹಿಂಗಾರು ಹಾಗೂ ಬೇಸಿಗೆ ಹಂಗಾಮುಗಳಲ್ಲಿ ಬೆಳೆ ಸಮೀಕ್ಷೆ ಕಾರ್ಯ ಕೈಗೊಳ್ಳಲಾಗುತ್ತಿದೆ ಎಂದು ಸಚಿವರು ಹೇಳಿದರು..

## ಜಿಲ್ಲಾ ಕುರುಬರ ಸಂಘದ ಆಡಳಿತ ಮಂಡಳಿಯ ಅಧಿಕಾರಾವಧಿ ಫೆಬ್ರವರಿ ತಿಂಗಳಿಗೆ ಮುಗಿಯಲಿದ್ದು, ಮುಂದಿನ ಅವಧಿಗೆ ಚುನಾವಣೆ ನಡೆಯಲಿ



**ಮಂಡ್ಯ:** ಜಿಲ್ಲಾ ಕುರುಬರ ಸಂಘದ ಆಡಳಿತ ಮಂಡಳಿಯ ಅಧಿಕಾರಾವಧಿ ಫೆಬ್ರವರಿ ತಿಂಗಳಿಗೆ ಮುಗಿಯಲಿದ್ದು, ಮುಂದಿನ ಅವಧಿಗೆ ಚುನಾವಣೆ ನಡೆಸಬೇಕು ಎಂದು ಸಂಘದ ಅಧ್ಯಕ್ಷ ಆಕಾಂಕ್ಷಿತ ಸದಸ್ಯ ಸಿ.ಟಿ.ಬೀರೇಶ್ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಿಸೆಂಬರ್ ತಿಂಗಳ 28ರಂದು ಸಂಘದ ಸರ್ವ ಸದಸ್ಯರ ಮಹಾಸಭೆಯ ಸಲುವಾಗಿ ಆಹ್ವಾನ ಹೊರಡಿಸಿರುವ ಸಂಘವು ಮುಂದಿನ ಅವಧಿಗೆ ಹಾಲಿ ಆಡಳಿತ ಮಂಡಳಿಯನ್ನೇ ಮುಂದುವರೆಸುವ ಸಂಬಂಧ ಚರ್ಚೆ ಮಾಡುವುದಾಗಿ ತಿಳಿಸಿದೆ ಎಂದರು.

ಹಾಲಿ ಆಡಳಿತ ಮಂಡಳಿ ಅಧಿಕಾರ ವಹಿಸಿದ್ದಾಗಿನಿಂದ ಸಂಘದ ಸದಸ್ಯತ್ವ ನೋಂದಣಿಗೆ ಅವಕಾಶ ನೀಡಲಾಗಿರಲಿಲ್ಲ. ಒತ್ತಾಯದ ಮೇರೆಗೆ ಮಂಡಳಿಯ ನಿರ್ದೇಶಕರಿಗೆ ಮಾತ್ರ ಸದಸ್ಯತ್ವದ ಅರ್ಜಿ ನೀಡಿ ನೋಂದಣಿಗೆ ಅವಕಾಶ ಮಾಡಿಕೊಡಲಾಯಿತು. ತೀವ್ರ ವಿರೋಧ ವ್ಯಕ್ತವಾದ ನಂತರ ಸ್ವತಂತ್ರವಾಗಿ ಸದಸ್ಯತ್ವ ನೋಂದಣಿ ಮಾಡಲಾಯಿತು ಎಂದು ಆರೋಪಿಸಿದರು.

ಸಹಕಾರ ತತ್ವ, ಸಂಘ ಸಂಸ್ಥೆಗಳ ನಿಯಮದಡಿ 5 ವರ್ಷಕ್ಕೊಮ್ಮೆ ಚುನಾವಣೆ ನಡೆಸಿ ಆಯ್ಕೆಯಾದ ಪ್ರತಿನಿಧಿಗಳ ಮೂಲಕ ಕಾರ್ಯಕಾರಿ ಮಂಡಳಿಯ ರಚನೆಯಾಗಬೇಕು. ಸರ್ವ ಸದಸ್ಯೆ ಮಹಾಸಭೆಯ ಆಹ್ವಾನದಲ್ಲಿ ಉಲ್ಲೇಖಿಸಲಾಗಿರುವ ಚರ್ಚೆ ವಿಷಯ ಅಪ್ರಸ್ತುತವಾಗಿದೆ. ಆದ್ದರಿಂದ ಸಂಘದ ಸದಸ್ಯರು ಸಭೆಯಲ್ಲಿ ಹಾಲಿ ಆಡಳಿತ ಮಂಡಳಿ ಮುಂದುವರೆಯಲು ಅವಕಾಶ ನೀಡದೇ ಚುನಾವಣೆಗೆ ಆಗ್ರಹಿಸುವಂತೆ ಮನವಿ ಮಾಡಿದರು. ಗೋಷ್ಠಿಯಲ್ಲಿ ಸದಸ್ಯರಾದ ಬಸವರಾಜು, ಎಂ.ಲೋಕೇಶ್ ಇದ್ದರು.

# ಡಿ.21–24 ರವರೆಗೂ ರಾಷ್ಟ್ರೀಯ ಪಲ್ಸ್ ಪೋಲಿಯೊ ಕಾರ್ಯಕ್ರಮ: ವಿಶ್ವನಾಥ್



**ಮಂಡ್ಯ:** ಜಿಲ್ಲೆಯಲ್ಲಿ ರಾಷ್ಟ್ರೀಯ ಪಲ್ಸ್ ಪೋಲಿಯೊ ಕಾರ್ಯಕ್ರಮವನ್ನು ಡಿಸೆಂಬರ್ 21 ರಿಂದ 24 ರವರೆಗೆ ಹಮ್ಮಿಕೊಳ್ಳಲಾಗಿದೆ ಪೋಲಿಯೊ ಗುರಿ ತಲುಪಿಸುವ ಸಂಬಂಧ ಇಲಾಖೆಯ ಅಧಿಕಾರಿಗಳು ಶ್ರಮಿಸಬೇಕು ಎಂದು ತಹಶೀಲ್ದಾರ್ ವಿಶ್ವನಾಥ್ ಬುಧವಾರ ಅಧಿಕಾರಿಗಳಿಗೆ ಸೂಚಿಸಿದರು.

ತಹಶೀಲ್ದಾರ್ ಕಚೇರಿಯ ಸಭಾಂಗಣದಲ್ಲಿ ಜರುಗಿದ ಪಲ್ಸ್ ಪೋಲಿಯೋ ಸಂಬಂಧ ನೆಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದ ಅವರು ಈ ಕಾರ್ಯಕ್ಕೆ ನಿಯೋಜನೆಗೊಂಡ ವೈದ್ಯರು,ಆರೋಗ್ಯ ಇಲಾಖೆ ಸಿಬ್ಬಂದಿಗಳು, ಅಂಗನವಾಡಿ ಆಶಾ ಕಾರ್ಯಕರ್ತೆಯರು ಕೆಲಸಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು ಎಂದು ಹೇಳಿದರು.

ಡಿಸೆಂಬರ್ 21 ರಂದು ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮದ ಉದ್ಘಾಟನಾ ಸಮಾರಂಭವನ್ನು ನಗರದ ಕಲ್ಲಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಲ್ಲಿ ರೆಡ್ ಕ್ರಾಸ್ ಸಂಸ್ಥೆಯ ಸಹಕಾರದೊಂದಿಗೆ ಹಮ್ಮಿಕೊಳ್ಳಲಾಗಿದೆ. 5 ವರ್ಷದೊಳಗಿನ ಪ್ರತಿ ಮಗುವಿಗೆ ತಪ್ಪದೆ ಪಲ್ಸ್ ಪೋಲಿಯೋ ಲಸಿಕೆ ಹಾಕಿಸಿ ಎಂದು ಕರೆ ನೀಡಿದರು.

ಡಿಸೆಂಬರ್ 21 ರಂದು ಜಿಲ್ಲೆಯಾದ್ಯಂತ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಸದರಿ ದಿನದಂದು ಬೆಳಗ್ಗೆ 8 ರಿಂದ ಸಂಜೆ 5 ಗಂಟೆಯವರೆಗೆ ಬೂತ್ ಮಟ್ಟದಲ್ಲಿ ಲಸಿಕೆ ನೀಡಲಾಗುತ್ತದೆ. ಡಿಸೆಂಬರ್ 22 ರಿಂದ ಡಿಸೆಂಬರ್ 24 ರವರೆಗೆ ಮನೆ ಮನೆಗೆ ಭೇಟಿ ನೀಡಿ ಲಸಿಕೆ ನೀಡುವ ಕಾರ್ಯವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಯಾವುದೇ ಮಗು ಲಸಿಕೆಯಿಂದ ಹೊರಗುಳಿಯ ಬಾರದು. ವಿಶೇಷವಾಗಿ ಗ್ರಾಮೀಣ ಪ್ರದೇಶದಲ್ಲಿ, ಹೊಲಗಳಲ್ಲಿ ವಾಸಿಸುತ್ತಿರುವ ಮಕ್ಕಳು, ಕೂಲಿ ಕೆಲಸಕ್ಕೆ ತೆರಳುವ ಕಾರ್ಮಿಕರ ಮಕ್ಕಳಿಗೂ ಗಮನಹರಿಸಿ ಪೋಲಿಯೋ ಲಸಿಕೆ ನೀಡಬೇಕು ಎಂದರು.

ಜಿಲ್ಲಾ ಆರ್ ಸಿ ಎಚ್ ಅಧಿಕಾರಿ ಡಾ.ಕೆ.ಪಿ.ಅಶ್ವಥ್ ಮಾತನಾಡಿ ಜಿಲ್ಲೆಯಲ್ಲಿ 1,16,724 ಐದು ವರ್ಷದೊಳಗಿನ ಮಕ್ಕಳು ಇದ್ದು, ಒಟ್ಟು 723 ಕೇಂದ್ರಗಳಲ್ಲಿ ಲಸಿಕೆ ಹಾಕಲಾಗುತ್ತದೆ. 1446 ತಂಡಗಳನ್ನು ರಚಿಸಲಾಗಿದ್ದು,

ಮೊಬೈಲ್ ತಂಡ ಸೇರಿದಂತೆ ಸಾರ್ವಜನಿಕ ಸ್ಥಳಗಳಲ್ಲಿ ಟ್ರಾನ್ಸಿಟ್ ಕೇಂದ್ರಗಳನ್ನು ಸ್ಥಾಪಿಸಲಾಗುತ್ತದೆ. 2,892 ಲಸಿಕಾ ಕಾರ್ಯಕರ್ತರನ್ನು ನಿಯೋಜನೆ ಮಾಡಲಾಗಿದೆ. ಒಟ್ಟು 147 ಮೇಲ್ವಿಚಾರಕರನ್ನು ಗುರುತಿಸಲಾಗಿದೆ. ಇವರುಗಳಿಗೆ ಈಗಾಗಲೇ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಿಂದ ತರಬೇತಿ ನೀಡಲಾಗಿದೆ ಎಂದು ಅವರು ಹೇಳಿದರು.

ಸಭೆಯಲ್ಲಿ ರೆಡ್ ಕ್ರಾಸ್ ಸಂಸ್ಥೆಯ ಸಭಾಧ್ಯಕ್ಷೆ ಡಾ. ಮೀರಾ ಶಿವಲಿಂಗಯ್ಯ, ತಾಲ್ಲೂಕು ಆರೋಗ್ಯ ಅಧಿಕಾರಿ ಡಾ.ಜವರೇಗೌಡ, ಸಿ ಡಿ ಪಿ ಓ ಕುಮಾರಸ್ವಾಮಿ, ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದರು

# ಮಂಡ್ಯ ಮಹಿಳೆಯರಿಗೆ 2123 ಕೋಟಿ ರು ಅನುದಾನ ಬಿಡುಗಡೆ: ಚಿಕ್ಕಲಿಂಗಯ್ಯ



**ಮಂಡ್ಯ:** ಮಂಡ್ಯ ಜಿಲ್ಲೆಯ 4,61,599 ಮಹಿಳೆಯರಿಗೆ ಗೃಹ ಲಕ್ಷ್ಮಿ ಯೋಜನೆಯಡಿ ಯೋಜನೆ ಪ್ರಾರಂಭಗೊಂಡಾಗಿನಿಂದಲು ಇಲ್ಲಿಯವರೆಗೆ 23 ಕಂತುಗಳ ಮೂಲಕ ರೂ.2123 ಕೋಟಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ ಎಂದು ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಯ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಚಿಕ್ಕಲಿಂಗಯ್ಯ ಹೇಳಿದರು.

ಜಿಲ್ಲಾ ಪಂಚಾಯತ್ ಮಿನಿ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಗೃಹಲಕ್ಷ್ಮಿ ಹಣ ಆಗಸ್ಟ್ ವರೆಗೆ ಪಾವತಿಸಲಾಗಿದ್ದು ಆಗಸ್ಟ್ ಮಾಹೆಯಲ್ಲಿ ಜಿಲ್ಲೆಯ 4,61,599 ಮಹಿಳೆಯರಿಗೆ ರೂ. 92.98 ಕೋಟಿ ಅನುದಾನವನ್ನು ನೀಡಲಾಗಿದೆ ಎಂದರು.

ಸೆಪ್ಟೆಂಬರ್ ತಿಂಗಳಿನಿಂದ ಬರಬೇಕಾದ ಹಣವನ್ನು ಶೀಘ್ರವೇ ಡಿ.ಬಿ.ಟಿ ಮೂಲಕ ನೀಡಲಾಗುವುದು ಅದರಲ್ಲಿ ಯಾವುದೇ ಗೊಂದಲ ಬೇಡ. ಐ.ಟಿ.ಜಿ.ಎಸ್.ಟಿ ಪಾವತಿದಾರರಿಗೆ ಗೃಹಲಕ್ಷ್ಮಿ ಹಣ ಬಂದಿರುವುದಿಲ್ಲ. ಗೃಹ ಲಕ್ಷ್ಮಿ ಹಣವನ್ನು ಶೀಘ್ರವಾಗಿ ಬಿಡುಗಡೆ ಮಾಡುವಂತೆ ಸಂಬಂಧ ಪಟ್ಟ ಅಧಿಕಾರಿಗಳು ಮನವಿ ಸಲ್ಲಿಸಿ ಎಂದು ಹೇಳಿದರು.

ಕೆಲ ಗೃಹ ಲಕ್ಷ್ಮಿ ಫಲಾನುಭವಿಗಳು ತಮ್ಮ ಬ್ಯಾಂಕ್ ಖಾತೆಯನ್ನು ಆಧಾರ್ ಸೀಡಿಂಗ್ ಮತ್ತು ಇ–ಕೆ.ವೈ.ಸಿ ಮಾಡಿಸದಿರುವ ಕಾರಣ ಹಣ ಬಂದಿರುವುದಿಲ್ಲ ಹಾಗಾಗಿ ಸಾರ್ವಜನಿಕರಿಗೆ ಆಧಾರ್ ಸೀಡಿಂಗ್ ಮತ್ತು ಇ–ಕೆ.ವೈ.ಸಿ ಮಾಡಿಸುವಂತೆ ಜಾಗೃತಿ ಮೂಡಿಸಿ ಎಂದು ತಿಳಿ ಹೇಳಿದರು.

ಅನ್ನ ಭಾಗ್ಯ ಯೋಜನೆಯಡಿ ಜಿಲ್ಲೆಯಲ್ಲಿ 4.47.166 ಫಲಾನುಭವಿಗಳು ಇದ್ದು ಜುಲೈ –2023 ರಿಂದ ಡಿಸೆಂಬರ್ 24 ರ ವರೆಗೆ ಅಕ್ಕಿಯ ಬದಲು 402.6 ಕೋಟಿ ಹಣವನ್ನು ಫಲಾನುಭವಿಗಳಿಗೆ ಪಾವತಿಸಲಾಗಿದೆ. ಫೆಬ್ರವರಿ 2025 ರ ಮಾಹೆಯಿಂದ ನಗದು ಬದಲು ಅಕ್ಕಿಯನ್ನು ನ್ಯಾಯಬೆಲೆ ಅಂಗಡಿಗಳ ಮೂಲಕ ವಿತರಣೆ ಮಾಡಲಾಗುತ್ತಿದೆ. ಜಿಲ್ಲೆಯ 8 ಸಾವಿರಕ್ಕೂ ಹೆಚ್ಚು ಐ.ಟಿ.ಜಿ.ಎಸ್.ಟಿ ಪಾವತಿದಾರನ್ನು ಬಿ.ಪಿ.ಎಲ್ ನಿಂದ ಎ.ಪಿ.ಎಲ್ ವರ್ಗಹಿಸಲಾಗಿದೆ ಎಂದು ತಿಳಿಸಿದರು.

ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಯ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ಪ್ರಶಾಂತ್ ಬಾಬು ಕೆ.ಸಿ ಅವರು ಮಾತನಾಡಿ ಜಿಲ್ಲೆಯಲ್ಲಿ ಶಕ್ತಿ ಯೋಜನೆಯಡಿ ಜೂನ್ 2023 ರಿಂದ ನವೆಂಬರ್ 2025 ರ ವರೆಗೂ 18.03.04.248 ಮಹಿಳೆಯರು ಉಚಿತ ಪ್ರಯಾಣ ಮಾಡಿದ್ದಾರೆ. ಇಲ್ಲಿಯವರೆಗೂ ಶಕ್ತಿ ಯೋಜನೆಯಡಿ ರೂ. 492.93 ಕೋಟಿ ವೆಚ್ಚವಾಗಿದೆ ಎಂದು ಹೇಳಿದರು.

ಬೆಂಗಳೂರು ಮೈಸೂರು ಬಸ್ ಗಾಗಿ ಅನೇಕ ಪ್ರಯಾಣಿಕರು ಸಂಚಾರ ಬೆಳೆಸುತ್ತಿದ್ದಾರೆ. ಆದ್ದರಿಂದ ಪ್ರಾಮಾಣಿಕರಿಗೆ ತೊಂದರೆ ಉಂಟಾಗದಂತೆ ಬಸ್ ವ್ಯವಸ್ಥೆ ಕಲ್ಪಿಸಿ ಹಾಗೂ ಜಿಲ್ಲೆಯ ಶಾಲಾ ಕಾಲೇಜು ಮಕ್ಕಳಿಗೆ ತೊಂದರೆಯಾಗದಂತೆ ಸಾರಿಗೆ ವ್ಯವಸ್ಥೆ ಕಲ್ಪಿಸಿ ಎಂದು ಕಿವಿಮಾತು ಹೇಳಿದರು.

ಗೃಹ ಜ್ಯೋತಿ ಯೋಜನೆ ಯಡಿ ಜಿಲ್ಲೆಯ ಜಿಲ್ಲೆಯಲ್ಲಿ 4.98.144 ಫಲಾನುಭವಿಗಳು ಇದ್ದು ಆಗಸ್ಟ್ 2023 ರಿಂದ ನವೆಂಬರ್ 2025 ರ ವರೆಗೂ ಜಿಲ್ಲೆಯಲ್ಲಿ 549179569 ಯೂನಿಟ್ ವಿದ್ಯುತ್ ಬಳಕೆ ಮಾಡಲಾಗಿದೆ ಗೃಹಜೋತಿ ಯೋಜನೆಯಡಿ ರೂ.491.19 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ ಎಂದರು.

ಯುವ ನಿಧಿ ಫಲಾನುಭವಿಗಳಿಗೆ ಕೆ.ಎಸ್. ಆರ್.ಟಿ.ಸಿ ಹಾಗೂ ಚೆಸ್ಕಾಂ ನಲ್ಲಿ ತಾಂತ್ರಿಕ ಕೆಲಸಗಳಿಗೆ ಬೇಕಾಗುವ ಅಭ್ಯರ್ಥಿಗಳನ್ನು ತಾಂತ್ರಿಕ ಶಿಕ್ಷಣ ಪಡೆದ ಯುವ ನಿಧಿ ಫಲಾನುಭವಿಗಳನ್ನು ಬಳಸಿಕೊಳ್ಳಿ. ವಿವಿಧ ಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಂಡು ಯುವ ನಿಧಿ ಫಲಾನುಭವಿಗಳಿಗೆ ಕೆಲಸ ಕೊಡಿಸುವ ಜವಾಬ್ದಾರಿ ತೆಗೆದುಕೊಳ್ಳಿ. ಹೆಚ್ಚಿನ ಫಲಾನುಭವಿಗಳಿಗೆ ಸೆಲ್ಫ್ ಡಿಕ್ಲರೇಷನ್ ಮಾಡುವ ವಿಧಾನ ತಿಳಿಯದೆ ಯುವ ನಿಧಿಯಿಂದ ವಂಚಿತರಾಗುತ್ತಿದ್ದಾರೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಯುವಕರಿಗೆ ಸೆಲ್ಫ್ ಡಿಕ್ಲರೇಷನ್ ಕುರಿತು ಅರಿವು ಮೂಡಿಸಿ ಎಂದು ಹೇಳಿದರು

ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಯ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ರಾಜೇಂದ್ರ ಎಸ್.ಹೆಚ್ ಅವರು ಮಾತನಾಡಿ *ಯುವ ನಿಧಿ ಯೋಜನೆ*ಯಡಿ ಜಿಲ್ಲೆಯಲ್ಲಿ 8296 ಫಲಾನುಭವಿಗಳು ನೊಂದಣಿಯಾಗಿದ್ದು ಸೆಪ್ಟೆಂಬರ್ 2025 ರ ವರೆಗೂ 19.29 ಕೋಟಿ ಅನುದಾನವನ್ನು ಜಿಲ್ಲೆಗೆ ಬಿಡುಗಡೆ ಮಾಡಲಾಗಿದೆ. ಅಕ್ಟೋಬರ್ ಮಾಹೆ ಹಣವನ್ನು ಶೀಘ್ರವೇ ಪಾವತಿಸಲಾಗುವುದು. ಯುವ ನಿಧಿ ಪ್ಲಸ್ ಯೋಜನೆಯಡಿಯಲ್ಲೂ ಜಿಲ್ಲೆಯ ಯುವಕರಿಗೆ ತರಬೇತಿ ನೀಡಲಾಗುತ್ತಿದೆ ಎಂದರು. ಸಭೆಯಲ್ಲಿ ಜಿಲ್ಲಾ ಪಂಚಾಯತ್ ಯೋಜನಾಧಿಕಾರಿ ಧನುಷ್, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಯ ಅನುಷ್ಠಾನ ಪ್ರಾಧಿಕಾರದ ಸದಸ್ಯರುಗಳಾದ ಅಜಯ್ ಕುಮಾರ್ ಬಿ.ಪಿ, ಎ.ಬಿ. ಕುಮಾರ್, ಶಂಕರೇಗೌಡ, ಬಸವರಾಜು, ಮಹಮದ್ ಅನ್ಸರ್ , ರಮೇಶ್ ಬಿ.ಎಂ. ಪಿ.ಮಾದೇಶ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ರಾಷ್ಟ್ರಕವಿ ಕುವೆಂಪುಗೆ ಭಾರತರತ್ನ ನೀಡಲು ಒತ್ತಾಯಿಸಿ ಪ್ರತಿಭಟನೆ




**ಮಂಡ್ಯ:** ಜ್ಞಾನಪೀಠ ಪುರಸ್ಕೃತ ರಾಷ್ಟ್ರಕವಿ ಕುವೆಂಪು ಅವರಿಗೆ ಮರಣೋತ್ತರವಾಗಿ ಭಾರತರತ್ನ ಪ್ರಶಸ್ತಿ ನೀಡಿ ಗೌರವಿಸಬೇಕೆಂದು ಆಗ್ರಹಿಸಿ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ವೇದಿಕೆ ಹಾಗೂ ವಿವಿಧ ಸಂಘ ಸಂಸ್ಥೆಗಳ ಮುಖಂಡರು ಮತ್ತು ಪ್ರತಿನಿಧಿಗಳು ಮಂಡ್ಯದ ರೈತ ಸಭಾಂಗಣದಲ್ಲಿ ಇರುವ ರಾಷ್ಟ್ರಕವಿ ಕುವೆಂಪುರವರ ಪ್ರತಿಮೆಯ ಮುಂದೆ ಪ್ರತಿಭಟನೆ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ವೇದಿಕೆಯ ಅಧ್ಯಕ್ಷ ಎಲ್.ಸಂದೇಶ್ ಅವರು, ಕುವೆಂಪು ಅವರ ಸಾಹಿತ್ಯ, ಚಿಂತನೆ ಮತ್ತು ಸಾಮಾಜಿಕ ಸಮಾನತೆಯ ಸಂದೇಶವು ಇಡೀ ರಾಷ್ಟ್ರಕ್ಕೆ ದಾರಿದೀಪವಾಗಿದ್ದು, ಅವರಿಗೆ ಭಾರತರತ್ನ ನೀಡುವುದು ಕನ್ನಡಿಗರ ಬಹುಕಾಲದ ಬೇಡಿಕೆಯಾಗಿದೆಯೆಂದು ಹೇಳಿದರು.

ಪ್ರತಿಭಟನೆಯಲ್ಲಿ ಪ್ರೊ. ಜಿ.ಟಿ. ವೀರಪ್ಪ, ಹೆಚ್.ಡಿ. ಜಯರಾಮ್, ಸತೀಶ್, ಸುದರ್ಶನ್, ಸಿದ್ದಶೆಟ್ಟಿ, ರಾಜಣ್ಣ, ಮೋಹನ್ ಸೇರಿದಂತೆ ಹಲವರು ಭಾಗವಹಿಸಿದ್ದರು.

# ಸಾವಿನ ಸನಿಹದಲ್ಲಿ.... ಸಹಾನುಭೂತಿಯ ಅರಿವು



ತಮ್ಮ ಬಳಿ ಕೆಲಸ ನಿರ್ವಹಿಸುತ್ತಿದ್ದ ಆಸ್ಪತ್ರೆಯ ಸಿಬ್ಬಂದಿಗೆ ಆ ವೈದ್ಯರು ಮಾತನಾಡುತ್ತಾ ಮರಣಾವಸ್ಥೆಯಲ್ಲಿ ಇರುವ ರೋಗಿಗಳಿಗೆ ಶಾಂತವಾಗಿ ಹಾಗೂ ಧೈರ್ಯದಿಂದ ಪರಿಸ್ಥಿತಿಯನ್ನು ಎದುರಿಸಲು ನೀವು ಸಹಾಯ ಮಾಡಬೇಕು ಎಂದು ಹೇಳಿದರು. ಆ ಹೆಣ್ಣು ಮಗಳ ಮೇಲೆ ವೈದ್ಯರ ಮಾತುಗಳು ಬಹುದೊಡ್ಡ ಪರಿಣಾಮವನ್ನು ಬೀರಿ ಆಕೆ ಅದನ್ನೇ ತನ್ನ ಬದುಕಿನ ಧ್ಯೇಯವಾಗಿಸಿಕೊಂಡು ರೋಗಿಗಳೊಂದಿಗೆ ಅತ್ಯುತ್ತಮ ಒಡನಾಟವನ್ನು ಇಟ್ಟುಕೊಂಡು ಅಂತಿಮವಾಗಿ ಸಂಗ್ರಹಿಸಿಕೊಟ್ಟ ಸತ್ಯ ವೈದ್ಯಕೀಯ ಲೋಕದಲ್ಲಿ ಮಾತ್ರವಲ್ಲದೇ ಬಹಳಷ್ಟು ಜನರ ಬದುಕನ್ನು ಬದಲಾಯಿಸಿತು ಎಂದರೆ ತಪ್ಪಿಲ್ಲ.

ಅದು 1960ರ ಸಮಯ. ಪ್ರತಿಯೊಂದು ಆಸ್ಪತ್ರೆಯಲ್ಲಿಯೂ ಮರಣ ಕಾಲ ಸನ್ನಿಹಿತವಾಗಿರುವ ರೋಗಿಗಳ ಕುರಿತು ಅಲಿಖಿತವಾದ ಒಂದು ನಿಬಂಧನೆಯಿತು. ಅಂತಹ ರೋಗಿಗಳಿಗೆ ಅವರ ತಾವು ಸನ್ನಿಹಿತವಾಗಿದೆ ಎಂಬುದನ್ನು ತಿಳಿಸುವಂತಿಲ್ಲ. ಅವರು

ಕೋಪ, ಭಯ,ಅಸಹನೆಗಳಿಗೆ ಈಡಾಗದಂತೆ ನೋಡಿಕೊಳ್ಳಬೇಕು. ಅವರಿಗೆ ಕಿರಿಕಿರಿಯನ್ನು ಉಂಟು ಮಾಡುವ ವೈದ್ಯಕೀಯ ಉಪಕರಣಗಳನ್ನು ಕೂಡ ಅವರಿಂದ ದೂರವಿಡಬೇಕು ಎಂಬುದು ವೈದ್ಯರ ಸಲಹೆಯಾಗಿತ್ತು.

ಪ್ರತಿದಿನ ಮುಂಜಾನೆ ಮತ್ತು ಮಧ್ಯಾಹ್ನ ಎರಡು ಬಾರಿ ವೈದ್ಯರು ಎಲ್ಲ ರೋಗಿಗಳನ್ನು ಪರಿಶೀಲಿಸಿದರೆ ನರ್ಸಗಳು ಅವರಿಗಾದ ಗಾಯವನ್ನು ಸ್ವಚ್ಛಗೊಳಿಸಿ ಮುಲಾಮು ಹಚ್ಚಿ ಗಾಯದ ಪಟ್ಟಿಯನ್ನು ಹಾಕುವ, ಊಟದ ಹಾಗೂ ಔಷಧೋಪಚಾರದ ಉಸ್ತುವಾರಿಯನ್ನು ವಹಿಸುತ್ತಿದ್ದರು. ರೋಗಿಗಳನ್ನು ಒಬ್ಬಂಟಿಯಾಗಿ ಕೋಣೆಯಲ್ಲಿ ಇರಿಸಲಾಗುತ್ತಿತ್ತು ಹಾಗೂ ಅವರ ಸಂಬಂಧಿಗಳು ಹೊರ ಆವರಣದಲ್ಲಿ ಅವರ ಆಗುಹೋಗುಗಳ ಕುರಿತು ಅರಿತುಕೊಳ್ಳಲು ಓಡಾಡುತ್ತಿದ್ದರು.

ಅಮೆರಿಕದ ಆಸ್ಪತ್ರೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಎಲಿಜಬೆತ್ ಎಂಬ ಸ್ವಿಸ್ ದೇಶದ ಸೈಕಿಯಾಟ್ರಿಸ್ಟ್ ಆಸ್ಪತ್ರೆಯಲ್ಲಿ ಇಂತಹ ರೋಗಿಗಳೊಂದಿಗೆ ಒಡನಾಡುತ್ತಿದ್ದಳು. ಆ ಸಮಯದಲ್ಲಿ ಆಕೆಗೆ ಪ್ರತಿಯೊಂದು ವೈದ್ಯಕೀಯ ಚಿಕಿತ್ಸೆಗೂ ತನ್ನದೇ ಆದ ಒಂದು ಮಿತಿ ಇರುತ್ತದೆ ಆ ಮಿತಿಯನ್ನು ಮೀರಿದ ನಂತರ ರೋಗಿಯು ಬದುಕುಳಿಯಲು ಸಾಧ್ಯವಿಲ್ಲ ಎಂದು ಅರಿವಾದಾಗ ರೋಗಿಯ ಕುರಿತು ಕಾಳಜಿ ವಹಿಸುವುದನ್ನು ನಿಲ್ಲಿಸುತ್ತಾರೆ.

ಆದರೆ ಈ ಸಮಯದಲ್ಲಿಯೇ ರೋಗಿಗೆ ವೈದ್ಯರ ಕಾಳಜಿಯ, ತನ್ನವರ ಮಾನವೀಯ ಸಂಬಂಧಗಳ ಒಡನಾಟದ ಅವಶ್ಯಕತೆ ಹೆಚ್ಚಾಗಿ ಇರುತ್ತದೆ ಎಂಬುದು ಅರಿವಿಗೆ ಬಂದಿತು...ಆದ್ದರಿಂದ ಆ ಸಮಯದಲ್ಲಿ ಆಕೆ ರೋಗಿಗಳ ಶುಶ್ರೂಷೆ ಮಾಡಲು ಹೋಗಲಿಲ್ಲ ಬದಲಾಗಿ ಅವರ ಬಳಿ ಕುಳಿತು ಮಾತುಕತೆಗೆ ಇಳಿದಳು. ಅತ್ಯಂತ ಸರಳವಾದ, ನೈಜವಾದ ಮಾನವೀಯ ತಂತುಗಳನ್ನು ಮೀಟುವಂತಹ ಇಂತಹ ಮಾತುಕತೆಗಳ ಮೂಲಕ ಆಕೆ ಆ ಸಮಯದಲ್ಲಿ ಅವರು ನಿಜವಾಗಿಯೂ ಅನುಭವಿಸುತ್ತಿರುವ ನೋವು ಯಾವುದು? ಅವರು ಹೇಗೆ ಬದುಕಬೇಕೆಂದು ಇಚ್ಛಿಸಿದರೂ ಅವರ ಬದುಕು ಅವರ ನಿರ್ಧಾರದಿಂದಾಗಿ ತಿರುವನ್ನು ತೆಗೆದುಕೊಂಡಿತು, ಯಾವ ತಿರುವಿನಲ್ಲಿ ಬದಲಾಯಿತು ಎಂಬುದನ್ನು ಅರಿಯಲು ಪ್ರಯತ್ನಿಸಿದಳು. ಅಂತಿಮವಾಗಿ ಬದುಕಿನ ಕುರಿತು ಅವರ ಗ್ರಹಿಕೆಗಳನ್ನು ಆಕೆ ಸಂಗ್ರಹಿಸಲು ಪ್ರಯತ್ನಿಸಿದಳು. ಆಕೆ ಅವರ ಮನದಾಳದ ಮಾತುಗಳನ್ನು ಕೇಳುತ್ತ ಅವುಗಳನ್ನು ಮತ್ತೊಮ್ಮೆ ದಾಖಲಿಸುತ್ತಲೇ ಹೋದಳು. ವೈದ್ಯಕೀಯ ಜಗತ್ತು ಸಾವಿನ ಕುರಿತಾಗಿ ಇಟ್ಟುಕೊಂಡಿದ್ದ ಎಲ್ಲ ಊಹೆಗಳು ತಪ್ಪು ಎನ್ನಿಸುವಂತಹ, ಬೆಕ್ಕಸ ಬೆರಗಾಗುವಂತಹ ವರದಿ ಆಕೆಯ ಬಳಿ ಇತ್ತು.

ತಮ್ಮ ಬದುಕಿನ ಕೋಪದ ಕ್ಷಣಗಳು ನಿಜಕ್ಕೂ ಅವರಿಗೆ ಕಷ್ಟದಾಯಕವಾಗಿರಲಿಲ್ಲ. ಜನರಿಂದ ಅವರು ನಿರಾಕರಿಸಲ್ಪಟ್ಟಾಗ, ಅವರು ಕೈಲಾಗದವರು ಎಂದು ತೋರಿದರೂ ನಿಜವಾಗಿ ಅವರು ತಮ್ಮ



ಬಲಹೀನತೆಯಿಂದ ರಕ್ಷಿಸಲ್ಪಡುತ್ತಿದ್ದರು. ಕೆಲ ಸಂದರ್ಭದಲ್ಲಿ ಬದುಕಿನಲ್ಲಿ, ದೇವರಲ್ಲಿ ಅವರು ನಂಬಿಕೆಯನ್ನು ಕಳೆದುಕೊಂಡರೂ ಕೂಡ ಸಾವಿನಲ್ಲಿ ಅವರು ನಂಬಿಕೊಂಡು ಬಂದ ಮೌಲ್ಯಗಳು ಅವರನ್ನು ರಕ್ಷಿಸುತ್ತಿದ್ದವು.

ಸಾವು ಸನ್ನಿಹಿತವಾದ ಸಮಯದಲ್ಲಿ ರೋಗಿಗಳು ತಮ್ಮ ಭಾವನಾತ್ಮಕ ನಿಲುವುಗಳಿಗೆ ಬದ್ಧರಾಗಿ ಇದ್ದುಕೊಂಡು ಬದಲಾವಣೆಗಳನ್ನು ಸಹಜವಾಗಿ ಸ್ವೀಕರಿಸುತ್ತಾರೆ. ತನ್ನ ಮಕ್ಕಳು, ಸಂಬಂಧಿಕರು, ಸ್ನೇಹಿತರು ತಮಗೆ ಕಾಳಜಿ ಮಾಡುವುದನ್ನು ಅವರು ಪ್ರೀತಿಯಿಂದ ಒಪ್ಪಿಕೊಳ್ಳುತ್ತಾರೆ. 1969 ರಲ್ಲಿ ಎಲಿಜಬೆತ್ ತನ್ನೆಲ್ಲ ಅನುಭವಗಳ ಮೊತ್ತವನ್ನು ಲೇಖನಗಳ ರೂಪದಲ್ಲಿ ಬರೆದು ಡೆತ್ ಅಂಡ್ ಡೈಯಿಂಗ್ ಎಂಬ ಪುಸ್ತಕವನ್ನು ಪ್ರಕಟಿಸಿದಳು. ಇದುವೇ ಮುಂದೆ ಪ್ರಸಿದ್ಧ ಕೃತಿಯಾಗಿ 'ಫೈವ್ ಸ್ಟೇಜಸ್ ಆಫ್ ಗ್ರೀಫ್' ಎಂದು ಹೆಸರಾಯಿತು. ನಿರಾಕರಣೆ, ಸಿಟ್ಟು, ಚೌಕಾಶಿ, ದುಃಖ ಮತ್ತು ಪರಿಸ್ಥಿತಿಯನ್ನು ಒಪ್ಪಿಕೊಳ್ಳುವ ದುಃಖದ ಈ ಐದು ಬದುಕಿನ ಹಂತಗಳ ಕುರಿತ ಈ ಕೃತಿ ನಮ್ಮ ಬದುಕಿನ ಕನ್ನಡಿಯಾಗಿದೆ.



ಕಡ್ಡಾಯವಾಗಿ ಎಲ್ಲರೂ ಬದುಕಿನ ಈ ಹಂತಗಳನ್ನು ಇದೇ ಕ್ರಮದಲ್ಲಿ ಹಾಯ್ದು ಹೋಗುತ್ತಾರೆ ಎಂದಲ್ಲ... ಆದರೆ ನಮ್ಮ ಭಾವನೆಗಳ ಅರಿವನ್ನು ಹೊಂದಲು ಇದು ನಕ್ಷೆಯಾಗಿದೆ. ಔಷಧೀಯ ಚಿಕಿತ್ಸೆ ಆತನ ದೈಹಿಕ ತೊಂದರೆಗಳನ್ನು ಶಮನಗೊಳಿಸಿದರೆ ತನ್ನ ಬದುಕಿನ ಅಂತಿಮ ದಿನಗಳಲ್ಲಿ ಮಾನಸಿಕವಾಗಿ ಆತ ಹೊರ ಹಾಕಿದ ವಿಷಯಗಳು ಆತನನ್ನು ಸಾಮಾನ್ಯ ಮಾನವೀಯ ಲಕ್ಷಣಗಳನ್ನು ಅರಿಯುವ ಮತ್ತು ಬೆಂಬಲಿಸುವ ನಿಟ್ಟಿನಲ್ಲಿ ಪ್ರಾಮುಖ್ಯತೆಯನ್ನು ವಹಿಸಿದವು.

ಬಹುತೇಕ ವೈದ್ಯಕೀಯ ವೃತ್ತಿನಿರತರು ಇದರಿಂದ ಕ್ರೋಧಗೊಂಡರು. ಎಲಿಜಬೆತಳನ್ನು ಸಾವಿಗೆ ಸಮೀಪವಾಗಿರುವ ವ್ಯಕ್ತಿಗಳನ್ನು ಮಾನವೀಯವಾಗಿ ನೋಡದೆ ವಸ್ತುಗಳಂತೆ ಪರಿಗಣಿಸಿ ಅವರ ಕುರಿತು ಸಂಶೋಧನೆ ಮಾಡಿದ್ದು ಅವೈಜ್ಞಾನಿಕ ಎಂದು ಹೀಯಾಳಿಸಿದರು. ಆಕೆಯ ಸಹಾನುಭೂತಿಯನ್ನು ಆಕೆಯ ವೃತ್ತಿಗೆ ವಿರೋಧವಾದ ಕೃತ್ಯ ಎಂದು ನಿಂದಿಸಿದರು. ಮತ್ತೆ ಕೆಲವರು ಸಾವಿನ ಕುರಿತು ರೋಗಿಗಳೊಂದಿಗೆ ಮುಕ್ತವಾಗಿ ಮಾತನಾಡುವುದು ತಪ್ಪು, ಇದು ಅವರ ಭರವಸೆಯನ್ನು ಕಳೆಯುತ್ತದೆ ಎಂದು ವಾದಿಸಿದರು. ಆಸ್ಪತ್ರೆಯ ಆಡಳಿತ ವರ್ಗವು ಆಕೆಯ ಈ ಸಂಶೋಧನಾತ್ಮಕ ಲೇಖನಗಳು ರೋಗಿಗಳ ಅತ್ಯುತ್ತಮ ವೈದ್ಯಕೀಯ ಕಾಳಜಿಯನ್ನು ತೆಗೆದುಕೊಳ್ಳುವಲ್ಲಿ ಹಿನ್ನಡೆಯನ್ನು ಹೊಂದುತ್ತವೆ ಎಂದು ಹಿಂಜರಿದರು.

ಒಬ್ಬ ಹೆಣ್ಣುಮಗಳು ಪುರುಷಸ್ವಾಮ್ಯದ ವೈದ್ಯಕೀಯ ಲೋಕದಲ್ಲಿ ತನ್ನದೇ ಆದ ನಿರ್ಣಯಗಳನ್ನು ಮಂಡಿಸಿದ್ದು ಅವರಿಗೆ ದಿಗಿಲನ್ನು ಉಂಟು ಮಾಡಿದ ಪರಿಣಾಮ ಅವರು ಆಕೆಯನ್ನು ಇನ್ನಿಲ್ಲದಂತೆ ನಿಂದಿಸಿ ಆಕೆಯನ್ನು ಧೃತಿಗೆಡಿಸಲು ಪ್ರಯತ್ನಿಸಿದರು... ಆದರೆ ಎಲಿಜಬೆತಳ ಎಲ್ಲ ಸಂಶೋಧನಾತ್ಮಕ ವರದಿಗಳು ವಸ್ತುನಿಷ್ಠವಾಗಿದ್ದು ಅವು ರೋಗಿಯ ವಯಸ್ಸು,ಚಿಕಿತ್ಸೆ, ಸಂಸ್ಕೃತಿ ಹಾಗೂ ಅವರು ಅನುಭವಿಸಿದ ಪರಿಸ್ಥಿತಿಗಳ ಮೇಲೆ ನಿರ್ಭರವಾಗಿದ್ದವು.

ವೈದ್ಯಕೀಯ ಲೋಕ ಯಾವಾಗಲೂ ನಿರ್ವಹಿಸುತ್ತಾ ಬಂದಿದ್ದ ರೋಗಿಗಳ ಮನೋ ದೈಹಿಕ ಪರಿಸ್ಥಿತಿಗಳ ಕುರಿತು ಈ ಬಾರಿ ವೈದ್ಯರು ಮಾತನಾಡಲಿಲ್ಲ.. ಬದಲಾಗಿ ರೋಗಿಗಳು ತಮ್ಮ ಪರವಾಗಿ ಜಗತ್ತಿನೊಂದಿಗೆ ಮಾತನಾಡಿದರು. ಸಾಯುತ್ತಿರುವ ಜನರು ಶಿಕ್ಷಕರಾಗಿ ಅವರ ಮಾತುಗಳು ದತ್ತಾಂಶಗಳಾಗಿ ದಾಖಲಾಗಿ ಆಕೆಯ ಸಂಶೋಧನೆಗಳಲ್ಲಿ ಸತ್ಯವಿದೆ ಎಂದು ಸಾರಿದವು. ನಿಧಾನವಾಗಿ ಪ್ರತಿರೋಧ ಕಡಿಮೆಯಾಯಿತು.

ಆಸ್ಪತ್ರೆಯಲ್ಲಿ ಕಳೆಯುವಾಗ ರೋಗಿಯ ಅಂತಿಮ ದಿನಗಳು ಜೀವನದ ಕೊನೆಯ ಬದಲಾಗಿ ಅಲ್ಲಿಯೂ ಕೂಡ ನವಿರಾದ ಹಾಸ್ಯ, ಸಂಭಾಷಣೆ, ಬದುಕಿನ ಹಿನ್ನೋಟ ಹಾಗೂ ಸಾವಿನ ಕುರಿತಾದ ವಿಷಯಗಳನ್ನು ಮಾತನಾಡುವುದು ಉಸಿರಾಟದಷ್ಟೇ ಸಹಜ ಎಂಬುದರ ಅರಿವನ್ನು ಆಕೆಯ ವರದಿಗಳು ಮೂಡಿಸಿತು. ಪರಿಣಾಮವಾಗಿ ರೋಗಿಗಳ ಸಂಬಂಧಿಕರು ರೋಗಿಯ ಪರಿಸ್ಥಿತಿಯ ಕುರಿತು ಅರಿಯುವ ಮತ್ತು ಮುಕ್ತವಾಗಿ ಪ್ರಶ್ನಿಸುವ ಅವಕಾಶವನ್ನು ಪಡೆದರು. ಉಸಿರಾಟದ ಯಂತ್ರವನ್ನು ಬಳಸಿ ಹೆಚ್ಚಿನ ವೈದ್ಯಕೀಯ ಚಿಕಿತ್ಸೆಯನ್ನು ನೀಡುವ ಮೂಲಕ ರೋಗಿಯ ಆಯುಷ್ಯವನ್ನು ಹೆಚ್ಚಿಸುವ ವೈದ್ಯಕೀಯ ಲೋಕದ ಹರಸಾಹಸವನ್ನು ಯಶಸ್ಸು ಎಂದು ಭಾವಿಸುವ ಬದಲಾಗಿ ರೋಗಿಗಳನ್ನು ತಮ್ಮ ಪ್ರೀತಿಪಾತ್ರರಿಂದ ದೂರ ಇಡುವ ಘನತೆಯಿಂದ ಸಾವನ್ನು ಸ್ವೀಕರಿಸುವ ಪರಿಪಾಠ ಆರಂಭವಾಯಿತು.

ಎಲಿಜಬೆತ್ ಕಲಿಸಿದ ಪ್ರಕಾರ ಘನತೆಯು ನಾಡಿಮಿಡಿತದಷ್ಟೇ ಮುಖ್ಯ. ಕೆಲವೊಮ್ಮೆ ಅತ್ಯಂತ ಸಹಾನುಭೂತಿಯ ವೈದ್ಯಕೀಯ ಆಯ್ಕೆ ಎಂದರೆ ಮಿತಿಗಳನ್ನು ಒಪ್ಪಿಕೊಳ್ಳುವುದು ಮತ್ತು ಅದನ್ನು ವಿಸ್ತರಿಸುವ ಹತಾಶ ಪ್ರಯತ್ನಗಳಿಗಿಂತ ಬಾಕಿ ಉಳಿದ ಜೀವನದ ಗುಣಮಟ್ಟದ ಮೇಲೆ ಕೇಂದ್ರೀಕರಿಸಬೇಕು.

ಸಾಯುತ್ತಿರುವ ರೋಗಿಗಳು ಸೌಕರ್ಯ, ಸಂಪರ್ಕ, ಸ್ವಾಯತ್ತತೆ ಮತ್ತು ಘನತೆಗೆ ಅರ್ಹರು ಎಂದು ಆಕೆ ಪ್ರತಿಪಾದಿಸಿದಳು.ಜೀವನದ ಅಂತ್ಯದ ಆರೈಕೆ ಕುರಿತು ವೃತ್ತಿಪರರಿಗೆ ತರಬೇತಿ ಕಾರ್ಯಕ್ರಮಗಳಲ್ಲಿ ಆಕೆ ಹೇಳಿದ ವಿಷಯಗಳು ಬಳಸಲ್ಪಟ್ಟವು.

ಅವರು ಸಾವನ್ನು ವೈಭವೀಕರಿಸದೆ ಅದನ್ನು ಭಯ ಮುಕ್ತಗೊಳಿಸಿದರು. ದುಃಖಕ್ಕೆ ಶಬ್ದವನ್ನು ನೀಡಿ ಅವರ ಕುಟುಂಬಗಳಿಗೆ ತಮ್ಮ ಮನಸ್ಸಿನ ದುಃಖ ಭಯ ನೋವು ನಿರಾಸೆಗಳನ್ನು ಮುಕ್ತವಾಗಿ ಹೇಳಿಕೊಳ್ಳಲು ಅವಕಾಶ ಮಾಡಿಕೊಟ್ಟರು.

ಎಲಿಜೆಬಲ್ ಕುಗ್ಲರ ಆಗಸ್ಟ್ 24 2008 ನೇ ವಯಸ್ಸಿನಲ್ಲಿ ನಿಧನರಾದರು. ಕಾಕತಾಳೀಯ ಎಂಬಂತೆ ಪಾರ್ಶ್ವ ವಾಯುವಿಗೆ ತುತ್ತಾದ ಅವರು ಕಷ್ಟಕರ ಅಂತ್ಯಕ್ಕೆ ಈಡಾದರು. ಆದರೆ ಆಕೆ ರೋಗಿಗಳ ಅಂತಿಮ ದಿನಗಳಲ್ಲಿ ಹಾಕಿಕೊಟ್ಟ ಪರಂಪರೆ ಇದೀಗ ಪ್ರತಿಯೊಂದು ಆಸ್ಪತ್ರೆಯಲ್ಲಿ ಗೌರವಿಸಲ್ಪಡುತ್ತಿದ್ದು ರೋಗಿಯು ಅನಾರೋಗ್ಯದಿಂದ ಗುಣವಾಗದೆ ಇದ್ದ ಪಕ್ಷದಲ್ಲಿ ಅಂತಿಮ ದಿನಗಳನ್ನು ಎಣಿಸುವಾಗ ಅವರ ಸಾವಿನ ಮುನ್ನರಿವಿನ ಕುರಿತು ಪ್ರಾಮಾಣಿಕ ಸಂಭಾಷಣೆಗಳನ್ನು ನಡೆಸುವ ವೈದ್ಯರ ತಂಡಗಳು ನಮ್ಮಲ್ಲಿದ್ದು ರೋಗಿಗಳಿಗೆ ಹಾಗೂ ಅವರ ಸಂಬಂಧಿಕರಿಗೆ ಮುಕ್ತವಾಗಿ ದುಃಖಿಸಲು ಅವಕಾಶ ನೀಡಲಾಗಿದ್ದು ಸಾವಿನ ಸತ್ಯವನ್ನು ಅರಿಯಲು ದುಃಖ ಮತ್ತು ಕೋಪಗಳು ಅಡೆತಡೆಗಳಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳುವ ಮನಸ್ಥಿತಿ ಇಂದಿನ ವೈದ್ಯಕೀಯ ಲೋಕಕ್ಕೆ ಇದೆ.

ತಮ್ಮ ಫೈವ್ ಸ್ಟೇಜ್ಸ್ ಆಫ್ ಗ್ರೀಫ್ ಅನ್ನು ಅತಿಯಾಗಿ ಸರಣಿಕರಿಸುವ ತಪ್ಪಾಗಿ ಅನ್ವಯಿಸುವ ಹಾಗೂ ಕಟ್ಟುನಿಟ್ಟಾಗಿ ಪರಿಶೀಲಿಸುವ ಅವಶ್ಯಕತೆ ಇಲ್ಲ ಏಕೆಂದರೆ ಪ್ರತಿಯೊಬ್ಬರ ದುಃಖವು ವೈಯಕ್ತಿಕವಾಗಿದ್ದು ಅದನ್ನು ಏಕತ್ರಗೊಳಿಸುವುದು ಬೇಡ ಎಂದು ಆಕೆ ಹೇಳಿದರು

ಅಂತಿಮವಾಗಿ ನಾವೆಲ್ಲರೂ ಗಳಿಸಲು ಬಯಸುವುದು, ಕೇಳುವುದು ಮತ್ತು ನೋಡುವುದು ಕೇವಲ ಔಷಧಿ ಚಿಕಿತ್ಸೆಯಲ್ಲ ಮಾನವೀಯತೆಯನ್ನು ಎಂಬುದನ್ನು ಎಲಿಜಬೆತ್ ಳ ಸಂಶೋಧನೆಗಳು ನಮಗೆ ಕಲಿಸಿಕೊಟ್ಟವು. ಅದಲ್ಲವೇ ನಿಜವಾದ ಔಷಧಿ. ಏನಂತೀರಾ ಸ್ನೇಹಿತರೆ??



ವೀಣಾ ಹೇಮಂತ್ ಗೌಡ ಪಾಟೀಲ್
ಮುಂಡರಗಿ ಗದಗ್

# ಮೈಸೂರು ಡಬ್ಬಾವಾಲರು ಮನೆ ಊಟವನ್ನು ಕಾರ್ಮಿಕರಿಗೆ ತಲುಪಿಸಿದ ಕಾಯಕ ಯೋಗಿಗಳು

ಮುಂಬೈ ಡಬ್ಬಾವಾಲರ ಹೆಸರು ಜಗತ್ತಿನಾದ್ಯಂತ ಪ್ರಸಿದ್ದಿಯಾಗಿದೆ . ಇದರ ಬಗ್ಗೆ ದೇಶ ವಿದೇಶಗಳಲ್ಲಿ ಅಧ್ಯಯನಗಳಾಗಿವೆ . ಪ್ರತಿದಿನ 200,000 ಕ್ಕೂ ಹೆಚ್ಚು ಮನೆಯಿಂದ ಊಟಗಳನ್ನು ಬಹುತೇಕ ಪರಿಪೂರ್ಣ ನಿಖರತೆಯೊಂದಿಗೆ (6 ಮಿಲಿಯನ್ ದೋಷಗಳಲ್ಲಿ 1) ಡಬ್ಬವಾಲಗಳು ಸಾಗಿಸುತ್ತಾರೆ . ಇವರ ಈ ಕಾರ್ಯ ಅವರ ಅತ್ಯುತ್ತಮ ಕಾರ್ಯಾಚರಣೆ , ನಿರ್ವಹಣೆ, ಪೂರೈಕೆ ಸರಬರಾಜು ಸರಪಳಿ, ನಾವೀನ್ಯತೆ ಮತ್ತು ವಿಶ್ವಾದಾದ್ಯಂತ ಒಃಂ ವಿದ್ಯಾರ್ಥಿಗಳ ಅಧ್ಯಯನ ಪಾಠಗಳಾಗಿವೆ.

ಡಬ್ಬಾವಾಲಗಳ ಯಶಸ್ಸು ಸರಳವಾದ ಆದರೆ ಚತುರತೆಯ ಬಣ್ಣ–ಕೋಡಿಂಗ್ ವ್ಯವಸ್ಥೆ, ಮುಂಬೈನ ಸ್ಥಳೀಯ ರೈಲುಗಳ ಮೇಲಿನ ಅವಲಂಬನೆ, ಕಟ್ಟುನಿಟ್ಟಾದ ಶಿಸ್ತು ಮತ್ತು ತಂಡದ ಕೆಲಸ ಮತ್ತು ಪರಸ್ಪರ ನಂಬಿಕೆಯ ಬಲವಾದ ಸಂಸ್ಕೃತಿಯಿಂದ ಹುಟ್ಟಿಕೊಂಡಿದೆ, ಇವರು ಯಾವುದೇ ತಂತ್ರಜ್ಞಾನದ ಅಗತ್ಯವಿಲ್ಲದೆ ತಮ್ಮ ವಿತರಣಾ ವ್ಯವಸ್ಥೆಯನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದ್ದಾರೆ.

ಇದು ಕಡಿಮೆ ತಂತ್ರಜ್ಞಾನದ ಊಟದ ವಿತರಣಾ ವ್ಯವಸ್ಥೆಯನ್ನು ಇದು ಎತ್ತಿ ತೋರಿಸುತ್ತದೆ,

ಈಗ ನಾನು ಹೇಳ ಹೊರಟಿರುವುದು ಮುಂಬೈನ ಡಬ್ಬವಾಲರ ಬಗ್ಗೆ ಅಲ್ಲ . ಇದೆ ಡಬ್ಬವಾಲ ಸಂಸ್ಕೃತಿ ದಶಕಗಳ ಕಾಲ ಮೈಸೂರಿನಲ್ಲಿಯೂ ಮೌನವಾಗಿ,ನಡೆದು ಕೊಂಡು ಬಂದಿತ್ತು . ಆದರೆ ಮೈಸೂರಿನ ಡಬ್ಬಾವಾಲರ ಬಗ್ಗೆ ನಿಮಗೆ ಎಲ್ಲೂ ಸಾಕಷ್ಟು ಮಾಹಿತಿಯಿಲ್ಲ , ಅದು ಮುಂಬಯಿ ಡಬ್ಬಾವಾಲರಂತೆ ಅಷ್ಟು ಪ್ರಖ್ಯಾತಿಯನ್ನು ಪಡೆಯಲಿಲ್ಲ . ಎಲೆ ಮರೆಯ ಕಾಯಿಯಂತೆ ದುಡಿದ ಕಾಯಕ ಯೋಗಿಗಳು ಇವರು .

ಇಂದು ಆ ಮೈಸೂರಿನ ಡಬ್ಬಾವಾಲಾರ ಕಾರ್ಯ , ಕಾಲ ಚಕ್ರದಲ್ಲಿ ಹುದುಗಿಹೋಗಿದೆ . ಬನ್ನಿ , ಮೈಸೂರು ಡಬ್ಬಾವಾಲರನ್ನೊಮ್ಮೆ ನೆನಪು ಮಾಡಿಕೊಳ್ಳೋಣ .

1920 ರಿಂದ 1980ರ ದಶಕಗಳವರೆಗೆ ಮೈಸೂರು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕೈಗಾರಿಕಾ ಚಟುವಟಿಕೆಗಳು ವೇಗವಾಗಿ ಬೆಳೆಯುತ್ತಿದ್ದವು . ಮೈಸೂರು ಸ್ಯಾಂಡಲ್ ಸೋಪ್ ಫ್ಯಾಕ್ಟರಿ, ಲ್ಯಾಂಪ್ ವರ್ಕ್ಸ್, ಪೇಪರ್ ಮಿಲ್ಸ್, ಕೆ . ಆರ್ . ಮಿಲ್, ಜಾವಾ ಫ್ಯಾಕ್ಟರಿ , ರೈಲ್ವೇ ವರ್ಕ್ ಶಾಪ್ , ಸಿಲ್ಕ್ ಫ್ಯಾಕ್ಟರಿ




ನಂಜನಗೂಡಿನ ಕೈಗಾರಿಕಾ ವಲಯದಲ್ಲಿದ್ದ ಸುಜಾತ ಟೆಕ್ಸಟೈಲ್ಸ್ ಮುಂತಾದವು ಸಾವಿರಾರು ಕಾರ್ಮಿಕರಿಗೆ ಬದುಕು ಕಟ್ಟಿಕೊಟ್ಟಿದ್ದವು .

ದೂರದ ಊರುಗಳಿಂದ ಮೈಸೂರಿಗೆ ಬಂದು ಕೆಲಸ ಮಾಡುವ ಕಾರ್ಮಿಕರಿಗೆ ಮನೆಯಲ್ಲಿನ ತಾಜಾ ಊಟವನ್ನು ತಲುಪಿಸುವುದು ಕಷ್ಟವಾಗುತ್ತಿತ್ತು. ಕಾರ್ಖಾನೆಗಳು ಬೆಳಗಿನ ಪಾಳಿಯನ್ನು ಮುಂಜಾನೆಯೇ ಪ್ರಾರಂಭಿಸುತ್ತಿದ್ದುದರಿಂದ , ಕಾರ್ಮಿಕರು ಮನೆಯಿಂದ ಊಟವನ್ನು ತೆಗೆದುಕೊಂಡು ಹೋಗುವುಡು ಕಷ್ಟವಾಗುತ್ತಿತ್ತು . ಈ ಅಗತ್ಯವನ್ನು ಗುರುತಿಸಿದ ಕೆಲವು ಕುಟುಂಬಗಳು , ಕಾರ್ಮಿಕರಿಗೆ ಅವರ ಮನೆಗಳಲ್ಲಿ ತಯಾರಿಸಿದ ಆಹಾರವನ್ನು ಕಾರ್ಖಾನೆಗಳ ಬಾಗಿಲಿಗೆ ತಲುಪಿಸುವ ಸೇವೆಯನ್ನು ಆರಂಭಿಸಿದವು. ಈ




ಸರಳ ಚಟುವಟಿಕೆಯೇ ಮೈಸೂರಿನ ಡಬ್ಬಾವಾಲರ ಪರಂಪರೆಯ ಮೂಲ.

ದಿನನಿತ್ಯದ ಕಾರ್ಯವಿಧಾನ : ಮೈಸೂರು ಡಬ್ಬಾವಾಲರ ದಿನ ಬೆಳಗ್ಗೆ 5ರಿಂದಲೇ ಚುರುಕಾಗುತ್ತಿತ್ತು. ಇವರು ಕಾರ್ಮಿಕರ ಮನೆಗಳಿಂದ ತಯಾರಾದ ಆಹಾರದ ಡಬ್ಬಾಗಳನ್ನು ಅವರ ಮನೆಗಳಿಂದ ಸಂಗ್ರಹಿಸುತ್ತಿದ್ದರು.

ಬೆಳಗ್ಗೆ 7 ರಿಂದ 8ರೊಳಗೆ ವಿ.ವಿ.ಮೊಹಲ್ಲಾ, ಚಾಮುಂಡಿಪುರಂ, ವಿದ್ಯಾರಣ್ಯಪುರಂ , ಅಶೋಕ ಪುರಂ , ನಂಜನಗೂಡು ಮುಂತಾದ ಪ್ರದೇಶಗಳಿಂದ ಡಬ್ಬಾಗಳನ್ನು ಸಂಗ್ರಹಿಸಿ, ಸೈಕಲ್, ಕಾಲ್ನಡಿಗೆ ಅಥವಾ ಬಸ್ ಮೂಲಕ ಕೈಗಾರಿಕಾ ವಲಯಗಳಿಗೆ ಸಾಗಿಸುತ್ತಿದ್ದರು. ಅವರ ಗುರಿ ಒಂದೇ ? ಮಧ್ಯಾಹ್ನ 12 ಗಂಟೆಯೊಳಗೆ ಮನೆ ಊಟ ನಿಖರವಾಗಿ ಕಾರ್ಮಿಕರಿಗೆ ತಲುಪಬೇಕು.

ಮಧ್ಯಾಹ್ನ ಊಟ ಮುಗಿದ ನಂತರ 2.30ರ ವೇಳೆಗೆ ಖಾಲಿ ಡಬ್ಬಾಗಳನ್ನು ಹಿಂತಿರುಗಿಸಿ ಕಾರ್ಮಿಕರ ಮನೆಗಳಿಗೆ ತರುವುದು ಅವರ ದಿನಚರಿ. ಮಳೆ, ಬಿಸಿಲು ಅಥವಾ ಮುಷ್ಕರ ? ಯಾವುದೂ ಅವರ ಸೇವೆಯನ್ನು ನಿಲ್ಲಿಸಲಾರದು ಎಂಬುದು ಅವರ ಹೆಮ್ಮೆ.

ಮೈಸೂರು ಡಬ್ಬಾವಾಲರ ಅತ್ಯಂತ ವಿಶೇಷ ಗುಣವೆಂದರೆ ? ಯಾವುದೇ ಬಣ್ಣದ ಕೋಡ್, ಗುರುತು ಚಿಹ್ನೆ, ಅಥವಾ ಕಾಗದದ ಟ್ಯಾಗ್‌ಗಳಿಲ್ಲದೆ ಕೇವಲ ನೆನಪಿನ ಆಧಾರದ ಮೇಲೆ ಕೆಲಸ ಮಾಡುತ್ತಿದ್ದರು. ಯಾವ ಡಬ್ಬಾ ಯಾರದು, ಯಾರು ಯಾವ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಾರೆ, ಡಬ್ಬಾಗಳನ್ನು ಕಾರ್ಖಾನೆಯ ಯಾವ ಗೇಟ್‌ನಲ್ಲಿ ಇಡಬೇಕು, ಇವೆಲ್ಲವನ್ನೂ ಅದ್ಭುತ ನಿಖರತೆಯಿಂದ ನೆನಪಿಟ್ಟುಕೊಂಡಿದ್ದರು.

ಮನೆಯಿಂದ ಹೊರಟ ಬಿಸಿ ಬಿಸಿ ಊಟವನ್ನು ಸುರಕ್ಷಿತವಾಗಿ ತಲುಪಿಸುವುದು ಅವರ ಧ್ಯೇಯ. ಸರಳ ಗ್ರಾಮೀಣ ಹಿನ್ನೆಲೆ ಮತ್ತು ಅಷ್ಟೇನೂ ವಿದ್ಯಾವಂತರಾಗಿರದ ಅವರ ಶ್ರಮ, ಸಮಯಪಾಲನೆ ಮತ್ತು ನೈತಿಕತೆ ಮೈಸೂರು ಕೆಲಸಗಾರರ ಜೀವನಕ್ಕೆ ಶಕ್ತಿಯೇ ಆಗಿತ್ತು.

ಮುಂಬೈ ಡಬ್ಬಾವಾಲರೊಂದಿಗೆ ಹೋಲಿಕೆ : ಮುಂಬೈ ಡಬ್ಬಾವಾಲರ ಪರಂಪರೆ 1890ರ ದಶಕದಿಂದಲೇ ದೊಡ್ಡ ನಗರ ಜೀವನದ ಅವಿಭಾಜ್ಯ ಭಾಗವಾಗಿದೆ. ಅವರು ಸೈಕಲ್, ಸ್ಥಳೀಯ ರೈಲು ಮತ್ತು ನಿಖರವಾದ ಬಣ್ಣದ ಕೋಡ್ ಬಳಸಿ ಅಚ್ಚುಕಟ್ಟಾಗಿ ಸಂಘಟಿತ ವ್ಯವಸ್ಥೆಯಲ್ಲಿ ಕೆಲಸಮಾಡುತ್ತಾರೆ. ಜಾಗತಿಕ ಮಟ್ಟದಲ್ಲಿ ಫೋರ್ಬ್ಸ್ ಪ್ರಶಂಸಿಸಿದ ಸೇವಾ ಮಾದರಿಯೂ ಅದು.

ಮೈಸೂರಿನ ಡಬ್ಬಾವಾಲರು ಇದರ ವಿರುದ್ಧವಾಗಿ ಸಣ್ಣ ಕುಟುಂಬ ಗುಂಪುಗಳಾಗಿ ಕಾರ್ಯನಿರ್ವಹಿಸುತ್ತಿದ್ದರು, ನೆನಪಿನ ಆಧಾರದ ಮೇಲೆ ಕೆಲಸ ಮಾಡುತ್ತಿದ್ದರು,

ಸೈಕಲ್, ಕಾಲ್ನಡಿಗೆ ಅಥವಾ ಬಸ್ ಮೇಲೆ ಅವಲಂಬಿತರಾಗಿದ್ದರು, ಮೈಸೂರಿನ ಕೈಗಾರಿಕಾ ವಲಯಗಳಲ್ಲೇ ತಮ್ಮ ಸೇವೆಯನ್ನು ಕೇಂದ್ರೀಕರಿಸಿದ್ದರು.


ಮುಂಬೈಯವರ ಕೆಲಸಕ್ಕೆ ಜಾಗತಿಕ ಮೆಚ್ಚುಗೆಯಿದ್ದರೂ, ಮೈಸೂರು ಡಬ್ಬಾವಾಲರ ಸೇವೆಗೆ ಜನಮನದ ಗೌರವವಿತ್ತು. ಮುಂಬೈಯಲ್ಲಿ ?ನಿಖರತೆಯ ಗಣಿತವಿದ್ದರೆ, ಮೈಸೂರಿನಲ್ಲಿ ?ಮಾನವೀಯತೆಯ ನಂಟು ಇತ್ತು.

ಸಾಮಾಜಿಕ ಪ್ರಭಾವ ಮತ್ತು ಕುಟುಂಬದ ಆರ್ಥಿಕತೆ : ಮೈಸೂರು ಡಬ್ಬಾವಾಲರು ಕೇವಲ ಊಟದ ಸೇವಾ ಪೂರೈಕೆದಾರರಷ್ಟೇ ಅಲ್ಲ ? ಅವರು ಮೈಸೂರಿನ ಸಮಾಜ ಮೃದುವಾದ ಬೆಂಬಲ ವ್ಯವಸ್ಥೆಯಾಗಿದ್ದರು.

ಇವರಲ್ಲಿ ಬಹಳಷ್ಟು ಹೆಂಗಸರು ಡಬ್ಬವಾಲಾ ಕೆಲಸ ಮಾಡುತ್ತಿದ್ದರು .

ತಲೆಯ ಮೇಲೆ ಸಿಂಬಿ ಇಟ್ಟು ಅದರ ಮೇಲೆ ದೊಡ್ಡ ಬಿದಿರಿನ ಬುಟ್ಟಿಯಲ್ಲಿ ಊಟದ ಡಬ್ಬಗಳನ್ನು ಹೊತ್ತು ಕಾರ್ಮಿಕರಿಗೆ ಸರಿಯಾದ ತಲುಪಿಸುತ್ತಿದ್ದರು. ಬಹುತೇಕ ಗಂಡಸರು ಸೈಕಲ್ ಮೇಲೆ ಆಹಾರ ತಲುಪಿಸುತ್ತಿದ್ದರು.

ಎಷ್ಟೋ ಗೃಹಿಣಿಯರಿಗೆ ಇದು ಆದಾಯದ ಮೂಲವಾಗಿತ್ತು. ಕಾರ್ಖಾನೆ ಕೆಲಸಗಾರರಿಗೆ ಮನೆಯ ರುಚಿಯ ಆಹಾರ ತಲುಪುವುದರಿಂದ ಅವರ ಆರೋಗ್ಯ ಕೂಡ ಉತ್ತಮವಾಗಿರುತ್ತಿತ್ತು. ಆ ಕಾಲದಲ್ಲಿ ಹೋಟೆಲ್ ಊಟ ಜನ ಅಷ್ಟು ಇಷ್ಟ ಪಟ್ಟು ತಿನ್ನುತ್ತಿರಲಿಲ್ಲ , ಹೊರಗಡೆ ತಿನ್ನುವುದು ಹವ್ಯಾಸವಾಗಿರಲಿಲ್ಲ . ಹೈಜಿನ್ ಸಮಸ್ಯೆಗಳೂ




ಹೆಚ್ಚಾಗಿದ್ದುದರಿಂದ ಈ ಸೇವೆ ಸಾವಿರಾರು ಕಾರ್ಮಿಕರಿಗೆ ಸಹಾಯವಾಗಿತ್ತು.

ಇದು ?ಸ್ವಯಂ ಉದ್ಯೋಗ?ದ ಸುಂದರ ಮಾದರಿಯೂ ಆಗಿತ್ತು ? ಕೆಲವರು ದಿನಕ್ಕೆ 40?50 ಡಬ್ಬಾಗಳವರೆಗೆ ತಲುಪಿಸುತ್ತಿದ್ದರು. ಆಗಿನ ಕಾಲದಲ್ಲಿ ಒಬ್ಬ ಕಾರ್ಮಿಕರಿಗೆ ತಿಂಗಳಿಗೆ 10–20 ರೂಪಾಯಿ ಶುಲ್ಕಕ್ಕೆ ಅವರು ಈ ಸೇವೆ ಒದಗಿಸುತ್ತಿದ್ದರು

ಕಾಲಬದಲಾವಣೆ ಮತ್ತು ಸೇವೆಯ ಕುಸಿತ : 1990ರ ದಶಕದ ನಂತರ ಕೈಗಾರಿಕೆಗಳಲ್ಲಿ ಕ್ಯಾನ್ಟೀನ್ ವ್ಯವಸ್ಥೆ ರೂಪುಗೊಂಡಿತು. ಅದರ ನಂತರ ಹೋಟೆಲ್ಗಳು, ಹೋಮ್ ಡೆಲಿವರಿ ಮತ್ತು ಫುಡ್ ಆಪ್‌ಗಳು ವೇಗವಾಗಿ ಬೆಳೆಯುತ್ತಿದ್ದಂತೆ ಮೈಸೂರು ಡಬ್ಬಾವಾಲರ ಸೇವೆ ನಿಧಾನವಾಗಿ ಕುಗ್ಗಿತು.

ಮುಂಬೈ ಮಾದರಿ ಮತ್ತು ಮೈಸೂರು ಸ್ಫೂರ್ತಿ : ಮುಂಬೈ ಡಬ್ಬಾವಾಲರು ಜಗತ್ತಿನ ಪ್ರಚಾರವನ್ನು ಪಡೆದರೆ, ಮೈಸೂರು ಡಬ್ಬಾವಾಲರು ಮೌನವಾಗಿ ಜನರ ಹಸಿವು ತಣಿಸಿದರು.

ಮುಂಬೈಯಲ್ಲಿ ಸುಧಾರಿತ ನಿರ್ವಹಣಾ ವ್ಯವಸ್ಥೆಯಿದ್ದರೆ, ಮೈಸೂರಿನಲ್ಲಿ ಕರ್ತವ್ಯದ ನಿಷ್ಠೆ ಮತ್ತು ಸರಳತೆ ಇತ್ತು.

ಎರಡೂ ಪರಂಪರೆಗಳು ಭಾರತೀಯ ಶ್ರಮಜೀವಿಗಳ ಜೀವನದ ಎರಡು ಮುಖಗಳು ? ಒಂದು ಮಹಾನಗರದ ವೇಗಕ್ಕೆ ತಕ್ಕ ನಿಖರತೆ, ಮತ್ತೊಂದು ಸಣ್ಣ ನಗರದ ಮೃದು ಮಾನವೀಯತೆ.

ಮೈಸೂರು ಡಬ್ಬಾವಾಲರು ಕೇವಲ ಆಹಾರ ಪೂರೈಕೆದಾರರಲ್ಲ; ಅವರು ಮೈಸೂರಿನ ಸಾಮಾಜಿಕ ಇತಿಹಾಸದ ಒಂದು ಮೌನವಾದ ಅಧ್ಯಾಯ. ಅವರ ಸೇವೆಯಲ್ಲಿದ್ದುದು ಸಮಯಪಾಲನೆ, ವಿಶ್ವಾಸ, ಸರಳತೆ ಮತ್ತು ಮಾನವೀಯತೆ.

ಇಂದು ಮೈಸೂರಿನ ಡಬ್ಬವಾಲರು ಬಹುವಾಗಿ ಇಲ್ಲದಿದ್ದರೂ , ಅವರ ಕಾರ್ಯದ ನೆನಪು, ಅವರ ಸೈಕಲ್‌ನ ಗಂಟೆ ಶಬ್ದ, ಸಂತೋಷದಿಂದ ಡಬ್ಬಾ ಸ್ವೀಕರಿಸುವ ಕಾರ್ಮಿಕರ ಮುಖ ? ಇವು ಮೈಸೂರಿನ ಹಳೆಯ ದಿನಗಳ ಮಧುರ ಚಿತ್ರಗಳಾಗಿವೆ. ಮುಂಬೈ ಡಬ್ಬಾವಾಲರು ಜಗತ್ತಿನ ಪ್ರಶಂಸೆಯನ್ನು ಪಡೆದರೆ, ಮೈಸೂರು ಡಬ್ಬಾವಾಲರು ಜನರ ಹೃದಯ ಗೆದ್ದರು. ಎರಡೂ ಪರಂಪರೆಗಳು ಭಾರತದ ಶ್ರಮಜೀವಿ ಸಂಸ್ಕೃತಿಯ ಅಮೂಲ್ಯ ಅಸ್ತಿತ್ವ.



ಸ್ವಾಮಿನಾಥನ್
ಬೆಂಗಳೂರು

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,